# ಮೂಲ ಶಿಕ್ಷಣದಲ್ಲಿ ಡಿಪ್ಲೊಮಾ
# (ಡಿ.ಎಲ್.ಇಡಿ)

### ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಸಂಬಂಧಿ ಕಾರ್ಯ ಪ್ರಕ್ರಿಯೆಗಳು

## ವಿಭಾಗ –3
## ಒಳಗೊಳ್ಳುವ ಶಿಕ್ಷಣ


## ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ
**ಎ–24/25, ಇನ್‌ಸ್ಟಿಟ್ಯೂಷನಲ್ ಏರಿಯಾ, ಸೆಕ್ಟರ್–62 ನೋಯಿಡಾ,**
**ಗೌತಮ ಬುದ್ಧ ನಗರ, ಉತ್ತರ ಪ್ರದೇಶ –201309**

**ಜಾಲತಾಣ : www.nios.ac.in**

| ಪರಿಣಿತರ ಸಮಿತಿ | | |
|---|---|---|
| ಡಾ॥ ಸಿತಾಂಶು ಎಸ್.ಜೆನಾ<br>ಅಧ್ಯಕ್ಷರು, ಎನ್.ಐ.ಓ.ಎಸ್. ನೊಯಿಡಾ<br>ಶ್ರೀ ಬಿ.ಕೆ. ತ್ರಿಪಾಠಿ<br>ಭಾ.ಆ.ಸೆ. ಪ್ರಮುಖ ಸಚಿವರು,<br>ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ,<br>ಝಾರ್ಖಂಡ್ ಸರ್ಕಾರ, ರಾಂಚಿ<br>ಪ್ರೋ ಎ.ಕೆ. ಶರ್ಮಾ<br>ಭೂತಪೂರ್ವ ನಿರ್ದೇಶಕರು ಎನ್‌ಸಿಇಆರ್‌ಟಿ<br>ನವದೆಹಲಿ<br>ಪ್ರೋ.ಎಸ್.ವಿ.ಎಸ್.ಚೌಧರಿ<br>ಭೂತಪೂರ್ವ ಉಪಾಧ್ಯಕ್ಷರು ಎನ್.ಸಿಟಿ.ಇ.<br>ನವದೆಹಲಿ<br>ಪ್ರೋ.ಸಿ.ಬಿ.ಶರ್ಮಾ<br>ಶಾಲಾ ಶಿಕ್ಷಣ ಇಂದಿರಾಗಾಂಧಿ ರಾಷ್ಟ್ರೀಯ<br>ಮುಕ್ತ ವಿಶ್ವವಿದ್ಯಾಲಯ, ನವದೆಹಲಿ<br>ಪ್ರೋ. ಎಸ್.ಸಿ. ಅಗರ್‌ಕರ್<br>ಪ್ರಾಧ್ಯಾಪಕರು ಹೋಲಿಭಾಭಾ ವಿಜ್ಞಾನ ಶಿಕ್ಷಣ<br>ಕೇಂದ್ರ, ಮುಂಬಯಿ | ಪ್ರೋ.ಸಿ.ಎಸ್. ನಾಗರಾಜು<br>ಭೂತಪೂರ್ವಪ್ರಾಚಾರ್ಯರು<br>ಆರ್‌ಐ.ಇ. (ಎನ್.ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ದೊರೈಸ್ವಾಮಿ<br>ಭೂತಪೂರ್ವ ಮುಖ್ಯಸ್ಥರು, ಶಿಕ್ಷಕರ ಶಿಕ್ಷಣ ಮತು<br>ವಿಸ್ತರಣಾ ವಿಭಾಗ, ಎನ್‌ಸಿಇಆರ್ಟಿ ನವದೆಹಲಿ<br>ಪ್ರೊ. ಬಿ. ಫಾಲಚಂದ್ರ<br>ಭೂತಪೂರ್ವ ಮುಖ್ಯಸ್ತರು, ಶಿಕ್ಷಣ ವಿಭಾಗ,<br>ಹಾಗೂ ಭೋಧನಾ ವಿಭಾಗದ ವರಿಷ್ಟರು ಆರ್‌ಇಐ<br>(ಎನ್‌ಸಿಇಆರ್‌ಟಿ) ಮೈಸೂರು<br>ಪ್ರೋ. ಕೆ.ಕೆ. ವಸಿಷ್ಠ<br>ಭೂತಪೂರ್ವ ಮುಖ್ಯಸ್ಥರು, ಡಿಇಇ,<br>ಎನ್‌ಸಿಇಜರ್‌ಟಿ, ನವದೆಹಲಿ<br>ಪ್ರೊ. ವಸುಧಾ ಕಾಮತ್<br>ಉಪಕುಲಪತಿಗಳು ಎಸ್‌ಎನ್‌ಡಿಟಿ ಮಹಿಳಾ<br>ವಿಶ್ವವಿದ್ಯಾಲಯ, ಮುಂಬಯಿ | ಡಾ. ಹೂಮ ಮಸೂದ್<br>ಶಿಕ್ಷಣ ತಜ್ಞರು ಯುನಿಸ್ಕೋ ನವದೆಹಲಿ<br>ಪ್ರೊ॥ ಪವನ್ ಸುಧೀರ್<br>ಮುಖ್ಯಸ್ಥರು, ಕಲಾ ಮತ್ತು ಕಲಾತ್ಮಕ ಶಿಕ್ಷಣ<br>ವಿಭಾಗ, ಎನ್‌ಸಿಇಆರ್‌ಟಿ, ನವದೆಹಲಿ<br>ಶ್ರೀ ಬಿನಯ ಪಟ್ನಾಯಕ್<br>ಶಿಕ್ಷಣ ತಜ್ಞರು, ಯುಎನ್‌ಐಸಿಇಎಫ್,<br>ರಾಂಚಿ<br>ಡಾ. ಕುಲದೀಪ್ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ) ಎನ್‌ಐಓಎಸ್,<br>ನೊಯಿಡಾ<br>ಪ್ರೋ. ಎಸ್.ಪಿ. ಪಾಂಡಾ<br>ವರಿಷ್ಠ ಸಮಾಲೋಚಕರು (ಶೈಕ್ಷಣಿಕ)<br>ಡಾ॥ ಕುಜನ್ ಬಲಾ<br>ಕಾರ್ಯನಿರ್ವಾಹಣಾಧಿಕಾರಿಗಳು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ. |

| ಪಠ್ಯಕ್ರಮ ಸಂಯೋಜಕರು ಮತ್ತು ಸಂಪಾದಕರು |
|---|
| ಪ್ರೋ॥ ಎಂ.ಎಂ. ಮೊಹಂತಿ ಭೂತಪೂರ್ವ ನಿರ್ದೇಶಕರು ಎಸ್‌ಐಇಎಂಎಟಿ, ಒಡಿಸಾ |

| ಪಠ್ಯಲೇಖರು | | |
|---|---|---|
| ಡಾ॥ ಮೊಹಿತ್ ಮೋಹನ್ ಮೊಹಂತಿ<br>ನಿವೃತ್ತ ನಿರ್ದೇಶಕರು ಎಸ್‌ಐಇಎಂಎಟಿ<br>ಒಡಿಶಾ<br>ಡಾ॥ ಪರಶುರಾಮ್ ರಾಯಸಿಂಗ್<br>ನಿವೃತ್ತ ರೀಡರ್ (ಶಿಕ್ಷಣ)<br>ಎನ್.ಡಿ.ಡ್ಲ್ಯೂ. ಅಧ್ಯಾಪಕ ಶಿಕ್ಷಣ<br>ಮಹಾವಿದ್ಯಾಲಯ, ಭುವನೇಶ್ವರ<br>ಶ್ರೀ ಸುದರ್ಶನ ಸಂತಾರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಸೊನೆಪುರ<br>ಶ್ರೀ ತಪಸ್ ಕುಮಾರ್ ನಾಯಕ್<br>ವರಿಷ್ಟ ಅಧ್ಯಾಪಕರ ಶಿಕ್ಷಕರು<br>ಅಧ್ಯಾಪಕ ಶಿಕ್ಷಣ ನಿರ್ದೇಶಾನಾಲಯ ಮತ್ತು<br>ಎಸ್‌ಸಿಇಆರ್‌ಟಿ, ಒಡಿಶಾ, ಭುವನೇಶ್ವರ<br>ಶ್ರೀಮತಿ. ಸುಚಪ್ರವಾ ಮೊಹಾಪಾತ್ರ<br>ವರಿಷ್ಟ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ.ಟಿ. ಕಟಕ್ ನರಸಿಂಗಪುರ್ | ಡಾ॥ ಜಿ.ಸಿ. ನಂದಾ<br>ಮುಖ್ಯಸ್ಥರು (ಶಿಕ್ಷಣ) , ಬಿ.ಜೆ.ಬಿ ಸ್ವಾಯುಕ್ತ<br>ಮಹಾವಿದ್ಯಾಲಯ ಭುವನೇಶ್ವರ<br>ಶ್ರೀ ಕಾರ್ತಿಕೇಶ್ವರ ಜೆಹರಾ<br>ನಿವೃತ್ತವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇ.ಟಿ ಕೊರಾಪುಟ್ ಜೆಪುರ್<br>ಶ್ರೀಮತಿ. ಲಿಪಿಕಾ ಸಾಹು<br>ವರಿಸ್ಠ ಅಧ್ಯಾಪಕ ಶಿಕ್ಷಕರು<br>ಡಿ.ಐ.ಇ. ಟಿ. ನಯಾಘರ್ ರಜಸುನಖಾಲ<br>ಶ್ರೀ ಪೂರ್ಣಚಂದ್ರಬ್ರಹ್ಮ<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಜಿಲ್ಲಾ ಸಂಪನ್ಮೂಲ ಕೇಂದ್ರ ಚೌದ್ವ<br>ಡಾ॥ ರಾಜೇಂದ್ರ ಕುಮಾರ ನಾಯಕ್<br>ಉಪನ್ಯಾಸಕರು ಶಿಕ್ಷಣ ವಿಭಾಗ<br>ರೆರ್ವೆಷಾ, ವಿಶ್ವವಿದ್ಯಾಲಯ ಕಟಕ್ | ಶ್ರೀಮತಿ ಚಂದ್ರಿಕಾ ನಾಯಕ್<br>ವರಿಷ್ಠ ಅಧ್ಯಾಪಕರ ಶಿಕ್ಷಕರು<br>ಡಿ.ಐ.ಇಟಿ. ನವಘರ್ ರಾಜಸುಂಬಾಲ<br>ಡಾ ಶ್ರೀಮತಿ. ಸುಸಂಧ್ಯಾ ಮೊಹಂತಿ<br>ಪ್ರಾಂಶುಪಾಲರು ಡಿ.ಐ.ಇಟಿ. ಅಂಗುಲ್<br>ಛೆಂಡಿಪಾಡ<br>ಶ್ರೀ ಪ್ರಶಾಂತಕುಮಾರ ರಥ್<br>ಪ್ರಾಂಶುಪಾಲರು ಡಿ.ಐ.ಇಟಿ. ಪುರಿ<br>ಡಾ॥ ದುರ್ಗಾಚರಣ ರಾಣಾ<br>ನಿವೃತ್ತರೀಡರ್ (ಶಿಕ್ಷಣ)<br>ಭದ್ರಕ್ ಸ್ವಾಯುತ್ತ ಮಹಾವಿದ್ಯಾಲಯ ಭದ್ರಕ್<br>ಶ್ರೀ ಅನಂತ ಕಿಶೋರ ಸ್ವಾಯಿ<br>ಯೋಜನ ಪ್ರಬಂಧಕರು ಯುವ ಮತ್ತು<br>ಸಾಮಾಜಿಕ ಅಭಿವೃದ್ಧಿ<br>ಕೇಂದ್ರ (ಸಿವೈಎಸ್‌ಡಿ) ಭುವನೇಶ್ವರ |

| ವಿಷಯ ಸಂಪಾದಕರು | ಭಾಷಾ ಸಂಪಾದಕರು |
|---|---|
| ಡಾ॥ ಸುಶ್ಮಿತಾ ಮಿತ್ರ<br>ಭೂತಪೂರ್ವ ನಿರ್ದೇಶಕರು<br>ಎಸ್‌ಎಸ್‌ಎಸ್. ಎಂಐಓಕೆಎಸ್. ನೋಯಿಡಾ. | ಡಾ. ಎ.ಡಿ. ತಿವಾರಿ<br>ಸಂಯುಕ್ತ ಪ್ರಾಧ್ಯಾಪಕರು ಶಿಕ್ಷಣ ಸರ್ವೇಕ್ಷಣ ವಿಭಾಗ<br>ಎನ್‌ಸಿಇಆರ್‌ಟಿ ನವದೆಹಲಿ |

| ಕಾರ್ಯಕ್ರಮ ಸಂಯೋಜಕರು | | |
|---|---|---|
| ಡಾ॥ ಕುಲದೀಪ ಅಗರವಾಲ್<br>ನಿರ್ದೇಶಕರು (ಶೈಕ್ಷಣಿಕ)<br>ಎನ್.ಐ.ಓ.ಎಸ್. ನೊಯಿಡಾ | ಪ್ರೋ॥ ಎಸ್.ಪಿ. ಪಾಂಡ<br>ವರಿಷ್ಠ ಸಮಾಲೋಚಕರು (ಅಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಘ ಎನ್.ಓ.ಎಸ್. ನೊಯಿಡಾ | ಡಾ॥ ಕಂರ್ಚ್ ಬಾಲಾ<br>ಕಾರ್ಯಪಾಲಕ ಅಧಿಕಾರಿ (ಆಧ್ಯಾಪಕ ಶಿಕ್ಷಣ)<br>ಶೈಕ್ಷಣಿಕ ವಿಭಾಗ. ಎನ್.ಐ.ಓ.ಎಸ್. ನೊಯಿಡಾ |

| ಮುಖಪುಟ ಪರಿಕಲ್ಪನೆ ಮತ್ತು ವಿನ್ಯಾಸ | ಬೆರಳಚ್ಚು | ಕಛೇರಿ ಸಹಾಯಕರು |
|---|---|---|
| ಶ್ರೀ. ಖಿ.ಎನ್. ಉಪ್ರೇತಿ.<br>ಪ್ರಕಾಶಣ ಅಧಿಕಾರಿ, ಮುದ್ರಣ, ಎನ್‌ಐಓಎಸ್.<br>ನೊಯಿಡಾ<br>ಶ್ರೀ ಧರ್ಮಾನಂದ ಜೋಶಿ<br>ಕಾರ್ಯಪಾಲಕ ಸಹಾಯಕರು, ಮುದ್ರಣ<br>ಎನ್.ಐ.ಓ.ಎಸ್. ನೊಯಿಡಾ | ಶಿವಂ ಗ್ರಾಫಿಕ್ಸ್<br>431, ರಿಶಿನಗರ್, ದೆಹಲಿ–34 | ಶ್ರೀಮತಿ. ಸುಷ್ಮಾ<br>ಕಿರಿಯ ಸಹಾಯಕರು, ಶೈಕ್ಷಣಿಕ ವಿಭಾಗ,<br>ಎನ್.ಐ.ಓ.ಎಸ್. ನೊಯಿಡಾ. |

## ಅಧ್ಯಕ್ಷರ ಸಂದೇಶ .....

### ಎನ್.ಐ.ಓ.ಎಸ್ ಗೆ ಸ್ವಾಗತ

*ಪ್ರಿಯ ಕಲಿಕಾರ್ಥಿ*

ರಾಷ್ಟ್ರೀಯ ಮತ್ತು ವಿದ್ಯಾಲಯ ಶಿಕ್ಷಣ ಸಂಸ್ಥೆಯ (ಎನ್ಐಓಎಸ್) ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಡಿಯಲ್ಲಿರು ಒಂದು ಸ್ವಾಯುಕ್ತ ಸಂಸ್ಥೆಯಾಗಿದೆ. ಇದು ವಿಶ್ವದಲ್ಲೇ ಅತಿದೊಡ್ಡ ಮುಕ್ತ ವಿದ್ಯಾಲಯ ಶಿಕ್ಷಣ ವ್ಯವಸ್ಥೆಯಾಗಿದ್ದು, ಸುಮಾರು 2.02 ದಶಲಕ್ಷ್ ಕಲಿಕಾರ್ಥಿಗಳಿದ್ದು, ಮಾದ್ಯಮಿಕ ಮತ್ತು ಉಚ್ಚಮಾದ್ಯಮಿಕ ಹಂತಗಳಲ್ಲಿದ್ದಾರೆ. ಎನ್.ಐ.ಓ.ಎಸ್. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲ ಹೊಂದಿದದು, 15 ಕ್ಷೇತ್ರೀಯ ಕೇಂದ್ರಗಳು 2 ಉಪಕೇಂದ್ರಗಳು ಮತ್ತು ಸುಮಾರು 5000 ಅಧ್ಯಯನ ಕೇಂದ್ರಗಳನ್ನು ಶೈಕ್ಷಣಿಕ ಮತ್ತು ವೃತ್ತಿಪರ ಕಾರ್ಯಕ್ರಮಗಳನ್ನು ದೇಶದ ಒಳಗೂ ಮತ್ತು ಹೊರಗೂ ಒದಗಿಸಲು ಅನುಕೂಲ ಮಾಡಿಕೊಟ್ಟಿದೆ. ಇದು ಕಲಿಕಾರ್ಥಿ ಕೇಂದ್ರಿತವಾಗಿದ್ದು ಗುಣಮಟ್ಟದ ಶಿಕ್ಷಣ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿಯನ್ನು ಮುಕ್ತ ಮತ್ತು ದೂರಶಿಕ್ಷಣದ ಮೂಲಕ ಒದಗಿಸುತ್ತಿದೆ. ಕಾರ್ಯಕ್ರಮಗಳನ್ನು ಮುದ್ರಿತ ಕಲಿಕಾ ಸಾಮಗ್ರಿ ಮತ್ತು ಮುಖಾಮುಖಿ ಪಾಠ್ಯ ವಿಧಾನ (ವೈಯಕ್ತಿಕ ಸಂಪರ್ಕ ಕಾರ್ಯಕ್ರಮ) ಮತ್ತು ದೃಶ್ಯ ಶ್ರವಣ ಮುದ್ರಿಕೆಗಳು, ರೇಡಿಯೋ ಬಿತ್ತರಣೆ, ದೂರದರ್ಶನ ಬಿತ್ತರಣೆ, ಮುಂತಾದ ಮಾಹಿತಿ ತಂತ್ರಜ್ಞಾನದ ವಿಧಾನಗಳನ್ನು ಬಳಸಿ ಒದಗಿಸಲಾಗುತ್ತದೆ.

ಈಗ, ಎನ್.ಐ.ಓ.ಎಸ್.ಗೆ ಕಾರ್ಯನಿರತರಾಗಿರುವ ತರಬೇತಿ ರಹಿತ, ಪ್ರಾಥಮಿಕ ಹಂತದಲ್ಲಿರುವ ಶಿಕ್ಷಕರುಗಳಿಗೆ ತರಬೇತಿ ನೀಡುವ ಪ್ರಾಧಿಕಾರವನ್ನು ಕೊಡಲಾಗಿದೆ.

ಡಿ.ಇಎಲ್.ಇಡ್ ತರಬೇತಿಯ ಸಾಮಾಗ್ರಿಗಳನ್ನು ಎನ್.ಐ.ಓ.ಎಸ್‌ಗೆ ಸಂಸ್ಥೆಯು ಇದೇ ಕ್ಷೇತ್ರದಲ್ಲಿ ನಿರತವಾಗಿರುವ ಇತರೆ ಸಂಸ್ಥೆಗಳೊಡಗೂಡಿ, ಪ್ರಾಥಮಿಕ ಶಿಕ್ಷಕರು, ಮೂಲಕ ಶಿಕ್ಷಣದಲ್ಲಿ ಡಿಪ್ಲೊಮಾ ಪಡೆಯಲು ಅನುವಾಗುವಂತೆ ನವೀನವೂ, ಆವಿಷ್ಕಾರಿಯೂ ಸವಾಲಯ ಯುಕ್ತವೂ ಆದ 2 ವರ್ಷಗಳ ಪಠ್ಯಕ್ರಮವನ್ನು ಆರ್‌ಟಿಇ 2009 ಕ್ಕೆ ಅನುಗುಣವಾಗಿ ತಯಾರಿಸಲಾಗಿದ್ದು, ಪ್ರಸ್ತುತಪಡಿಸಲಾಗಿದೆ.

ಈ. ಡಿ.ಇಲ್.ಇಡ್ ಪಾಠ್ಯಕ್ರಮಕ್ಕೆ ನಿಮ್ಮನ್ನು ಸ್ವಾಗತಿಸಲು ನನಗೆ ಹರ್ಷವಾಗುತ್ತಿದೆ. ನೀವು ನಿಮ್ಮ ರಾಜ್ಯಗಳಲ್ಲಿನ ಪ್ರಾಥಮಿಕ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ನೀಡುತ್ತಿರುವ ಕೊಡುಗೆಯನ್ನು ಮೆಚ್ಚುತ್ತೇನೆ. ಆರ್.ಟಿ.ಈ. 2009 ರ ಪ್ರಕಾರ ಎಲ್ಲಾ ಶಾಲಾ ಶಿಕ್ಷಕರು ವೃತ್ತಿಪರ ತರಬೇತಿ ಪಡೆಯವುದು. ಅತ್ಯವಶ್ಯವಾಗಿದೆ. ನೀವು ಶಿಕ್ಷಕರಾಗಿ ಗಳಿಸಿರುವ ಅನುಭವದಿಂದ ಸಾಕಷ್ಟು ಕೌಶಲ್ಯಗಳನ್ನು ಉತ್ತಮ ಶಿಕ್ಷಕರಾಗಲು ಕಲಿತಿರಬಹುದು. ಕಾನೂನು ಪ್ರಕಾರ ಈಗ ನೀಡುವ ತರಬೇತಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮುಗಿಸುವುದು ಕಡ್ಡಾಯವಾಗಿದೆ.

ನೀವು ಈವರೆವಿಗೆ ಕಲೆಹಾಕಿರುವ ಜ್ಞಾನ ಮತುತ ಅನುಭವಗಳು ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲು ಅನುಕೂಲವಾಗುತ್ತವೆ ಎಂಬುದು ನನಗೆ ತಿಳಿದಿದೆ.

ಈ ಡಿ.ಇಎಲ್.ಇಡಿ, ಕಾರ್ಯಕ್ರಮವು, ಮುಕ್ತ ದೂರ ಕಲಿಕಾ ರೀತಿಯಲ್ಲಿದ್ದು ನಿಮಗೆ ನಿಮ್ಮ ಶಿಕ್ಷಕ ವೃತ್ತಿ ಕಾರ್ಯಕ್ಕೆ ಯಾವ ರೀತಿಯಲ್ಲೂ ಅಡಚಣೆಯಾಗದಂತೆ ವೃತ್ತಿಪರ ತರಬೇತಿ ಪಡೆಯುವ ನಿಟ್ಟಿನಲ್ಲಿ ಹೇರಳವಾದ ಅವಕಾಶಗಳನ್ನು ಒದಗಿಸುತ್ತದೆ.

ಅಭಿವೃದ್ಧಿ ಪಡಿಸಿರುವ ಸ್ವ–ಕಲಿಕಾ ಸಾಮಗ್ರಿಗಳು , ನಿಮ್ಮ ಉಪಯೋಗಕ್ಕಾಗಿಯೇ ಸಿದ್ಧಪಡಿಸಿದ್ದು, ನೀವು ಒಬ್ಬ. ಅತ್ಯುತ್ತಮ ಶಿಕ್ಷಕರಾಗಲು ಅರಿವು ಮೂಡಿಸುವುದಲ್ಲದೆ, ನೀವು ವೃತ್ತಿಪರ ಅರ್ಹತೆ ಪಡೆಯಲು ಸಹಕಾರಿಯಾಗಿದೆ.

ಈ ಘನಕಾರ್ಯದಲ್ಲಿ ನಿಮಗೆ ಅದೃಷ್ಟ ಒಲಿಯಲಿ!!

ಅಧ್ಯಕ್ಷರು (ಎನ್.ಐ.ಓ.ಎಸ್)

ಅಂಕಾಂಶಗಳು (8=6+2)

| ವಿಭಾಗ | ಪಠ್ಯಭಾಗ | ಪಠ್ಯಭಾಗದ ಹೆಸರು | ಅಧ್ಯಯನ ಕಾಲಾವಧಿ ಗಂಟೆಗಳು | | ಪ್ರಾಯೋಗಿಕ ಅಧ್ಯಯನ |
|---|---|---|---|---|---|
| | | | ವಿಷಯವಸ್ತು | ಚಟುವಟಿಕೆ | |
| ವಿಭಾಗ–1 ಕಲಿಕಾ ಮತ್ತು ಬೋಧನಾ ಪ್ರಕ್ರಿಯೆಗಳು | ಯು1 | ಶಾಲಾ ಪೂರ್ವ ದಿನಗಳಲ್ಲಿ ಕಲಿಕಾ ಮತ್ತು ಭೋಧನೆ | 6 | 4 | ನಿಮ್ಮ ಸ್ವಂತ ಅನುಭವದಿಂದ ಶಿಕ್ಷಕರು ಅನುಕೂಲಕಾರಕರು ಎಂಬುದನ್ನು ಗುರುತಿಸುವಲ್ಲಿ ಶಿಕ್ಷಕರ ಪಾತ್ರ |
| | ಯು2 | ಕಲಿಕೆ ಮತ್ತು ಭೋಧನೆಗೆ ಮಾರ್ಗೋಪಾಯಗಲು | 8 | 5 | ನಿಮ್ಮ ಸಹೋದ್ಯೋಗಿಗಳ ವರ್ತನೆಯಿಂದ ಕಲಿಕಾರ್ಥಿ ಕೇಂದ್ರಿತ ಮಾರ್ಗೋಪಾಯದ ವಿಶಿಷ್ಟತೆಗಳನ್ನು ಗುರುತಿಸುವಿಕೆ. |
| | ಯು3 | ಕಲಿಕೆ ಮತ್ತು ಭೋಧನೆಯ ವಿಧಾನಗಳು | 7 | 4 | ಕಲಿಕಾ ಮತ್ತು ಭೋಧನಾ (ಕೆಡಿಎಪ್) ಪದ್ಧತಿಗಳಲ್ಲಿನ ವಿವಿಧ ವಿಧಾನಗಳಲ್ಲಿನ ವ್ಯತ್ಯಾಸಗಳನ್ನು ಅರಿಯುವುದು. |
| | ಯು4 | ಕಲಿಕೆ ಮತ್ತು ಕಲಿಕಾರ್ಥಿ ಕೇಂದ್ರಿತ ಮಾಗೋಪಾಯಗಳು ಮತ್ತು ವಿಧಾನಗಳು | 9 | 7 | ಪಠ್ಯಭಾಗವನ್ನು ನಮೂದಿಸಿರುವ ವಿವಿಧ ಮಾರ್ಗೋಪಾಯಗಳನ್ನು ಉಪಯೋಗಿಸುವಾಗ ಬರುವ ತರಗತಿ ಪ್ರಬಂಧನ (ನಿರ್ವಹಣೆ) ಸಮಸ್ಯೆಗಳ ಬಗ್ಗೆ ವಿಚಾರ ಸಂಕಿರಣ |
| ವಿಭಾಗ2 ಕಲಿಕಾ ಹಾಗು ಬೋಧನಾ ಪ್ರಕ್ರಿಯೆಗಳ ಪ್ರಬಂಧನೆ | ಯು5 | ತರಗತಿಯ ಪ್ರಕ್ರಿಯೆಗಳ ನಿರ್ವಹಣೆ (ಪ್ರಬಂಧನೆ) | 6 | 3 | ಶಿಕ್ಷಕ– ಸಹೋದ್ಯೋಗಿಗಳಿಂದ, ತರಗತಿಯಲ್ಲಿ ಅನುತ್ತೇಜಕಾರಿ ಕ್ರಿಯೆಗಳು ಮತ್ತು ಸಾಮಗ್ರಿಗಳು ಗುರುತಿಸುವಿಕೆ. |
| | ಯು6 | ಭೋಧನಾ ಮತ್ತು ಕಲಿಕಾ ಸಾಮಗ್ರಿಗಳು | 7 | 3 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ಕಲಿಕಾ – ಭೋಧನಾ ಸಾಮಗ್ರಿಗಳ ವಿಂಗಡನೆ |
| | ಯು7 | ವಿವಿಧ ವರ್ಗ ಮತ್ತು ವಿವಿಧ ಹಂತಗಳಲ್ಲಿನ ಪರಿಸ್ಥಿತಿಗಳ ನಿರ್ವಹಣೆ | 8 | 5 | ಬೇರೆ ಬೇರೆ ವಿಷಯ ಕ್ಷೇತ್ರಗಳಲ್ಲಿನ ವಿವಿಧ ವರ್ಗಗಳಲ್ಲಿ ಚಟುವಟಿಕೆಗಳ ಯೋಜನೆ ಮತ್ತು ಅಭಿವೃದ್ಧಿ. |
| | ಯು8 | ಕಲಿಕಾ ಚಟುವಟಿಕೆಗಳ ಯೋಜನೆ | 5 | 3 | ಶಾಲಾ ಮತ್ತು ಸಹಶಾಲಾ ಚಟುವಟಿಕೆಗಳ ತರಗತಿ ಯೋಜನೆ ಪಾಠಯೋಜನೆಗಳ ವಾರ್ಷಿಕ ಯೋಜನಾಯಾಡಿಯ ಅಭಿವೃದ್ಧಿ. |
| ವಿಭಾಗ 3 | ಯು9 | ಸಂಯೋಜಿತ ಕಲಿಕಾ | 5 | 2 | ವಿವಿಧ ವಿಷಯ ಕ್ಷೇತ್ರಗಳಲ್ಲಿನ |

| | | | | | |
|---|---|---|---|---|---|
| ತರಗತಿಯಲ್ಲಿನ ಕಲಿಕೆಯಲ್ಲಿ ಹೊರಹೊಮ್ಮುವ ಸಮಸ್ಯೆಗಳು | | ಭೋಧನಾ ಪ್ರಕ್ರಿಯೆಗಳು | | | ಪರಿಕಲ್ಪನೆಗಳನ್ನು ಸಂಯೋಜಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಸುವುದು. |
| | ಯು10 | ಕಲಿಕಾ ಸಾಮಗ್ರಿ ಮತ್ತು ಕಲಿಕಾ ಪ್ರಕ್ರಿಯೆಗಳನ್ನು ಸಾಂಧರ್ಭಿಕವಾಗಿ ಸಂಯೋಜಿಸುವುದು | 5 | 2 | ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಉಪಯೋಗಕ್ಕಾಗಿ ಜಾನದಪ ಸಾಮಗ್ರಿಗಳನ್ನು ಸಂಗ್ರಹಿಸುವುದು. |
| | ಯು11 | ಕಂಪ್ಯೂಟರ್ ಸಂಯೋಜಿತ ಬೋಧನೆ ಕಲಿಕೆಯಲ್ಲಿ | 6 | 3 | ಪಾಠ ಪ್ರವಚನಕ್ಕಾಗಿ ಕಂಪ್ಯೂಟರ್ ಸಂಯೋಜಿತ ಬೋಧನಾ ಸಲಕರಣೆ ಅಭಿವೃದ್ಧಿ. |
| | ಯು12 | ಕಂಪ್ಯೂಟರ್ ಸಹಾಯಿತ ಕಲಿಕೆ | 6 | 3 | ವಿವಿಧ ವಿಷಯಗಳಲ್ಲಿ ಕಲಿಕಾರ್ತಿಯ ಸಾಧನೆಗಳನ್ನು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆ |
| ವಿಭಾಗ 4 ಕಲಿಕೆಯ ಗುಣಮಾಪನ | ಯು13 | ಗುಣಮಾಪನ ಮತ್ತು ಮೌಲ್ಯಮಾಪನದ ಮೂಲಾಂಶಗಳು | 7 | 3 | ಯಾವುದಾದರೂ ಒಂದು ವಿಷಯದಲ್ಲಿ ಸಿಸಿಇ ನಿರ್ವಹಣೆ |
| | ಯು14 | ಗುಣಮಾಪನದ ಸಾಧನಗಳು ಮತ್ತು ಕಾರ್ಯತಂತ್ರಗಳು | 8 | 5 | |
| | ಯು15 | ಗುಣಮಾಪನದ ಪರಿಣಾಮಗಳನ್ನು ಕಲಿಕಾಭಿವೃದ್ಧಿಗಾಗಿ ಬಳಸುವುದು | 7 | 3 | ವಿವಿಧ ವಿಷಯ ಕ್ಷೇತ್ರಗಳಲ್ಲಿ ಘಟಕ ಪರೀಕ್ಷೆಯ ಅಭಿವೃದ್ಧಿ |
| | ಯು16 | ಕಲಿಕೆ ಮತ್ತು ಗುಣಮಾಪನ | 7 | 3 | ಬೇರೆಬೇರೆ ವಿಷಯ ಕ್ಷೇತ್ರಗಳಲ್ಲಿನ ಪ್ರಶ್ನೆ ಪ್ರತಿಕೆಯ (ವಿದ್ಯಾರ್ಥಿಯ) ಪರಿಣಾಮ (ರಿಸೆಲಟ್) ಮತ್ತು ಅವನ ಪ್ರದರ್ಶನದ ವಿನಿಯಮ ಮಾಡಿಕೊಳ್ಳುವ ಮಾರ್ಗಗಳ ಅಧ್ಯಯನ |
| | | ಟ್ಯೂಟರಿಂಗ್ | 15 | | |
| | | ಮೊತ್ತ | 122 | 58 | 60 |
| ಒಟ್ಟು ಮೊತ್ತ | | | 122+58+60=240 ಗಂಟೆಗಳು | | |

# ವಿಭಾಗ –3

## ಒಳಗೊಳ್ಳುವ ಶಿಕ್ಷಣಕ್ಕೆ ಪರಿಚಯ


| | |
|---|---|
| 7.0 | ಪೀಠಿಕೆ |
| 7.1 | ಕಲಿಕಾ ಉದ್ದೇಶಗಳು |
| 7.2 | ಒಳಗೊಳ್ಳುವ ಶಿಕ್ಷಣದ ಪರಿಕಲ್ಪನೆ |
| 7.2.1 | ಒಳಗೊಳ್ಳುವ ಶಿಕ್ಷಣದ ಅರ್ಥ ಮತ್ತು ಸ್ವರೂಪ |
| 7.2.2 | ಒಳಗೊಳ್ಳುವ ಶಿಕ್ಷಣದ ಅಗತ್ಯ ಮತ್ತು ಮಹತ್ವ |
| 7.2.3 | ಇತರ ಸಂಬಂಧಿತ ಪರಿಕಲ್ಪನೆಗಳಿಂದ ಭಿನ್ನವಾಗಿ ಒಳಗೊಳ್ಳುವ ಶಿಕ್ಷಣ |
| 7.3 | ಒಳಗೊಳ್ಳುವ ಶಿಕ್ಷಣದ ಮೇಲೆ ಪ್ರಭಾವ ಬೀರುವ ಅಂಶಗಳು |
| 7.3.1 | ಕಲಿಕಾರ್ಥಿಗಳಲ್ಲಿರುವ ವಿವಿಧತೆ |
| 7.3.2 | ಶಿಕ್ಷಕರ ಸಿದ್ಧತೆಯ ಸ್ಥಿತಿ |
| 7.3.3 | ಮೂಲಸೌಕರ್ಯಗಳು |
| 7.3.4 | ಸಂಪನ್ಮೂಲಗಳ ಲಭ್ಯತೆ |
| 7.3.5 | ಮೌಲ್ಯಮಾಪನ ವ್ಯವಸ್ಥೆ |
| 7.4 | ಒಳಗೊಳ್ಳುವ ತರಗತಿಯನ್ನು ಸೃಷ್ಟಿಸುವುದು |
| 7.4.1 | ಕಲಿಕಾ ಸಾಮಗ್ರಿಗಳನ್ನು ಬಳಸುವುದು |
| 7.4.2 | ಭೌತಿಕ ಪರಿಸರವನ್ನು ಮಾರ್ಪಡಿಸುವುದು |
| 7.4.3 | ಸರಳವಾದ ತರಗತಿ ನಿರ್ವಹಣಾ ತಂತ್ರಗಳ ಹೊಂದಾಣಿಕೆ |
| 7.4.4 | ಮಗುಸ್ನೇಹಿ ಮೌಲ್ಯಮಾಪನ ವ್ಯವಸ್ಥೆಯ ಬಳಕೆ |
| 7.5 | ಮಕ್ಕಳು ಶಿಕ್ಷಣ ವ್ಯವಸ್ಥೆಯಿಂದ ಪ್ರತ್ಯೇಕಿಸಲ್ಪಡುವ ಅಪಾಯ |
| 7.5.1 | ಊನಶಕ್ತತೆ (ನ್ಯೂನತೆ) ಗಳುಳ್ಳ ಮಕ್ಕಳು |
| 7.5.2 | ಸೌಲಭ್ಯ, ಅವಕಾಶ ಸಂಚಿತ ಪರಿಸರಗಳಿಂದ ಬರುವ ಮಕ್ಕಳು |
| 7.5.3 | ಹೆಣ್ಣುಮಗು |
| 7.5.4 | ಪ್ರತಿಭಾವಂತ ಹಾಗೂ ಸೃಜನಶೀಲ ಮಕ್ಕಳು |
| 7.5.5 | ಇತರರು – ಕಡಿಮೆ ಮಟ್ಟದ ಸಾಧಕರು<br>ಅಲ್ಪಸಂಖ್ಯಾತ ಸಮುದಾಯಗಳು<br>ಭೌಗೋಳಿಕ ಅಡೆತಡೆಗಳು |
| 7.6 | ಸಾರಾಂಶಗೊಳಿಸೋಣ |
| 7.7 | ಸೂಚಿತ ವಾಚಿಕೆಗಳು ಮತ್ತು ಪರಾಮರ್ಶನಗಳು |
| 7.8 | ಘಟಕಾಂತ್ಯದ ಅಭ್ಯಾಸಗಳು |

## 7.0 ಪೀಠಿಕೆ

ಪ್ರತಿ ಮಗುವೂ ಅದರ ದೇಶದ ಕಾಳಜಿಯಾಗಿರುತ್ತದೆ. ಮಕ್ಕಳ ದೇಶದ ಮುಂದಿನ ಪ್ರಜೆಗಳು, ಒಂದು ದೇಶದ ಅಭಿವೃದ್ಧಿಯು ಅಲ್ಲಿನ ಪ್ರತಿಯೊಬ್ಬ ಪ್ರಜೆಯ ಕೊಡುಗೆಯನ್ನು ಬಯಸುತ್ತದೆ. ಇದಕ್ಕಾಗಿ ದೇಶವು ಎಲ್ಲ ಮಕ್ಕಳ ಆರೋಗ್ಯ, ಸಂತೋಷ, ಸಾಧನೆ, ಕೊಡುಗೆ, ಸುರಕ್ಷತೆ ಮತ್ತು ಸಫಲತೆ ಬಗ್ಗೆ ಕಾಳಜಿ ವಹಿಸುತ್ತದೆ. ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕಿನ ಕಾಯ್ದೆ (ಆರ್.ಟಿ.ಇ. ಆಕ್ಟ್ 2009) ಈ ಗುರಿ ಸಾಧನೆಯ ದಿಕ್ಕಿನಲ್ಲಿ ಇಡಲಾಗಿರುವ ಇತ್ತೀಚಿನ ಹೆಜ್ಜೆಗಳಲ್ಲೊಂದಾಗಿದೆ. ಈ ರಾಷ್ಟ್ರೀಯ ಧ್ಯೇಯವನ್ನು ಈಡೇರಿಸಲು ಶಿಕ್ಷಕರಾದ ನಮ್ಮ ಕೊಡುಗೆ ನಿರ್ಣಾಯಕವಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಲ್ಲಿರುವ ವಿವಿಧತೆಗಳ ಹೊರತಾಗಿಯೂ ಪ್ರತಿ ವಿದ್ಯಾರ್ಥಿಯ ಸಬಲೀಕರಣದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಮುಖ್ಯ. ಕಲಿಕಾರ್ಥಿಗಳಲ್ಲಿರುವ ವಿವಿಧತೆಯು ಅವರ ಕಲಿಕಾ ಸಾಮರ್ಥ್ಯಗಳು, ಸಾಮಾಜಿಕ – ಆರ್ಥಿಕ ಹಿನ್ನೆಲೆಗಳು, ಸಾಂಸ್ಕೃತಿಕ ಭಿನ್ನತೆಗಳು ಅಥವಾ ಭಾವನಾತ್ಮಕ ವರ್ತನಾ ಲಕ್ಷಣಗಳಿಗೆ ಸಂಬಂಧಿಸಿರಬಹುದು. ಶಿಕ್ಷಣ ವ್ಯವಸ್ಥೆಯು ಪ್ರತಿ ಮಗುವಿನ ಗರಿಷ್ಠ ವಿಕಾಸಕ್ಕಾಗಿ ಸಮಾನ ಅವಕಾಶಗಳನ್ನು ಒದಗಿಸಬೇಕೆಂದು ಹೇಳುತ್ತದೆ. ಈ ಕಾಣ್ಕೆಯನ್ನು ಕಲ್ಪಿಸಿಕೊಳ್ಳಲು "ಒಳಗೊಳ್ಳುವ ಶಿಕ್ಷಣ"ವು ಮಾರ್ಗದರ್ಶಿ ತತ್ವವಾಗಿ ಹೊರಹೊಮ್ಮಿದೆ. ಇದು ಖಂಡಿತವಾಗಿಯೂ ಉತ್ತೇಜನಕಾರಿ ಹಾಗೂ ಧನಾತ್ಮಕ ಹೆಜ್ಜೆಯೇ ಸರಿ! ಈ ಘಟಕದಲ್ಲಿ ನಾವು ಒಳಗೊಳ್ಳುವ ಶಿಕ್ಷಣ ಎಂದರೇನೆಂಬುದನ್ನು ಕಲಿಯೋಣ ಇದು ತಿಳಿದರೆ ನಾವು ಏಕೆ ರೂಢಿಸಿಕೊಳ್ಳಬೇಕಾಗಿದೆ ಹಾಗೂ ಈ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು ಎಂಬುದನ್ನು ಗ್ರಹಿಸೋಣ. ಇಂತಹ ತರಗತಿಯನ್ನು ಸೃಷ್ಟಿಸುವುದರಲ್ಲಿ ಶಿಕ್ಷಕರಾದ ನಮ್ಮ ಪಾತ್ರವೇನೆಂದು ತಿಳಿಯಲು ಯತ್ನಿಸೋಣ ಕೊನೆಯದಾಗಿ ತರಗತಿಯಲ್ಲಿ ಹೊಂದಿಕೊಳ್ಳಲು ಪ್ರಯಾಸಪಡುತ್ತಿರುವ ಮಕ್ಕಳು ಯಾರೆಂಬುದನ್ನು ಸ್ಪಷ್ಟಪಡಿಸಿಕೊಳ್ಳೋಣ. ಈ ಘಟಕ ಕಲಿಯುತ್ತಿರುವಾಗ, ಪ್ರತಿ ಹಂತದಲ್ಲಿಯೂ ವೈವಿದ್ಯಮಯ ಅವಶ್ಯಕತೆಗಳುಳ್ಳ ಮಕ್ಕಳ ಅಗತ್ಯತೆಗಳಿಗೆ ಹೊಮದುವಂತಹ ಪಾತ್ರಗಳನ್ನು ವಿಶ್ಲೇಷಿಸೋಣ. ಈ ಘಟಕ ಕಲಿಕೆ ಪೂರ್ಣಗೊಳ್ಳುವ ವೇಳೆಗೆ ರಾಷ್ಟ್ರೀಯ ಧ್ಯೇಯಒಂದನ್ನು ಈಡೇರಿಸಲು ನಮ್ಮ ಕೊಡುಗೆಯನ್ನು ನೀಡಲು ಸಮರ್ಥರಾಗುವ ಸಂತೋಷವನ್ನು ಅನುಭವಿಸತೊಡಗುವುದಂತೂ ಖಚಿತವಾಗಿದೆ.

## 7.1. ಕಲಿಕೆಯ ಉದ್ದೇಶಗಳು :

ಈ ಘಟಕದ ಅಧ್ಯಯನದ ನಂತರ ನೀವು ಗಳಿಸುವ ಸಾಮರ್ಥ್ಯಗಳು.

1. ಒಳಗೊಳ್ಳುವ ಶಿಕ್ಷಣವೆಂದರೇನು, ವಿವರಿಸುವುದು.
2. ಒಳಗೊಳ್ಳುವ ಶಿಕ್ಷಣದ ಅಗತ್ಯವನ್ನು ಸಮರ್ಥಿಸುವುದು
3. ಸಮನ್ವಯ ಶಿಕ್ಷಣ ಮತ್ತು ಒಳಗೊಳ್ಳುವ ಶಿಕ್ಷಣಗಳ ನಡುವಿನ ವ್ಯತ್ಯಾಸ ಗ್ರಹಿಸುವುದು.
4. ಒಳಗೊಳ್ಳುವ ಶಿಕ್ಷಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪಟ್ಟಿಮಾಡುವುದು.
5. ಒಳಗೊಳ್ಳುವ ಶಿಕ್ಷಣಕ್ಕಾಗಿ ಅಪಾಯದಲ್ಲಿರುವ ಮಕ್ಕಳನ್ನು ಗುರುತಿಸುವುದು.
6. ತರಗತಿ ಹಾಗೂ ಶಾಲೆಯಲ್ಲಿ ಒಳಗೊಳ್ಳುವಿಕೆಯನ್ನು ಖಾತ್ರಿಪಡಿಸುವಲ್ಲಿ ಶಿಕ್ಷಕರ ಪಾತ್ರವನ್ನು ವಿವರಿಸುವುದು.

## 7.2. ಒಳಗೊಳ್ಳುವ ಶಿಕ್ಷಣದ ಪರಿಕಲ್ಪನೆ:

ನಮ್ಮ ಪ್ರಜಾಪ್ರಭುತ್ವ ದೇಶದಲ್ಲಿ ಪೌರರಿಗೆ ಸಮಾನ ಅವಕಾಶವನ್ನು ಖಾತ್ರಿಗೊಳಿಸಲಾಗಿದೆ. ನಮಗೆ ನೀಡಲಾಗಿರುವ ಸಂವಿಧಾನಿಕ ಹಕ್ಕಿನ ಹೊರತಾಗಿಯೂ ನಮ್ಮ ಸಮಾಜದಲ್ಲಿ ಅನೌಪಚಾರಿಕ ಭೇದಭಾವವನ್ನು ಸಾಮಾನ್ಯವಾಗಿ ಕಾಣಬಹುದು. ವ್ಯಕ್ತಿಗಳ ಮೇಲೆ ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶಾರೀರಿಕ, ಬೌದ್ಧಿಕ ಮತ್ತು ವರ್ತನಾತ್ಮಕ ಗುಣಲಕ್ಷಣಗಳ ವ್ಯತ್ಯಾಸಗಳನ್ನು ಆಧರಿಸಿ ನಿರ್ಬಂಧಗಳನ್ನು ಹೇರಲಾಗುತ್ತದೆ. ಇದು ಕೇವಲ ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲದೆ ಅಸ್ವಾಭಾವಿಕವೂ ಆಗಿದೆ. ಪ್ರತ್ಯೇಕಿಸುವಿಕೆಯು ಪ್ರಕೃತಿ ನಿಯಮಕ್ಕೆ ವಿರುದ್ಧವಾದುದು. ಸೂರ್ಯನು ತನ್ನ ಶಾಖ ಮತ್ತು ಬೆಳಕನ್ನು ಕೊಡುವುದರಲ್ಲಿ ನಿರ್ಬಂಧ ತೋರುವುದಿಲ್ಲ. ಗಾಳಿ ಭೂಮಿಯ ಮೇಲಿನ ಯಾರಿಗೂ ಇಲ್ಲವೆನ್ನುವುದಿಲ್ಲ. ಪ್ರಕೃತಿಯು ಯಾವುದೇ ಭೇದಭಾವವಿಲ್ಲದೆ ತನ್ನೆಲ್ಲ ಸದಸ್ಯರಿಗೂ ಅವರ ಸಂಪೂರ್ಣ ಸಾಮರ್ಥ್ಯಗಳನ್ನು ವಿಕಾಸಗೊಳಿಸಿಕೊಳ್ಳಲು ಸಮಾನ ಅವಕಾಶಗಳನ್ನು ಒದಗಿಸುತ್ತದೆ.

ಕೆಲವು ಶಾಲೆಗಳು ಕೆಲವು ಮಕ್ಕಳಿಗೆ ಇಲ್ಲವೆನ್ನುತ್ತವೆ. ಏಕೆ ? ಕೆಲವು ಮಕ್ಕಳು ಶೈಕ್ಷಣಿಕ ಅವಕಾಶದಿಂದ ವಂಚಿತರಾಗುತ್ತಾರೆ. ಇಂತಹವರು ಯಾರು ? ಶಿಕ್ಷಣದಲ್ಲಿ ಬೇರ್ಪಡಿಸುವ ಅಭ್ಯಾಸ ಹಾಗೂ ಶಾಲೆಗೆ ಹೋಗುವ

ವಯಸ್ಸಿನಲ್ಲಿ ಶಾಲೆಯಲ್ಲಿರಲು ಸಮರ್ಥವಾಗದಿರುವುದು ಮಕ್ಕಳಿಂದ ಸಮಾನತೆ ಹಾಗೂ ಸಮಾಜದಲ್ಲಿ ಭಾಗವಹಿಸುವ ಹಕ್ಕನ್ನು ಕಿತ್ತುಕೊಳ್ಳುತ್ತದೆ. ಇಂತಹ ಸನ್ನಿವೇಶದಲ್ಲಿ ವೈಯಕ್ತಿಕ ಸಾಮರ್ಥ್ಯದ ಮೌಲ್ಯವನ್ನು ಪೂರ್ಣವಾಗಿ ನಿರ್ಲಕ್ಷಿಸಲಾಗುತ್ತದೆ. ಇದನ್ನು ಮನಗಂಡು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಘೋಷಣೆಗಳು ಶಾಲೆಗಳಲ್ಲಿ ಯಾವುದೇ ಭೇದ ಭಾವವಿಲ್ಲದೆ ಎಲ್ಲ ಮಕ್ಕಳನ್ನು ಒಳಗೊಳಿಸುವುದಕ್ಕೆ ಬೆಂಬಲ ವ್ಯಕ್ತಪಡಿಸಿವೆ. ಆದ್ದರಿಂದ ಇತ್ತೀಚಿನ ಎಲ್ಲ ಶೈಕ್ಷಣಿಕ ಯೋಜನೆಗಳು ಮತ್ತು ನೀತಿಗಳು ಎಲ್ಲ ಮಕ್ಕಳಿಗೂ ಶಿಕ್ಷಣಕ್ಕೆ ಸಮಾನ ಅವಕಾಶ ಒದಗಿಸುವ ವ್ಯವಸ್ಥೆಯನ್ನು ಬೆಂಬಲಿಸಿವೆ. ಪ್ರಪಂಚದಾದ್ಯಂತ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯು ಈ ತತ್ವಶಾಸ್ತ್ರಕ್ಕೆ ಹೊಂದಿಕೊಂಡಿದೆ. ಇದೇ ತತ್ವವನ್ನು ಒಳಗೊಳ್ಳುವ ಶಿಕ್ಷಣದ ಹೆಸರಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪ್ರಾರಂಭಿಸಲಾಗಿದೆ. ಒಳಗೊಳಿಸುವಿಕೆಯು ಮಕ್ಕಳಲ್ಲಿ ಆಂತರಿಕ ಶಕ್ತಿಯನ್ನು ಬೆಳೆಸಿ ಆತ್ಮವಿಶ್ವಾಸವನ್ನು ಜಾಗೃತಗೊಳಿಸುವುದೇ ಆಗಿದೆ. ಅದು ಬಾಹ್ಯ ಅಂಶಗಳಿಂದ ಹೇರಲ್ಪಟ್ಟ ಇತಿಮಿತಿಗಳನ್ನು ಗೌಣವಾಗಿಸಿ, ಭಿನ್ನತೆಗೆ ಬೆಲೆಕೊಡುವುದೇ ಆಗಿದೆ.

"ಸಮಸ್ಯೆಯು ಭಿನ್ನತೆಗಳನ್ನು ಅಳಿಸಿಹಾಕುವುದಲ್ಲ, ಆದರೆ ಭಿನ್ನತೆಗಳು ಅಳಿಯದಂತೆ ಅದರೊಂದಿಗೆ ಒಂದಾಗುವುದು ಹೇಗೆಂಬುದೇ ಆಗಿದೆ" ರಬೀಂದ್ರನಾಥ ಟ್ಯಾಗೋರ್.

### 7.2.1 ಒಳಗೊಳ್ಳುವ ಶಿಕ್ಷಣದ ಅರ್ಥ ಮತ್ತು ಸ್ವರೂಪ :

ಒಬ್ಬ ವೃತ್ತಿಪರನಾಗಿ, ವೈದ್ಯನು ಒಮ್ಮೆಗೆ ಒಬ್ಬ ರೋಗಿಯೊಂದಿಗೆ ವ್ಯವಹರಿಸಬೇಕಾಗಿದೆ; ವಕೀಲರು ಒಮ್ಮೆಗೆ ಒಬ್ಬ ಕಕ್ಷಿದಾರನೊಂದಿಗೆ, ಏಕೆಂದರೆ ಅವರಿಂದ ಸಹಾಯ ಬಯಸುವ ವ್ಯಕ್ತಿಗಳು ವೈವಿಧ್ಯಮಯ ಸಮಸ್ಯೆಗಳನ್ನು ತಂದಿರುತ್ತಾರೆ. ಒಂದು ಸಮೂಹದಲ್ಲಿ ವೈಯಕ್ತಿಕ ಅಗತ್ಯಗಳಿಗೆ ಬೆಲೆಕೊಟ್ಟು ಗುಣಾತ್ಮಕ ಶಿಕ್ಷಣ ಒದಗಿಸುವ ವಿಚಾರವನ್ನೇ ಒಳಗೊಳ್ಳುವ ಶಿಕ್ಷಣ ಎನ್ನುತ್ತೇವೆ. ನೀವು ಈಗಾಗಲೇ ಇದನ್ನು ಮಾಡುತ್ತಿದ್ದೀರಿ, ಆದರೆ ಇಂತಹ ರೂಢಿಗೆ ಒಂದು ನಿರ್ದಿಷ್ಟ ಹೆಸರಿರಲಿಲ್ಲ ಎಂದು ಆಶ್ಚರ್ಯಪಡುತ್ತಿರಬಹುದು, ಅದುಸರಿ; ಪ್ರಾಚೀನ ಕಾಲದಿಂದಲೂ ಮಕ್ಕಳ ವಿಭಿನ್ನ ಹಿನ್ನೆಲೆಗಳ ಹೊರತಾಗಿಯೂ ಪ್ರತಿ ಮಗುವಿಗೂ ಶಿಕ್ಷಣ ನೀಡುತ್ತಿದ್ದೇವೆ. ಅವರನ್ನು ನಾವು ಅವರವರ ಸಾಮರ್ಥ್ಯಗಳಿಗೆ ಅನುಗುಣವಾಗಿ ಸಿದ್ಧಗೊಳಿಸಿ ಸ್ವಾವಲಂಬಿಗಳು ಹಾಗೂ ಸಾಮಾಜಿಕವಾಗಿ ಉತ್ಪಾದಕರಾಗುವಂತೆ ಮಾಡುತ್ತಿದ್ದೇವೆ. ಇತ್ತೀಚೆಗೆ ನಾವು ಶಿಕ್ಷಣದಲ್ಲಿ ವಿವಿಧ ವಲಯಗಳಿಂದ ಬರುವ ಒತ್ತಡಗಳಿಂದಾಗಿ ಇಂತಹ ಪ್ರಜ್ಞಾಸತ್ತಾತ್ಮಕ ರೂಢಿಯಿಂದ ದೂರವಾಗಿದ್ದೇವೆ. ಶಿಕ್ಷಣ ಕ್ಷೇತ್ರದಲ್ಲಿ ದ್ರಷ್ಟಾರರು ಗ್ರಹಿಸಿದಂತೆ ಒಳಗೊಳ್ಳುವ ಶಿಕ್ಷಣ ಎಂದರೇನು ಎಂದು ಕಲಿಯೋಣ.

ಒಳಗೊಳ್ಳುವ ಶಿಕ್ಷಣವು ಶಿಕ್ಷಣ ವ್ಯವಸ್ಥೆಯಲ್ಲಿ ಅಲಕ್ಷಿಸಲ್ಪಡುವ ಅಪಾಯ ಇರುವ ಎಲ್ಲ ಮಕ್ಕಳಿಗೂ ಶಿಕ್ಷಣ ನೀಡುವ ಒಂದು ಕ್ರಮವಾಗಿದೆ. ಎಲ್ಲಿ ಮಕ್ಕಳೂ ಸಾಮಾನ್ಯ ಶೈಕ್ಷಣಿಕ ಪ್ರಾವಧಾನಗಳಿಗೆ ಅವಕಾಶ ಪಡೆಯುವ ಮೂಲಕ ಒಟ್ಟಿಗೇ ಕಲಿಯಬೇಕೆಂದು ಅದು ಅಪೇಕ್ಷಿಸುತ್ತದೆ. ಈ ವ್ಯವಸ್ಥೆಯಲ್ಲಿ ಪೋಷಕರು, ಸಮುದಾಯ, ಶಿಕ್ಷಕರು, ಆಡಳಿತಗಾರರು ಮತ್ತು ನೀತಿ ರೂಪಿಸುವವರೆಲ್ಲರೂ ನಿರ್ಣಾಯಕ ವ್ಯಕ್ತಿಗಳಾಗಿರುತ್ತಾರೆ. ಇವರೆಲ್ಲರೂ ಮಕ್ಕಳ ವೈವಿಧ್ಯಮಯ ಅವಶ್ಯಕತೆಗಳಿಗೆ ಬೆಂಬಲ ನೀಡಬೇಕಾಗಿದೆ. ಇದನ್ನು ಒಂದು ಅನುಭವವಾಗಿ ಕಾಣಬೇಕೇ ವಿನಃ ಸಮಸ್ಯೆಯಾಗಲ್ಲ.

ಒಳಗೊಳ್ಳುವ ತರಗತಿಯಲ್ಲಿ ನಮ್ಮ ಮುಖ್ಯ ಕೇಂದ್ರಬಿಂದು ಏನಾಗಿರಬೇಕು?

ಒಂದು ಸನ್ನಿವೇಶದ ಮೂಲಕ ಇದನ್ನು ಗ್ರಹಿಸೋಣ.

ಲತಾ ನಾಲ್ಕನೇ ತರಗತಿ ಮಕ್ಕಳಿಗೆ ಭಾಷಾ ಪಠ್ಯಪುಸ್ತಕದಲ್ಲಿದ್ದ 'ಒಚಿಟರಿಂ' ಎಂಬ ಪಾಠವನ್ನು ಬೋಧಿಸಲು ಪೂರ್ವಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಮಾವು ಹೇರಳವಾಗಿ ದೊರೆಯುವ ಕಾಲದಲ್ಲಿ ಈ ಪಠ್ಯಭಾಗವನ್ನು ಬೋಧಿಸಲು ಯೋಜಿಸಿದರು. ವಿದ್ಯಾರ್ಥಿಗಳನ್ನು ಸಣ್ಣ ಗುಂಪುಗಳಾಗಿ ವಿಂಗಡಿಸಲಾಯಿತು. ಶಾಲೆಯ ಬಳಿ ಇದ್ದ ದೊಡ್ಡ ಮಾವಿನಮರದ ಕೆಳಗೆ ಗುಂಪುಗಳಲ್ಲಿ ಎಲ್ಲರೂ ಕುಳಿತರು. ಪ್ರತಿ ಗುಂಪಿನ ಮುಂದೆ ಎರಡು ಮಾವಿನಹಳ್ಳಿ (ಕಾಯಿ) ಗಳನ್ನು ಇಡಲಾಯಿತು. ಪಾಠದಲ್ಲಿ ಕೊಟ್ಟಿದ್ದ ರೀತಿಯಲ್ಲಿ ಬಣ್ಣ, ವಾಸನೆ, ಆಕಾರ ಮತ್ತು ಮೇಲ್ಮೈ ರಚನೆಗಳನ್ನು ಶಿಕ್ಷಕಿ ಓದಿದರು. ಪಾಠದಲ್ಲಿ ಬಂದ ಹೊಸ ಪದಗಲನ್ನು ವಿದ್ಯಾರ್ಥಿಗಳು ಬರೆದುಕೊಳ್ಳುತ್ತಿದ್ದರು. ಶಿಕ್ಷಕರು ಪದಗಳ ಅರ್ಥವನ್ನು ಅವರ ಮುಂದಿದ್ದ ಮಾವಿನ ಹಣ್ಣುಗಳೊಂದಿಗೆ ಹೊಂದಿಸುತ್ತಿದ್ದರು (ಸಂಬಂಧಿಸುತ್ತಿದ್ದರು) ಮಕ್ಕಳು ಹಣ್ಣಿನ ವಿಶಿಷ್ಟ ಆಕಾರವನ್ನು ವೀಕ್ಷಿಸಿ, ಮುಟ್ಟಿನೋಡಿ, ಮೂಸಿನೋಡಿದರು. ಕಲೆಯಲ್ಲಿ ಪ್ರಸಿದ್ಧವಾಗಿರುವ ಮಾವಿನ ಆಕೃತಿಯನ್ನು ಮಕ್ಕಳು ಶಿಕ್ಷಕಿಯ ಸೀರೆಯಲ್ಲಿ ಗುರುತಿಸಿದರು. ಮಾವಿನ ಆಕೃತಿಯ ಚಿತ್ರಗಳನ್ನು ಮುದ್ರಿಸಿರುವ ಕೆಲವು ಮದುವೆಯ ಕರೆಯೋಲೆಗಳನ್ನು, ಶುಭಾಶಯ ಕಾರ್ಡುಗಳನ್ನು ಶಿಕ್ಷಕಿ ಮಕ್ಕಳಿಗೆ ತೋರಿಸಿದರು. ಮಾವಿನಹಣ್ಣಿನ ರುಚಿಯೊಂದನ್ನು ಬಿಟ್ಟು ಉಳಿದೆಲ್ಲ ಪದಗುಚ್ಛಗಳನ್ನೂ ವಿವರಿಸಲಾಯಿತು. ಪಾಠ ಮುಕ್ತಾಯ ಮಾಡುವ ಮುನ್ನ ಲತಾರವರು ಮಾವಿನ ಮರದಡಿಯಲ್ಲಿ ಸಂಗ್ರಹಿಸಿ ಇಡಲಾಗಿದ್ದ

ನೀರನ್ನು ಬಳಸಿ ಎಲ್ಲ ವಿದ್ಯಾರ್ಥಿಗಳೂ ಮರದ ಬುಡದಲ್ಲಿ ಕೈತೊಳೆಯುವಂತೆ ಸೂಚಿಸಿದರು. ಪ್ರತಿ ಗುಂಪಿನಿಂದ ಒಬ್ಬ ವಿದ್ಯಾರ್ಥಿಯು ನೀರನ್ನು ಹಾಕಿದಾಗ ಉಳಿದವರು ಕೈಗಳನ್ನು ತೊಳೆದುಕೊಂಡರು. ಪ್ರತಿ ಗುಂಪಿನ ಮಕ್ಕಳು ಕೈತೊಳೆದು ಬಂದು ಕುಳಿತುಕೊಳ್ಳುತ್ತಿದ್ದಂತೆ ಶಿಕ್ಷಕಿಯು ಮಾವಿನ ಹಣ್ಣುಗಳನ್ನು ಕತ್ತರಿಸಿದರು. ಎಲ್ಲ ಮಕ್ಕಳೂ ಬಾಯಲ್ಲಿ ನೀರೂರಿಸುವ ಸುವಾಸನೆ ಮತ್ತು ರುಚಿಯುಳ್ಳ ರಸವತ್ತಾದ ಹಳದಿ ಹಣ್ಣನ್ನು ಆಸ್ವಾದಿಸಿದರು. ಪಾಠದಾದ್ಯಂತ ಶಿಕ್ಷಕಿ ಏನು ಮಾಡುತ್ತಿದ್ದರು?

- ಅವರು ಪ್ರತಿ ಮಗುವನ್ನೂ ಒಂದು ಗುಂಪಿಗೆ ಸೇರಿದ ಸದಸ್ಯನೆಂದು ಒಪ್ಪಿಕೊಂಡರು.
- ಎಲ್ಲ ಮಕ್ಕಳ ಅವಶ್ಯಕತೆಗಳಿಗೂ ಹೊಂದುವಂತೆ ತರಗತಿಯನ್ನು ಭೌತಿಕವಾಗಿ ಮತ್ತು ಮನೋಭಾವನಾತ್ಮಕವಾಗಿ ಮರುರೂಪಿಸಿದರು.
- ತರಗತಿಯ ಎಲ್ಲ ಮಕ್ಕಳೂ ಭಾಗವಹಿಸುವುದನ್ನು ಖಾತ್ರಿಪಡಿಸಲು ಸಾಧ್ಯವಾಗುವಂತೆ ಚಟುವಟಿಕೆಗಳನ್ನು ಯೋಜಿಸಿದರು.
- ಶಾಲೆಯಲ್ಲಿದ್ದ ವಿದ್ಯಾರ್ಥಿಗಳ ವೈವಿಧ್ಯತೆಗೆ ಸ್ಪಂದಿಸುವ ರೂಢಿಗೆ ಗಮನ ಕೇಂದ್ರೀಕರಿಸಿದರು.
- ಮೇಲಿನ ಕಥನದಿಂದ ನೀವು ಇನ್ನೂ ಹಲವು ಅಂಶಗಳನ್ನು ಗುರುತಿಸಬಹುದು. ಅವುಗಳನ್ನು ಕೆಳಗೆ ನೀಡಿರುವ ಖಾಲಿ ಸ್ಥಳದಲ್ಲಿ ಪಟ್ಟಿ ಮಾಡಿ.

  ______________________________________________

  ______________________________________________

  ______________________________________________

- ಈ ಒಳಗೊಳಿಸುವಿಕೆಯು ಎಲ್ಲ ಮಕ್ಕಳ ಪರಿಣಾಮಕಾರಿ ಕಲಿಕೆಯನ್ನು ಕುರಿತೇ ಆಗಿದೆ. ಈ ರೂಢಿಯು ಪ್ರಧಾನವಾಗಿ ವೈವಿಧ್ಯತೆ (ಭಿನ್ನತೆ) ಯನ್ನು ಪ್ರಕೃತಿ ಹಾಗೂ ಮಾನವೀಯತೆಯ ಒಂದು ಭಾಗವೆಂದು ಒಪ್ಪಿ ಭಿನ್ನತೆಯನ್ನು ಗೌರವಿಸುವ ತತ್ವವನ್ನೇ ಆಧರಿಸಿದೆ.

### 7.2.2 ಒಳಗೊಳ್ಳುವ ಶಿಕ್ಷಣದ ಅಗತ್ಯ ಮತ್ತು ಪ್ರಾಮುಖ್ಯತೆ:

ಕ್ಷಣ ಪಡೆಯುವುದು ಪ್ರತಿಯೊಬ್ಬ ಮಗುವಿನ ಹಕ್ಕು. ಮಾನವ ಜನಾಂಗದ ಪ್ರಗತಿಗೆ ಸಮಾಜಕ್ಕೆ ವಿಭಿನ್ನ ರೀತಿಯ ಜನರ ಅಗತ್ಯವಿದೆ. ಈ ಅಗತ್ಯವನ್ನು ಪೂರೈಸಲು ಒಳಗೊಳ್ಳುವ ಶಿಕ್ಷಣ ಪ್ರಮುಖವಾಗುತ್ತದೆ. ವಿವಿಧ ದೃಷ್ಟಿಕೋನಗಳಿಂದ ಒಳಗೊಳ್ಳುವ ಶಿಕ್ಷಣದ ಅಗತ್ಯವನ್ನು ಪರಿಶೀಲಿಸೋಣ.

ಮಾನವ ಹಕ್ಕುಗಳು :

- ಎಲ್ಲ ಮಕ್ಕಳೂ ಒಟ್ಟಿಗೇ ಕೂಡಿ ಕಲಿಯುವ ಹಕ್ಕನ್ನು ಹೊಂದಿದ್ದಾರೆ.
- ಮಕ್ಕಳ ಕಲಿಕಾ ಸಾಮರ್ಥ್ಯ ಮತ್ತು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಕೌಟುಂಬಿಕ ಹಿನ್ನೆಲೆಗಳ ಕಾರಣದಿಂದ ಯಾರೂ ಭೇಧ ಭಾವ ಮಾಡಲಾಗುವುದಿಲ್ಲ.

ಶಿಕ್ಷಣ:

- ✓ ಒಳಗೊಳ್ಳುವ ವಾತಾವರಣದಲ್ಲಿ ಮಕ್ಕಳು ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಉತ್ತಮ ಸಾಧನೆ ಮಾಡುವರೆಂಬುದನ್ನು ಸಂಶೋಧನೆಗಳು ತೋರಿಸಿವೆ.
- ✓ ಬದ್ಧತೆ ಮತ್ತು ಬೆಂಬಲವಿದ್ದರೆ, ಒಳಗೊಳ್ಳುವ ಶಿಕ್ಷಣವು ಶೈಕ್ಷಣಿಕ ಸಂಪನ್ಮೂಲಗಳು ಹೆಚ್ಚು ದಕ್ಷವಾಗಿ ಬಳಕೆಯಾಗುತ್ತದೆ.

ಸಾಮಾಜಿಕ:

- ✓ ಎಲ್ಲ ಮಕ್ಕಳೂ ತಮ್ಮ ಸುತ್ತ ಇರುವ ವೈವಿಧ್ಯಮಯ ವ್ಯಕ್ತಿಗಳೊಂದಿಗೆ ಸಂಬಂಧ ಬೆಳೆಸಿಕೊಳ್ಳುತ್ತಾರೆ ಹಾಗೂ ಇದು ಮುಖ್ಯವಾಹಿನಿಯಲ್ಲಿ ಜೀವನಕ್ಕೆ ಸಿದ್ಧಗೊಳಿಸುತ್ತದೆ.
- ✓ ಒಳಗೊಳಿಸುವಿಕೆಯು ಭಯವನ್ನು ಕಡಿಮೆ ಮಾಡಿ ಸ್ನೇಹವನ್ನು ಬೆಳೆಸುವ ಸಾಮರ್ಥ್ಯ ಹೊಂದಿದೆ.
- ✓ ಸಹವರ್ತಿಗಳ ನಡುವೆ ಪರಸ್ಪರ ಗೌರವ, ಗ್ರಹಿಕೆ ಮತ್ತು ಸಹಾನುಭೂತಿ ಹೆಚ್ಚುತ್ತದೆ.

ಮನೋವೈಜ್ಞಾನಿ:

- ✓ ಸಮೂಹದಲ್ಲಿ ಸುರಕ್ಷತೆಯ ಭಾವನೆ ಬೆಳವಣಿಗೆ
- ✓ ವೈವಿಧ್ಯತೆಗಳ ನಡುವೆ ವೈಯಕ್ತಿಕ ಸಾಮರ್ಥ್ಯದಲ್ಲಿ ವಿಶ್ವಾಸ.

ಒಳಗೊಳ್ಳುವ ಶಿಕ್ಷಣವು ವಿವಿಧ ರೀತಿಯಲ್ಲಿ ಮಕ್ಕಳ ವಿಕಾಸಕ್ಕೆ ಸಹಾಯಕವಾಗಿದೆ ನಿರ್ದಿಷ್ಟ ಸವಾಲುಗಳುಳ್ಳ ವಿದ್ಯಾರ್ಥಿಗಳು ದೈಹಿಕ, ಜ್ಞಾನಾತ್ಮಕ, ಸಾಮಾಜಿಕ ವಿಕಾಸ ಮತ್ತು ಚಲನಾತ್ಮಕ ಕೌಶಲಗಳಲ್ಲಿ ಮುಂದುವರೆಯುತ್ತಾರೆ. ಅದರ ಅವಶ್ಯಕತೆಗಳನ್ನು ಪೂರೈಸಲು ಸೂಕ್ತವಾಗಿ ಸಾಮಾನ್ಯ ಪರಿಸರವನ್ನು ಹೊಂದಿಸಿದಾಗ ಅವರು ಉತ್ತಮವಾಗಿ ಕಲಿಯುತ್ತಾರೆ. ಶಾಲೆಗಳಲ್ಲಿ ಮಕ್ಕಳು ಒಟ್ಟಾರೆಯಾಗಿ ವಿಭಿನ್ನವಾಗಿರುವ ವ್ಯಕ್ತಿಗಳ ಬಗ್ಗೆ ಹಾಗೂ ಸೌಲಭ್ಯ ವಂಚಿತರ ಬಗ್ಗೆ ಹೆಚ್ಚಿನ ಮಟ್ಟದ ಸಹಿಷ್ಣುತೆಯನ್ನು ಬೆಳೆಸಿಕೊಳ್ಳುತ್ತಾರೆ. ನಾವು ಮಕ್ಕಳನ್ನು ಶಿಕ್ಷಣ ವ್ಯವಸ್ಥೆಯಿಂದ ಪ್ರತ್ಯೇಕಿಸಿದಾಗ, ಸಮಾಜದಲ್ಲಿ ಬೇರ್ಪಡಿಸುವಿಕೆ ಪ್ರಾರಂಭವಾಗುತ್ತದೆ. ಮುಂದಿನ ಹಂತಗಳಲ್ಲಿ ಯಾವುದೇ ಉದ್ದೇಶಕ್ಕೂ ಸಮುದಾಯದಲ್ಲಿ ಅವರನ್ನು ಒಳಗೊಳಿಸುವುದು ಕಷ್ಟವಾಗುತ್ತದೆ. ಹೀಗೆ, ಒಳಗೊಳ್ಳುವ ಶಿಕ್ಷಣವು ವೈವಿಧ್ಯತೆಯನ್ನು ಒಪ್ಪಿ, ಗೌರವಿಸಿ ಸಂಭ್ರಮಿಸುವ ಸಮಗ್ರ ಸಮಾಜಕ್ಕೆ ಬುನಾದಿ ಹಾಕುತ್ತದೆ (ಎಂ.ಹೆಚ್.ಆರ್.ಡಿ. 2005).

ಒಳಗೊಳ್ಳುವ ಶಿಕ್ಷದ ಅನುಕೂಲತೆಗಳು.

- ✓ ಒಳಗೊಳ್ಳುವ ಶಿಕ್ಷಣವು ಬಡತನ ಹಾಗೂ ಪ್ರತ್ಯೇಕಿಸುವಿಕೆಯ ಚಕ್ರವನ್ನು ತಡೆಯುತ್ತದೆ (ಚಕ್ರಕ್ಕೆ ವಿರಾಮ ಹಾಕುತ್ತದೆ)
- ✓ ಅದು ಮಕ್ಕಳು ತಮ್ಮ ಕುಟುಂಬಗಳು ಹಾಗೂ ಸಮುದಾಯಗಳೊಂದಿಗೆ ಉಳಿಯಲು ಪ್ರೋತ್ಸಾಹಿಸುತ್ತದೆ.
- ✓ ಎಲ್ಲ ಕಲಿಕಾರ್ಥಿಗಳ (ಅನುಕೂಲ) ಲಾಭಕ್ಕಾಗಿ ಶಾಲಾ ವಾತಾವರಣವು ಸುಧಾರಿಸಬಹುದು.
- ✓ ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿಯೂ ವ್ಯಾಪಿಸಿರುವ ಭೇದಭಾವವನ್ನು ನಿವಾರಿಸಲು ಈ ರೂಢಿಯು ಸಹಾಯಕವಾಗಬಹುದು.
- ✓ ಇದು ದೇಶದ ಅಭಿವೃದ್ಧಿಗಾಗಿ ವ್ಯಕ್ತಿಗಳನ್ನು ಹೆಚ್ಚು ವ್ಯಾಪಕವಾಗಿ ಒಳಗೊಳಿಸುವುದನ್ನು ಪ್ರೋತ್ಸಾಹಿಸುತ್ತದೆ.

ಒಳಗೊಳ್ಳುವ ಶಿಕ್ಷಣ ಕುರಿತ ನಿಮ್ಮ ಗ್ರಹಿಕೆಯ ಆಧಾರದ ಮೇಲೆ ಪಟ್ಟಿಗೆನೀವೂ ಅಂಶಗಳನ್ನು ಸೇರಿಸಬಹುದು.

________________________________________

________________________________________

________________________________________

________________________________________

________________________________________

7.2.3 ಇತರ ಸಂಬಂಧಿತ ಪರಿಕಲ್ಪನೆಗಳಿಂದ ಭಿನ್ನವಾಗಿ ಒಳಗೊಳ್ಳುವ ಶಿಕ್ಷಣ.

ಪರಿಕಲ್ಪನೆಗಳು :–

ಹಲವು ವರ್ಷಗಳ ಅವಧಿಯಲ್ಲಿ "ಒಳಗೊಳ್ಳುವ ಶಿಕ್ಷಣ" ಎಂಬುದು "ಸಮನ್ವಯ ಶಿಕ್ಷಣ" ಎಂಬುದರ ಬದಲಾಗಿ ಬಳಕೆಗೆ ಬಂದಿದೆ. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅನೇಕರು ಇವೆರಡೂ ಪದಗಳು ಒಂದೇ ಅರ್ಥ ಕೊಡುತ್ತವೆಂದು ತಿಳಿಯುತ್ತಾರೆ. ಕೇವಲ ಶಬ್ದ/ ಪದದ ಬದಲಾವಣೆ ಎಂದೇ ಗ್ರಹಿಸುತ್ತಾರೆ. ಆದರೆ ಒಳಗೊಳ್ಳುವ ಶಿಕ್ಷಣ ಎಂಬ ಪದವು ಸನ್ವಯ ಶಿಕ್ಷಣಕ್ಕಿಂತ ಹೆಚ್ಚಿನ ಅರ್ಥ ಹೊಂದಿದೆ. ಸಮನ್ವಯಗೊಳಿಸುವುದು ಮತ್ತು ಮುಖ್ಯವಾಹಿನಿಗೆ ಸೇರಿಸುವುದು ಎಂಬ ಪದಗಳು ಶಿಕ್ಷಣದ ಉದ್ದೇಶಕ್ಕಾಗಿ ನ್ಯೂನತೆಯುಳ್ಳ ಮಕ್ಕಳನ್ನು ಪ್ರತ್ಯೇಕಿಸುವುದನ್ನು ನಿಲ್ಲಿಸಲು ಕೈಗೊಂಡ ಬದಲಾವಣೆ ಎಂಬರ್ಥದಲ್ಲಿ ಹಲವು ವರ್ಷಗಳಿಂದ ಬಳಸಲಾಗುತ್ತಿವೆ. ಒಳಗೊಳ್ಳುವ ಶಿಕ್ಷಣವು ವ್ಯಾಪಕವದ ಪದವಾಗಿದ್ದು, ಶಿಕ್ಷಣದ ಉದ್ದೇಶಕ್ಕಾಗಿ ಮಕ್ಕಳನ್ನು ಪ್ರತ್ಯೇಕಿಸುವುದನ್ನು ನಿಲ್ಲಿಸುವಂತೆ ತಿಳಿಸುತ್ತದೆ. ಈ ಪದಗಳನ್ನು ಸ್ಪಷ್ಟವಾಗಿ ಗ್ರಹಿಸೋಣ.

ಮುಖ್ಯ ವಾಹಿನಿಗೆ ಸೇರಿಸುವುದು:

ಆರಂಭದಲ್ಲಿ ನ್ಯೂನತೆಯುಳ್ಳ ಮಕ್ಕಳಿಗೆ ಸಾಮಾನ್ಯ ವಾಹಿನಿಯಲ್ಲಿಯೇ ಶಿಕ್ಷಣ ಒದಗಿಸುವ ಧ್ಯೇಯವನ್ನು ಅನುಷ್ಠಾನಗೊಳಿಸುವ ಪ್ರಯತ್ನ ಮಾಡಲಾಯಿತು. ಇದರ ಪ್ರಕಾರ ನ್ಯೂನತೆಯುಳ್ಳ ಮಗುವು ನಿಯೋಜನೆಯ ಆಯ್ಕೆ ಪಡೆಯಲು (ಗಳಿಸಲು) ವಿಶೇಷ ಶಾಲೆಗಳು ಮಗುವನ್ನು ಸಿದ್ಧಗೊಳಿಸುತ್ತಿದ್ದವು. 'ಸಿದ್ಧ'ರಾಗಿದ್ದ ಮಕ್ಕಳು ವಿಶೇಷ ಪರಿಸರದಿಂದ ಸಾಮಾನ್ಯ ವ್ಯವಸ್ಥಿತ ಶಾಲೆಗಳಿಗೆ ವರ್ಗಾಯಿಸಲ್ಪಡುತ್ತಿದ್ದರು ಇಲ್ಲಿ ಸಿದ್ಧತೆ ಎಂದರೆ ಶಾಲೆಯ ಶೈಕ್ಷಣಿಕ ಹಾಗೂ ಸಾಮಾಜಿಕ ಬೇಡಿಕೆಗಳನ್ನು ನಿಭಾಯಿಸುವುದು ಎಂದರ್ಥ. ಈ ಪ್ರಕ್ರಿಯೆಯನ್ನು ಮುಖ್ಯವಾಹಿನಿಗೆ ಸೇರಿಸುವುದು ಎನ್ನಲಾಗುತ್ತಿತ್ತು.

ಸಮನ್ವಯ:

ನ್ಯೂನತೆಯುಳ್ಳ ಮಕ್ಕಳು ನ್ಯೂನತೆ ಇಲ್ಲದ ಸಾಧಾರಣ ಮಕ್ಕಳಿಗಾಗಿ ಇರುವ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದನ್ನು ವಿವರಿಸಲು ಸಮನ್ವಯ ಎಂಬ ಪದವನ್ನು ಬಳಸಲಾಗುತ್ತಿತ್ತು. ಇಲ್ಲಿ ಭಾಗವಹಿಸುವ ಜವಾಬ್ದಾರಿ ಮಗುವಿನ ಮೇಲಿರುತ್ತದೆ. ಬೋಧನೆ – ಕಲಿಕೆಯ ಸಾಮಗ್ರಿ ಅಥವಾ ವಿಧಾನಗಳಿಗೆ ಸಂಬಂಧಿಸಿದಂತೆ ಮಗುವಿನ ಅವಶ್ಯಕತೆಗಳಿಗೆ ಹೊಂದಿಕೊಳ್ಳಲು ತರಗತಿಗಳು ಮತ್ತು ಶಾಲೆಗಳು ಸಿದ್ಧವಾಗಿರಲಿಲ್ಲ.

ಒಳಗೊಳಿಸುವಿಕೆ

ಮೇಲಿನ ಎಲ್ಲ ಆಲೋಚನೆಗಳು ಮತ್ತು ರೂಢಿಗಳು ಒಳಗೊಳಿಸುವಿಕೆ ಎಂಬ ವಿಶಾಲವಾದ, ಪ್ರಜಾಸತ್ತಾತ್ಮಕ ಕಾಣ್ಕೆ (ಧ್ಯೇಯ)ಯನ್ನು ಅನುಷ್ಠಾನ ಮಾಡಲು ಭೂಮಿಕೆಯನ್ನು ಸಿದ್ಧಪಡಿಸಿತು. ಹೀಗೆಂದರೆ ಯಾವುದೇ ಭೇದಭಾವವಿಲ್ಲದೆ ಎಲ್ಲ ಮಕ್ಕಳೂ ಸಾಮಾನ್ಯ ವಾತಾವರಣದಲ್ಲಿ ಕಲಿಯಲು ಸಾಧ್ಯವಾಗುವಂತೆ ಶಾಲೆಗಳನ್ನು ಸಮುದಾಯಗಳಾಗಿ ಮರುರಚನೆ ಮಾಡುವುದೇ ಆಗಿದೆ. ಒಳಗೊಳ್ಳುವ ಶಿಕ್ಷಣದ ಸಾಮಾನ್ಯ ತತ್ವಶಾಸ್ತ್ರವು ಒಂದು ತರಗತಿಯಲ್ಲಿ ಎಲ್ಲ ಮಕ್ಕಳಿಗೂ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಉತ್ತಮ ಬೋಧನಾರೂಢಿಗಳು ಮತ್ತು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ನಡುವೆ ಆರೋಗ್ಯಕರ ಸಂಬಂಧಗಳಿಗೆ (ಅವಕಾಶ ಒದಗಿಸುತ್ತದೆ) ಪ್ರಾವಧಾನ ಮಾಡುತ್ತದೆ. ವೈಯಕ್ತಿಕ ಅವಶ್ಯಕತೆಗಳನ್ನು ಪೂರೈಸಲು (ನಿಯಮಿತ) ಸಾಮಾನ್ಯ ತರಗತಿ ಪರಿಸರವನ್ನು ಹೊಂದಾಣಿಕೆ ಮಾಡಲಾಗುತ್ತದೆ. ಸಮನ್ವಯದ ಅನುಸಾರ ಸ್ಥಳಾವಕಾಶ ಮತ್ತು ನಿಯೋಜನೆಯನ್ನು ಪಠ್ಯಕ್ರಮದ ಹೊಂದಾಣಿಕೆ, ಹೆಚ್ಚಿನ ಸಮಯ ಒದಗಿಸುವುದು, ವಿಶಿಷ್ಟ ಬೋಧನಾ ವಿಧಾನಗಳನ್ನು ಅಳವಡಿಸುವುದು ಮತ್ತು ಹೆಚ್ಚುವರಿಯಾಗಿ ವಯಸ್ಕರ ಸಹಾಯಗಳ ಮೂಲಕ ಮಗುವಿನ ಅನುಕೂಲಕ್ಕಾಗಿ ಬಳಸಲಾಗುತ್ತದೆ.

ಒಳಗೊಳ್ಳುವ ಶಿಕ್ಷಣ ಮತ್ತು ಸಮನ್ವಯ ಶಿಕ್ಷಣಗಳ ನಡುವೆ ಇರುವ ವ್ಯತ್ಯಾಸ

ಎರಡೂ ಪ್ರಕ್ರಿಯೆಗಳು ಒಂದು ಸಮಾನ ಗುರಿ ಹೊಂದಿವೆ. ಅದೇನೆಂದರೆ ನ್ಯೂನತೆಯುಳ್ಳ ಮಕ್ಕಳನ್ನು ಸಾಮಾನ್ಯ ಶಾಲೆಯಲ್ಲಿ ನಿಯೋಜಿಸುವುದರ ಬಗ್ಗೆ ಕಾಳಜಿ ಹೊಂದಿವೆ. ಈ ಸಾಮಾನ್ಯ ಲಕ್ಷಣವನ್ನು ಹೊರತುಪಡಿಸಿ, ಇವೆರಡೂ ಹಲವು ರೀತಿಗಳಲ್ಲಿ ಭಿನ್ನವಾಗಿದೆ.

ಸಮನ್ವಯ ಎಂಬುದು ಊನಶಕ್ತತೆಯುಳ್ಳ ಮಕ್ಕಳು ಹಾಗೂ ಕಿರಿಯರನ್ನು ಮುಖ್ಯವಾಹಿನಿ ಸಾಲೆಗಳಲ್ಲಿ ಅವಕಾಶ ಕಲ್ಪಿಸುವ ಪ್ರಕ್ರಿಯೆಯಾಗಿದೆ. ಸಮನ್ವಯದೊಳಗೆ ಮಗುವನ್ನು ವ್ಯವಸ್ಥೆಯೊಳಗೆ ಸರಿಹೊಂದಿಸುವುಕ್ಕೆ ಒತ್ತು ನೀಡುಲಾಗುತ್ತದೆ. ಸಮನ್ವಯದಲ್ಲಿ ಊನಶಕ್ತ ಮಕ್ಕಳನ್ನು ಪ್ರಸಕ್ತ ವ್ಯವಸ್ಥೆಗೆ ಸರಿಹೊಂದುವಂತೆ ಅಣಿಗೊಳಿಸುವುದು ಅವಶ್ಯವಾಗಿತ್ತು. ತರಗತಿಯ ಅಪೇಕ್ಷೆಗಳಿಗೆ ಹೊಂದಿಕೊಳ್ಳಲು ಮಗುವನ್ನು ಸಿದ್ಧಗೊಳಿಸುವುದಕ್ಕೆ ಒತ್ತು ನೀಡಲಾಗುತ್ತದೆ. ಹೊಂದಾಣಿಕೆ ಮಾಡಲ್ಪಟ್ಟ ಪಠ್ಯಕ್ರಮ, ಸಾಮಗ್ರಿಗಳು ಹಾಗೂ ಬೋಧನಾ ರೂಢಿಗಳೊಂದಿಗೆ ಮಕ್ಕಳ ಅವಶ್ಯಕತೆಗಳಿಗೆ ಬೆಂಬಲ ನೀಡುವ ಮೂಲಕ ವ್ಯವಸ್ಥೆಯನ್ನೇ ಹೊಂದಾಣಿಕೆ ಮಾಡಬೇಕಾಗುತ್ತದೆ. ಈ ಬೆಂಬಲವು ಹೆಚ್ಚುವರಿ ಸಿಬ್ಬಂದಿ, ಸಮಾಲೋಚನೆ ಹಾಗೂ ಕಾರ್ಯನಿರತ ಸಿಬ್ಬಂದಿಗೆ ಪರಿಣತ ತರಬೇತಿಗಳನ್ನೂ ಒಳಗೊಂಡಿರಬಹುದು. ಯಾವ ಮಕ್ಕಳಿಗೂ ತಾವು ಆ ಸನ್ನಿವೇಶದಲ್ಲಿ ಭಾಗವಹಿಸಲು ಸಮರ್ಥರಲ್ಲ ಎಂಬ ಭಾವನೆ ಬರದಂತೆ ಹೊಂದಾಣಿಕ ಮಾಡಲು ಸಾಧ್ಯವಾಗುವಂತೆ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳ ಸ್ಥಳಗಳನ್ನು ಎಲ್ಲ ಮಕ್ಕಳಿಗೂ ಸೂಕ್ತವಾಗಿ ಮಾರ್ಪಡಿಸಲಾಗುವುದು. ಈ ಕೆಳಗಿನ ಪಟ್ಟಿಯ ವ್ಯತ್ಯಾಸಗಳನ್ನು ಸ್ಪಷ್ಟಪಡಿಸುತ್ತದೆ.

ಪಟ್ಟಿ – ಸಮನ್ವಯ ಹಾಗೂ ಒಳಗೊಳ್ಳುವ ಶಿಕ್ಷಣಗಳ ನಡವಿನ

| ಸಮನ್ವಯ ಶಿಕ್ಷಣ | ಒಳಗೊಳ್ಳುವ ಶಿಕ್ಷಣ |
|---|---|
| ಊನಶಕ್ತ ಮಕ್ಕಳನ್ನು ಸಾಮಾನ್ಯ ನಿಯಮಿತ ಶಾಲೆಗಳಲ್ಲಿ ಹೊಂದಿಸುವುದು (ನಿಯೋಜಿಸುವುದ) | ಊನಶಕ್ತ ಮಕ್ಕಳ ಜೊತೆಗೆ ಶಿಕ್ಷಣ ವಂಚಿತರಾಗುವ ಅಪಾಯವಿರುವ ಇತರ ಮಕ್ಕಳಿಗೂ ನೆರೆಹೊರೆಯ ಶಾಲೆಯಲ್ಲಿ ಸ್ಥಳ ದೊರೆಯಬೇಕು |
| ಊನಶಕ್ತ ಮಕ್ಕಳನ್ನು ಪ್ರತ್ಯೇಕಿಸುವುದಿಲ್ಲ | ಊನಶಕ್ತರು ಹಾಗೂ ಸಾಮಾಜಿಕವಾಗಿ, ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಮತ್ತು ಭಾಷೆಗೆ ಸಂಬಂಧಿಸಿದಂತೆ ಸೌಲಭ್ಯ/ ಅವಕಾಶ ವಂಚಿತರು ಯಾರನ್ನೂ ಪ್ರತ್ಯೇಕಿಸುವುದಿಲ್ಲ |
| ವಿದ್ಯಾರ್ಥಿಗಳು ಪ್ರಚಲಿತ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಅಪೇಕ್ಷಿಸುತ್ತದೆ | ಮಕ್ಕಳ ಅವಶ್ಯಕತೆಗಳಿಗೆ ಹೊಂದುವಂತೆ ಶಿಕ್ಷಣ ವ್ಯವಸ್ಥೆಯೇ ಸೂಕ್ತ ಮಾರ್ಪಾಡುಗಳನ್ನು ಮಾಡುತ್ತದೆ. |
| ಹೆಚ್ಚುವರಿ ಬೆಂಬಲಕ್ಕಾಗಿ ಮಗುವನ್ನು ಸಂಪನ್ಮೂಲ ಕೋಣೆಯಲ್ಲಿ ನಿಯೋಜಿಸಲಾಗುತ್ತದೆ | ಅಗತ್ಯವಿರುವ ಎಲ್ಲ ಬೆಂಬಲವನ್ನೂ ನಿಯಮಿತ ಸಾಮಾನ್ಯ ತರಗತಿಯಲ್ಲಿಯೇ ಲಭ್ಯವಿರುವಂತೆ ಮಾಡಲಾಗುತ್ತದೆ |
| ಮಕ್ಕಳಲ್ಲಿರುವ ಕೊರತೆಗಳನ್ನು ಎತ್ತಿ ತೋರಿಸಲಾಗುತ್ತದೆ | ನಿರ್ದಿಷ್ಟ ಗುಂಪುಗಳ ಅಗತ್ಯಗಳಿಗೆ ಸೂಕ್ತವಾಗಿ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ಮಾರ್ಪಡಿಸುವುದರಿಂದ ವಿದ್ಯಾರ್ಥಿಗಳು ತಾವು ಸಮರ್ಥರಲ್ಲವೆಂದು ಭಾವಿಸಲು ಅವಕಾಶವೇ ಇರುವುದಿಲ್ಲ |

ಭಾರತೀಯ ಸಮಾಜದ ಅನನ್ಯತೆಯು ಅದರ 'ಭಿನ್ನತೆಯಲ್ಲಿ ಏಕತೆ' ಎಂಬುದೇ ಆಗಿದೆ. ಒಂದು ದೇಶದ ಶಿಕ್ಷಣ ವ್ಯವಸ್ಥೆಯು ಅಲ್ಲಿನ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಂಡೇ ಕಾರ್ಯನಿರ್ವಹಿಸುತ್ತದೆ. ಇತ್ತೀಚೆಗೆ, ಅಭಿವೃದ್ಧಿ ಹಾಗೂ ಪ್ರಗತಿಯ ಪ್ರಕ್ರಿಯೆಯಲ್ಲಿ ಏಕತೆಗಿಂತ ಹೆಚ್ಚಾಗಿ ಭಿನ್ನತೆಯೇ ಕಾಣುತ್ತಿದೆ. ಜಾತಿಗಳ ಶ್ರೇಣಿಗಳು, ಆರ್ಥಿಕ ಸ್ಥಾನಮಾನ, ಅಂಗತ್ವ ಸಂಬಂಧಗಳು, ಅಸಮಾನ ನಗರ ವಿಸ್ತರಣೆಗಳು ಎಲ್ಲರಿಗೂ ಶಿಕ್ಷಣದ ಅವಕಾಶದ ಹಾದಿಯಲ್ಲಿ ಕೃತಕ ಅಡೆತಡೆಯನ್ನು ಸೃಷ್ಟಿಸಿದೆ. ಈಗ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಸಮಾಜದಲ್ಲಿ ಸೌಲಭ್ಯವಂಚಿತ ಗುಂಪುಗಳಿಗೆ ಒಳಗೊಳ್ಳುವ ಶಿಕ್ಷಣವೆಂಬ ವಿಶಾಲ ಆಶ್ರಯದ ಅಡಿಯಲ್ಲಿ ಒಂದು ಹಕ್ಕೆಂಬ ರೂಪದಲ್ಲಿ ಶಿಕ್ಷಣವನ್ನು ವಿಸ್ತರಿಸುವ ಕಾರ್ಯಕ್ಕೆ ಬದ್ಧವಾಗಿವೆ. ಹೆಚ್ಚುತ್ತಿರುವ ವಿವಿಧತೆಗಳ ಹೊರತಾಗಿಯೂ ನಾವು ತರಗತಿಯಿಂದಲೇ ನಮ್ಮ ಏಕತೆಯನ್ನು ಪ್ರತಿಪಾದಿಸಬೇಕಾಗಿದೆ.

ಒಳಗೊಳ್ಳುವ ಶಿಕ್ಷಣಕ್ಕೆ ಪರಿಚಯ 1

ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಒಳಗೊಳ್ಳುವ ಶಿಕ್ಷಣ ಎಂದರೇನು?

   ______________________________

   ______________________________

   ______________________________

2. ಒಳಗೊಳ್ಳುವ ತರಗತಿಯಲ್ಲಿ ಶಿಕ್ಷಕರು ಗಮನ ಕೇಂದ್ರೀಕೃಇಸಬೇಕಾದ ಯಾವುದಾದರೂ ಎರಡು ಕ್ಷೇತ್ರಗಳನ್ನು ತಿಳಿಸಿ.

   ______________________________

   ______________________________

   ______________________________

3. ಒಳಗೊಳ್ಳುವ ಶಿಕ್ಷಣದ ಯಾವುದಾದರೂ ಎರಡು ಲಾಭಗಳನ್ನು ಪಟ್ಟಿಮಾಡಿ.

   ______________________________

4. ಸಮನ್ವಯ ಮತ್ತು ಒಳಗೊಳ್ಳುವ ಶಿಕ್ಷಣಗಳ ನಡುವಿನ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.

### 7.3 ಒಳಗೊಳ್ಳುವ ಶಿಕ್ಷಣದ ಮೇಲೆ ಪರಿಣಾಮ ಬೀರುವ ಅಂಶಗಳು.

ನಮ್ಮೆಲ್ಲರಿಗೂ ತಿಳಿದಿರುವಂತೆ ಒಳಗೊಳಿಸುವಿಕೆಯು ಶಿಕ್ಷಣದಲ್ಲಿನ ಜಾಗತಿ ಪ್ರಕೃತಿಯಾಗಿದೆ. ಈ ಕಾರ್ಯಕ್ರಮವು ಸಫಲವಾಗಲು ಅನುಷ್ಠಾನಗೊಳಿಸುವ ಸಂಸ್ಥೆಗಳು ಮಕ್ಕಳ ಹಕ್ಕುಗಳನ್ನು ಒಪ್ಪಿಕೊಳ್ಳಬೇಕು. ಶಾಲೆಗಳು ಮಕ್ಕಳ ಸಾಮರ್ಥ್ಯಗಳನ್ನು ಒಪ್ಪಿಕೊಳ್ಳಬೇಕು. ಶಾಲೆಗಳು ಮಕ್ಕಳ ಸಾಮರ್ಥ್ಯಗಳನ್ನು ಪರಿಗಣಿಸದೆ ಸಮುದಾಯದ ಎಲ್ಲ ಮಕ್ಕಳ ಅವಶ್ಯಕತೆಗಳಿಗೂ ಅವಕಾಶ ಒದಗಿಸಬೇಕು. ಈ ವಿಚಾರವು ಸರಳವೆಂದು ಕೋರಿದರೂ ಸಹ ಈ ಗುರಿಗಳನ್ನು ಸಾಧಿಸುವ ಮಾರ್ಗದಲ್ಲಿ ಗಮನಾರ್ಹ ಅಡ್ಡಿ ಆತಂಕಗಳಿವೆ ಒಳಗೊಳ್ಳುವ ಶಿಕ್ಷಣದ ಧ್ಯೇಯವನ್ನು ಈಡೇರಿಸುವ ಹಾದಿಯಲ್ಲಿ ಹಲವಾರು ಕಠಿಣತೆಗಳಿದ್ದು ಅವುಗಳಲ್ಲಿ ಕೆಲವನ್ನು ಈ ವಿಭಾಗದಲ್ಲಿ ಚರ್ಚಿಸಲಾಗಿದೆ.

#### 7.3.1. ಕಲಿಕಾರ್ಥಿಗಳಲ್ಲಿರುವ ವೈವಿಧ್ಯತೆ :

ಸಮವಯಸ್ಕ ಗುಂಪಿಗೆ ಸೇರಿದ ಮಕ್ಕಳ ಗುಂಪುಗಳಲ್ಲಿ ಸಾಕಷ್ಟು ವೈವಿಧ್ಯತೆಗಳಿವೆ. ಮಕ್ಕಳು ತಮ್ಮ ಕೌಟುಂಬಿಕ ಮನೆಗಳ ಹಿನ್ನೆಲೆ, ಪ್ರೇರಣೆ ಮತ್ತು ಕಲಿಕೆಯ ಸಾಮರ್ಥ್ಯ, ಶೈಕ್ಷಣಿಕ ಕಾರ್ಯ/ ವಿಷಯಗಳ್ಳಲಿ ಸಫಲತೆಗೆ ಕಾರಣವಾಗುವ ವೈಯಕ್ತಿಕ ಲಕ್ಷಣಗಳು, ಮನೋಭಾವಗಳು, ಆಸಕ್ತಿಗಳು ಮತ್ತು ಬದ್ಧತೆಗಳ ವಿಚಾರದಲ್ಲಿ ಭಿನ್ನರಾಗಿರುತ್ತಾರೆ. ಈ ವ್ಯಾಪಕ ವಿವಿಧತೆಯನ್ನು ಬೋಧನೆಗಾಗಿ ಒಂದು ಗುಂಪಾಗಿ ಸಂಬೋಧಿಸುವುದು ಕಠಿಣ ಕಾರ್ಯವಾಗಿದೆ.

#### 7.3.2. ಶಿಕ್ಷಕರ ಸಿದ್ಧತೆಯಸ್ಥಿತಿ :

ಮಗುವಿಗೆ ವಿಭಿನ್ನ ಅವಶ್ಯಕತೆ ಇದೆ ಎಂಬುದನ್ನು ಗುರ್ತಿಸುವುದು ಶಿಕ್ಷಕರಲ್ಲಿ ಬೆಳೆಸಬೇಕಾದ ಒಂದು ಮುಖ್ಯ ಕೌಶಲವಾಗಿದೆ. ಆದರೆ ಶಿಕ್ಷಕ ಶಿಕ್ಷಣ ಕಾರ್ಯಕ್ರಮವು ಈ ವಿಚಾರವನ್ನು ಸಂಬೋಧಿಸುವುದೇ ಇಲ್ಲವೆನ್ನಬಹುದು. ದೈನಂದಿನವಾಗಿ ತರಗತಿಯಲ್ಲಿ ವಿವಿಧತೆಯನ್ನು ನಿಭಾಯಿಸಲು ಶಿಕ್ಷರಿಗೆ ನಿರ್ದಿಷ್ಟ ತರಬೆತಿ ಅಗತ್ಯ. ನಮ್ಮ ದೇಶದಲ್ಲಿ ಈ ಅಗತ್ಯತೆಯ ಪೂರೈಕೆ ಆಗುತ್ತಿಲ್ಲ. ಆದ್ದರಿಂದ ಇದು ಒಳಗೊಳ್ಳುವ ಶಿಕ್ಷಣದ ಅನುಷ್ಠಾನಕ್ಕೆ ಬೆದರಿಕೆ ಒಡ್ಡುತ್ತದೆ.

#### 7.3.3 ಮೂಲ ಸೌಕರ್ಯಗಳು :

ನೆಲೆ ಇರುವೆಡೆ, ಸ್ಥಳಾವಕಾಶ ಹಾಗೂ ತರಗತಿಯ ವ್ಯವಸ್ಥೆಗಳು ಒಳಗೊಳ್ಳುವ ಶಿಕ್ಷಣಕ್ಕೆ ಸಹಾಯ ಮಾಡಲು ಅತ್ಯವಶ್ಯ ಅಂಶಗಳಾಗಿವೆ. ನಮ್ಮ ದೇಶದ ಬಹುತೇಕ ಶಾಲೆಗಳು ಕಲಿಕೆಗೆ ಸೂಕ್ತವಾದ ಮೂಲಭೂತ ಅನುಕೂಲತೆಗಳನ್ನು ಹೊಂದಿಲ್ಲ. ಶಾಲೆಗಳಿರುವ ಸ್ಥಳ ಅತಿಯಾದ ಶಬ್ದದಿಂದ ದೂರ ಇದ್ದು, ಸೂಕ್ತ ಗಾಳಿ ಬೆಳಕಿರುವ ಕೊಠಡಿಗಳು, ತರಗತಿಯ ಒಳಗೆ ಮತ್ತು ಹೊರಗೆ ಮುಕ್ತವಾಗಿ ಓಡಾಡಲು ಸ್ಥಳಾವಕಾಸ, ಆಡಲು ಮೈದಾನ ಮತ್ತು ಇತರ ಸಹಪಠ್ಯ ಚಟುವಟಿಕೆಗಳಿಗೆ ಪ್ರಾವಧಾನ ಇವುಗಳು ಒಳಗೊಳ್ಳುವ ಶಿಕ್ಷಣವನ್ನು ಬೆಂಬಲಿಸಲು ಅತ್ಯವಶ್ಯ.

#### 7.3.4. ಸಂಪನ್ಮೂಲಗಳ ಲಭ್ಯತೆ :

ಮಕ್ಕಳಿಗೆ ಅವರ ಕಲಿಕಾ ಪ್ರಕ್ರಿಯೆಯಲ್ಲಿ ಬೆಂಬಲ ನೀಡಲು ಸಂಪನ್ಮೂಲಗಳ ಲಭ್ಯತೆಯನ್ನು ನಮ್ಮ ಶಾಲೆಗಳು ಇನ್ನೂ ಸಹ ಅನ್ವೇಷಿಸಿಲ್ಲ. ಶಿಕ್ಷಕರು ಸಹ ವೈವಿಧ್ಯಮಯ ಕಲಿಕಾ ಸಾಮಗ್ರಿಗಳನ್ನು ಬಳಕೆ ಮಾಡುವ ಕೌಶಲ ಹೊಂದಿಲ್ಲ, ಸೂಕ್ತ ಸಾಮಗ್ರಿಗಳಿಲ್ಲದೆ ಮಕ್ಕಳ ವಿಭಿನ್ನ ಕಲಿಕಾ ಅಗತ್ಯಗಳನ್ನು ನಿಭಾಯಿಸುವಲ್ಲಿ ಶಿಕ್ಷಕರಿಗೆ ಕಠಿಣವೆನಿಸುತ್ತದೆ.

ಮಕ್ಕಳ ಕೆಲವು ವರ್ಗ (ಗುಂಪು)ಗಳೊಂದಿಗೆ ವ್ಯವಹರಿಸಲು ವೃತ್ತಿಪರರ ಬೆಂಬಲ ಅತ್ಯವಶ್ಯವಾಗಿದೆ. ಚಿಕಿತ್ಸಾ ಮನೋವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರು, ಶ್ರವಣಚಿಕಿತ್ಸಕರು, ವಾಕ್, ಭಾಷಾ ಚಿಕಿತ್ಸಕರು, ಭೌತಚಿಕಿತ್ಸಕರು, ಉದ್ಯೋಗಿ ಚಿಕಿತ್ಸಕರು ಮುಂತಾದವರು ಕೆಲವು ಮಕ್ಕಳ ಶಿಕ್ಷಣ ಪ್ರಕ್ರಿಯೆಯಲ್ಲಿ ಸಹಾಯ ಮಾಡಲು ಬೇಕಾಗುತ್ತಾರೆ. ಆದರೆ

ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಕೆಲವರೇ ಇದ್ದಾರೆ. ಶಾಲೆಗಳಿಗೆ ಪರಿಣತರನ್ನು ಕರೆತರುವುದು ಅಸಾಧ್ಯ, ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಬಲು ಕಷ್ಟ.

ಒಬ್ಬರೇ ನಾವು ಬಹಳ ಕಡಿಮೆ ಕೆಲಸ ಮಾಡುತ್ತೇವೆ, ಒಟ್ಟಾಗಿ ಎಷ್ಟೊಂದು ಕೆಲಸ ಮಾಡುತ್ತೇವೆ – ಹೆಲೆನ್‌ಕೆಲ್ಲರ್.

**7.3.5 ಮೌಲ್ಯಮಾಪನ ಪದ್ಧತಿ:**

ನಮ್ಮ ಮೌಲ್ಯಮಾಪನ ವಿನ್ಯಾಸದಲ್ಲಿ ಎಷ್ಟು ಅನಮ್ಯ (ಕಠಿಣ)ವಾಗಿದೆ ಎಂದರೆ ಮಗುವು ತಪ್ಪಾಗಿ ಮೌಲ್ಯಾಂಕಶಕ ಮಾಡಲ್ಪಡುತ್ತದೆ. ಒಂದು ಮಗು ಬರೆಯಲು ಅಸಮರ್ಥವಾದರೆ, ಅದರ ಉಳಿದೆಲ್ಲ ಸಾಮರ್ಥ್ಯಗಳೂ ಪರಿಗಣಿಸದೇ ಹೋಗುತ್ತದೆ. ಮಗುವಿಗೆ ಓದುವ, ಬರೆಯುವ ವಿಧಾನ ಬಿಟ್ಟು ಬೇರೆ ವಿಧಾನ ಅವಶ್ಯವಾದರೆ, ನಾವು ಈ ಆಯ್ಕೆಯನ್ನು ಕೊಡುವುದೇ ಇಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಹತಾಶೆ, ಆಶಾಭಂಗವುಂಟಾಗಿ ಶಿಕ್ಷಣ ವ್ಯವಸ್ಥೆಯಿಂದಲೇ ಹೊರಬರುತ್ತಾರೆ. ಇದು ಒಳಗೊಳ್ಳುವ ಶಿಕ್ಷಣಕ್ಕೆ ಒಂದು ಮುಖ್ಯ ತಡೆಯಾಗಿದೆ.

"ಪ್ರತಿಯೊಬ್ಬರೂ ಮೆಧಾವಿಯೇ. ಆದರೆ ನೀವು ಒಂದು ಮೀನನ್ನು ಅದ ರ ಮರ ಏರರುವ ಸಾಮರ್ಥ್ಯದ ಆಧಾರದ ಮೇಲೆ ತೀರ್ಪು ನೀಡುವುದಾದರೆ ಅದು ತನ್ನ ಪೂರ್ಣ ಜೀವನವನ್ನು ತಾನು ಮೂರ್ಖನೆಂದು ನಂಬಿಯೇ ಜೀವಿಸುತ್ತದೆ. ಅಲ್ಬರ್ಟ್ ಐನ್‌ಸ್ಟೀನ್

ನಿಮ್ಮ ಪ್ರಗತಿಯನ್ನು ಪರಿಶೀಲಿಸಿ–2

1. ಒಳಗೊಳ್ಳುವ ಶಿಕ್ಷಣದ ಮೇಲೆ ಪ್ರಭಾವ ಬೀರುವ ಯಾವುದಾದರೂ ನಾಲ್ಕು ಅಂಶಗಳನ್ನು ಪಟ್ಟಿಮಾಡಿ.

   ______________________________________________

   ______________________________

**7.4. ಒಳಗೊಳ್ಳುವ ತರಗತಿಯನ್ನು ಸೃಷ್ಟಿಸುವುದು.**

ಮೇಲಿನ ವಿಭಾಗದಲ್ಲಿ ನಾವು ಶಿಕ್ಷಣ ಕ್ಷೇತ್ರದಲ್ಲಿ ದ್ರಷ್ಟಾರರ ಸದುದ್ದೇಶದ ಕನಸನ್ನು ನನಸಾಗಿಸಲು ಇರುವ ಅಡ್ಡಿಗಳನ್ನು ಗಮನಿಸಿದ್ದೇವೆ. ಒಳಗೊಳ್ಳುವ ಶಿಕ್ಷಣವನ್ನು ಪ್ರೋತ್ಸಾಹಿಸಲು ಕೇಂದ್ರ ಮತ್ತು ಸರ್ಕಾರಗಳ ನೀತಿ ಏನೇ ಇರಲಿ, ಅದನ್ನು ಕ್ರಿಯಾರೂಪಕ್ಕಿಳಿಸುವುದು ತರಗತಿ ಶಿಕ್ಷಕರ ಕಾರ್ಯವಾಗಿದೆ. ತರಗತಿಯಲ್ಲಿ ಪರಿಣಾಮಕಾರಿಯಾಗಲು ನಮ್ಮ ಪಾತ್ರವೇನೆಂದು ಸ್ಪಷ್ಟವಾಗಿ ತಿಳಿಯೋಣ.

ಶಿಕ್ಷಕರಾಗಿ ನಾವು ಒಳಗೊಳ್ಳುವ ತರಗತಿಯನು ರೂಪಿಸಲು ಯಾವ ಕ್ರಮ ಕೈಗೊಳ್ಳಬಹುದು?

**7.4.1. ಕಲಿಕಾ ಸಾಮಗ್ರಿಗಳನ್ನು ಬಳಕೆ ಮಾಡುವುದು.**

ತರಗತಿಗೆ ಗುಣಮಟ್ಟ ತರಲು, ಶಿಕ್ಷಕರಿಗೆ ಕಲಿಕೆಯ ಬೆಂಬಲಕ್ಕೆ ಸಾಮಗ್ರಿಗಳ ಅಗತ್ಯವಿದೆ. ವೈವಿಧ್ಯಮಯ ಸಾಮಗ್ರಿಗಳನ್ನು ಬಳಕೆ ಮಾಡಿದಲ್ಲಿ ಯಾವುದೇ ಮಗು ಕಲಿಕಾ ಪ್ರಕ್ರಿಯೆಯಲ್ಲಿ ಪೂರ್ಣವಾಗಿ ಭಾಗವಹಿಸುತ್ತದೆ.

ಕಲಿಕೆಯನ್ನು ಬೆಂಬಲಿಸಲು ಎಲ್ಲಿ ಸೂಕ್ತವೋ ಅಲ್ಲಿ ಚಿತ್ರಗಳು ಅಥವಾ ಭಾವಚಿತ್ರಗಳ ರೂಪದಲ್ಲಿ ದೃಕ್ ಸಾಮಗ್ರಿಗಳನ್ನು ಬಳಸಬೇಕು. 'ನೀರುಕುದುರೆ' ಅಥವಾ 'ತಾಜ್‌ಮಹಲ್'ನ ಒಂದು ಚಿತ್ರವು ಹಲವು ಪದಗಳಿಗಿಂತ ಹೆಚ್ಚಿನದನ್ನು ತಿಳಿಸುತ್ತದೆ. ಮಹಾನ್ ವ್ಯಕ್ತಿಗಳು, ಅಪರೂಪದ ಪ್ರಾಣಿಗಳು ಹಾಗೂ ಸಸ್ಯಗಳ ಚಿತ್ರಗಳು, ಐತಿಹಾಸಿಕ ಸ್ಥಳಗಳು ಮತ್ತು ಘಟನೆಗಳ ಚಿತ್ರಗಳು ಮಕ್ಕಳಿಗೆ ಸರಿಯಾದ ದಿಕ್ಕಿನಲ್ಲಿ ಊಹಿಸಲು ಸಹಾಯಕವಾಗುತ್ತವೆ.

ನೈಜವಸ್ತುಗಳು ಅಥವಾ ಮಾದರಿಗಳ ರೂಪದಲ್ಲಿ ಬೋಧನಾ ಸಾಮಗ್ರಿಗಳು ಪರಿಕಲ್ಪನೆಯನ್ನು ಸ್ಪಷ್ಟಪಡಿಸುತ್ತವೆ. ಪಟ್ಟಕದ (ಕಡ್ಡಿಟ) ರಚನೆಯನ್ನು ಒಂದು ಮಾದರಿಯು ವಿವರಿಸುವ ಹಾಗೆ ದೀರ್ಘ ಉಪನ್ಯಾಸ ಅಥವಾ ಒಂದು ಚಿತ್ರವು ವಿವರಿಸಲಾರದು. ಒಳಗಿನ ಅಂಗಗಳು, ಮೂರು ಆಯಾಮಗಳ ರೇಖಾಗಣಿತ ಚಿತ್ರಗಳನ್ನು ಮಾದರಿಗಳ ಸಹಾಯದಿಂದ ಉತ್ತಮವಾಗಿ ಗ್ರಹಿಸಬಹುದು. ಸುಲಭವಾಗಿ ಸಿಗುವುದಾದರೆ ಹೂವಿನ ರಚನೆಯನ್ನು ವಿವರಿಸಲು ಒಂದು ದಾಸವಾಳದ

ಹೂ, ಹಣ್ಣುಗಳ ರಾಜ ಮಾವಿನ ಗುಣಲಕ್ಷಣಗಳನ್ನು ವಿವರಿಸಲು ನೈಜ ಮಾವಿನ ಹಣ್ಣುಗಳಂತಹ ಸ್ಪರ್ಶಸಂಬಂಧಿತ ಸಾಮಗ್ರಿಗಳು ನೈಜ ವಸ್ತುಗಳಾಗಬಹುದು.

ನಮ್ಮ ಸುತ್ತಲಿನ ಪರಿಸರದಲ್ಲಿ ಕಲಿಕಾ ಸಾಮಗ್ರಿಗಳು ಹೇರಳವಾಗಿದೆ. ಗಿಡಮಾಲಿಕೆಗಳು, ಪೊದೆಗಳು, ಮರಗಳು, ಬಳ್ಳಿಗಳು ಮುಂತಾದ ಪರಿಕಲ್ಪನೆಗಳನ್ನು ನಮ್ಮ ಸುತ್ತ ಇರುವ ಸಸ್ಯಗಳ ಸಹಾಯದಿಂದ ಸ್ಪಷ್ಟಪಡಿಸಬಹುದು. ಅಂಚೆ ಕಛೇರಿ, ಬ್ಯಾಂಕ್ ಮತ್ತು ಚಿಕಿತ್ಸಾಲಯಗಳ ಭೇಟಿಗಳು ಅಲ್ಲಿರುವ ವ್ಯಕ್ತಿಗಳು ನಮಗೆ ಹೇಗೆ ಸಹಾಯ ಮಾಡುತ್ತಾರೆಂಬುದನ್ನು ಸ್ಪಷ್ಟಪಡಿಸುತ್ತದೆ.

ನಮ್ಮ ಸುತ್ತುಮುತ್ತ ಸುಲಭವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿ ಪ್ರಯೋಗಗಳ ಪ್ರಾತ್ಯಕ್ಷಿಕೆಗಳನ್ನು ತೋರಿಸುವುದು ಮಕ್ಕಳು ಕಲಿಯುವಂತೆ ಮಾಡುವ ಮತ್ತೊಂದು ಕ್ರಮ. ಒಂದು ಪಾರದರ್ಶಕ ಪ್ಲಾಸ್ಟಿಕ್ ಚೀಲ ಮತ್ತು ಒಂದು ತುಂಡು ದಾರ ಬಳಸಿ ಎಲೆಗಳ ಮೂಲಕ ಬಾಷ್ಪೀಕರಣವನ್ನು ತೋರಿಸಬಹುದು.

ರೇಖಾ ಗಣಿತದ ಆಕೃತಿಗಳ ಕ್ಷೇತ್ರಫಲ(ವಿಸ್ತೀರ್ಣ)ದ ಸೂತ್ರಗಳು, ಪ್ರಮೇಯಗಳಣ್ನು ಕಂಡುಕೊಳ್ಳುವುದನ್ನು ಪ್ರದರ್ಶಿಸಲು ನಿರುಪಯುಕ್ತ ಕಾರ್ಡುಗಳನ್ನು ಬಳಸಬಹುದು.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ವಿದ್ಯುನ್ಮಾನ ಕಲಿಕಾ ಸಾಮಗ್ರಿಗಳನ್ನು ಬಳಸಲು ಅನಂತ ಆಯ್ಕೆಗಳನ್ನು ಒದಗಿಸುತ್ತದೆ. ನಮಗೆ ಗಣಕಯಂತ್ರದ ಬಳಕೆ ಗೊತ್ತಿದ್ದರೆ ತರಗತಿಗೆ ನೈಜ ವಸ್ತುಗಳನ್ನು ತರುವುದರ ಕಠಿಣತೆಯನ್ನು ಪರಿಹರಿಸಿಕೊಳ್ಳಬಹುದು. ಎಲ್ಲ ಶಾಲೆಗಳಲ್ಲಿಯೂ ಪಟ್ಟಕ (ಕಡ್ಷಿಟ)ಇಲ್ಲದಿರಬಹುದು. ಆದರೆ ಪಟ್ಟಕದ ಎಲ್ಲ ಪಕ್ಕಗಳನ್ನೂ ತೋರಿಸಲು ಮೂರು ಆಯಾಮಗಳ ಚಿತ್ರವನ್ನು ಚಲನೆಗಳೊಂದಿಗೆ ತೋರಿಸಬಹುದು. ಶರೀರದೊಳಗೆ ಆಹಾರವು ಜೀರ್ಣವಾಗುವ ಪ್ರಕ್ರಿಯೆಯನ್ನು ಗಣಕಯಂತ್ರದ ಮಲ್ಟಿಮೀಡಿಯಾ ಮೂಲಕ ತೋರಿಸಬಹುದು. ವಿವಿಧ ರೀತಿಯ ರಾಸಾಯನಿಕ ಬಂಧ (ಛಿಠಟಿಜುಟಿಂ) ಗಳಲ್ಲಿ ಭಾಗವಹಿಸುವ ವಿದ್ಯುತ್ಕಣಗಳನ್ನು ಗಣಕಯಂತ್ರದ ಸಹಾಯದಿಂದ ಶ್ರವ್ಯ, ದೃಶ್ಯ ಮತ್ತು ಮುದ್ರಣ ಮಾಧ್ಯಮಗಳನ್ನು ಬಳಸಿ ಪ್ರಾತ್ಯಕ್ಷಿಕೆ ಮೂಲಕ ತೋರಿಸಬಹುದು.

ಶಿಕ್ಷಕ ನಿರ್ಮಿತ ಅಲ್ಪವೆಚ್ಚದ ಕಲಿಕಾ ಸಾಮಗ್ರಿಗಳನ್ನು ಬೋಧನೆಯಲ್ಲಿ ಅತ್ಯುತ್ತಮವಾಗಿ ಬಳಸಬಹುದು. ಹೀಗೆಂದರೆ ನಮ್ಮ ಸುತ್ತಮುತ್ತ ಇರುವ ಅನಗತ್ಯ ಅಥವಾ ಸುಲಭವಾಗಿ ಸಿಗುವ ಕಚ್ಚಾ ವಸ್ತುಗಳನ್ನು ಬಳಕೆ ಮಾಡುವುದು. ಈ ನಿರುಪಯುಕ್ತ ವಿಸ್ತುಗಳನ್ನು ತರಗತಿಯಲ್ಲಿ ಬೋಧನೆಗೆ ಒಮ್ಮೆ ಬಳಸಲು ಪ್ರಾರಂಭಿಸಿದರೆ, ನಮ್ಮ ಸುತ್ತ ಇರುವ ಪ್ರತಿಯೊಂದೂ ಉಪಯುಕ್ತವೆಂದು ತೋರುತ್ತದೆ. ಚಟುವಟಿಕೆಯಲ್ಲಿ ಭಾಗವಹಿಸುವ ಮಕ್ಕಳ ಸಂತೋಷವು ಶಿಕ್ಷಕರನ್ನು ಸುತ್ತಲಿನ ಪ್ರತಿಯೊಂದನ್ನು ಸೃಜನಾತ್ಮಕ ಮನಸ್ಸಿನಿಂದ ನೋಡುವಂತೆ ಮಾಡುತ್ತದೆ. ಬಣ್ಣ ಬಣ್ಣದ ಲಗ್ನಪತ್ರಿಕೆಗಳು ವಿವಿಧ ರೀತಿಯ ಮನೆಗಳ ಆಕಾರ ಪಡೆಬಹುದು. ಸುತ್ತಲಿನ ಮರಗಳ ಬೀಜಗಳು 2+2=4 ರಂತಹ ಪರಿಕಲ್ಪನೆಯನ್ನು ಅರ್ಥಪೂರ್ಣವಾಗಿಸಬಲ್ಲದು. ಬಿಸಾಡಿರುವ ಸ್ಯಾಟಿನ್ ರಿಬ್ಬನ್‌ಗಳು ನಮ್ಮ ದೇಶದ ರಾಜ್ಯಗಳಿಗೆ ವರ್ಣಮಯ ಸೀಮಾರೇಖೆಗಳಾಗಹಬಹುದು. ಹಳೆಯ ಮ್ಯಾಗಜೀನ್ (ನಿಯತಕಾಲಿಕೆ)ಗಳು ಕಲಿಕಾ ಉಪಕರಣಗಳನ್ನು ಸಂಗ್ರಹಿಸಲು ಚಿನ್ನದ ಗಣಿಗಳಿದ್ದಂತೆ ಹೀಗೆಯೇ ಪಟ್ಟಿ ಬೆಳೆಯುತ್ತಾ ಹೋಗಬಹುದು. ಪ್ರಾರಂಭಿಸೋಣ; ವ್ಯತ್ಯಾಸವನ್ನು ಸ್ವತಃ ಆನಂದಿಸಬಹುದು. ವೈವಿಧ್ಯತೆಯುಳ್ಳ ಕಲಿಕಾ ಸಾಮಗ್ರಿಗಳು ತರಗತಿಯ ಎಲ್ಲ ಮಕ್ಕಳು ಪ್ರತಿನಿತ್ಯ ಶಾಲೆಗೆ ಬರುವುದನ್ನು ಎದುರುನೋಡುತ್ತಾರೆ.

### 7.4.2. ಭೌತಿಕ ಪರಿಸರವನ್ನು ಮಾರ್ಪಡಿಸುವುದು:

ನಾವು ವಾಸಿಸುವ ಸ್ಥಳವು ಎಲ್ಲ ವಿಚಾರದಲ್ಲಿಯೂ ಸೂಕ್ತವಾಗಿರಬೇಕು. ಮಗುವೊಂದು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಚಲಿಸಲು ಸಮಸ್ಯೆಯಿದ್ದರೆ ಮಗುವಿನ ಅವಶ್ಯಕತೆಗೆ ಹೊಂದುವಂತೆ ಸ್ಥಳವನ್ನು ಬದಲಾಯಿಸಬೇಕಾಗುವುದು. ಮಗು ಮೆಟ್ಟಿಲುಗಳನ್ನೇರಲು ಸಾಧ್ಯವಿಲ್ಲದಿದ್ದರೆ. ಮಹಡಿಯಲ್ಲಿನ ತರಗತಿಯನು ಕೆಳಗೆ ಬದಲಾಯಿಸಬೇಕು. ಮಗು ಕೊಠಡಿಯನ್ನು ತಲುಪಲು ಕಷ್ಟಪಡುತ್ತಿದ್ದರೆ ಅಥವಾ ಅತಿ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದರೆ ದೂರದ ಮೂಲೆಯಲ್ಲಿರುವ ತರಗತಿಯನ್ನು ಮುಖ್ಯದ್ವಾರದ ಹತ್ತಿರಕ್ಕೆ ಬದಲಾಯಿಸಬಹುದು.

ಗಮನಹರಿಸಬೇಕಾದ ಮತ್ತೊಂದು ಮುಖ ಅಂಶವೆಂದರೆ ತರಗತಿಯೊಳಗಿನ ಸ್ಥಳಾವಕಾಶ, ಪೀಠೋಪಕರಣಗಳ ವ್ಯವಸ್ಥೆಯು ಮಕ್ಕಳು ತರಗತಿಯೊಳಗೆ ಚಲಿಸುವುದಕ್ಕೆ ಅಡ್ಡಿ ಮಾಡಬಾರದು. ಆಸನ ವ್ಯವಸ್ಥೆಯನ್ನು ಮಕ್ಕಳ ಅವಶ್ಯಕತೆಗಳಿಗನುಸಾರವಾಗಿ ಮಾಡಬೇಕು. ಶ್ರವಣದೋಷ ಉಳ್ಳ ಮಗುವಿಗೆ ಮೊದಲ ಸಾಲಿನಲ್ಲಿ ಮಧ್ಯದಲ್ಲಿ ಆಸನ ನೀಡಬಹುದು. ಶಿಕ್ಷಕರ ಗಮನ ಅಗತ್ಯವಿರುವ ಮಗುವನ್ನು ಶಿಕ್ಷಕರು ಸುಲಭವಾಗಿ ತಲುಪಬಹುದಾದ ಸ್ಥಳದಲ್ಲಿ

ಕೂರಿಸಬೇಕು. ಪ್ರಕಾಶಮಾನ ಬೆಳಕನ್ನು ನೋಡಲು ಕಷ್ಟವಾಗುವ ಮಗುವನ್ನು ಮುಖದ ಮೇಲೆ ನೇರವಾಗಿ ಬೆಳಕು ಬೀಳದಿರುವ ಸ್ಥಳದಲ್ಲಿ ಕೂರಿಸಬೇಕು. ತರಗತಿಯ ಒಳಗೆ ಮತ್ತು ಹೊರಗೆ ಶಬ್ದದ ಮೂಲವನ್ನು ನಿಯಂತ್ರಿಸಬೇಕು. ಸುಲಭವಾಗಿ ಅವಧಾನ ಭಂಗವಾಗುವ ಮಗುವನ್ನು ಮೊಗಸಾಲೆ / ಓಡಾಡುವ ದಾರಿ, ಕಿಟಕಿ ಅಥವಾ ಬಾಗಿಲಿನಿಂದ ದೂರ ಕೂರಿಸಬೇಕು. ಶಬ್ಧ ಮಾಡುವ ಪೀಠೋಪಕರಣಕ್ಕೆ ರಬ್ಬರ್ ಬುಷ್‌ಗಳನ್ನು ಅಳವಡಿಸಬೇಕು. ಸಾಧ್ಯವಾದಷ್ಟು ಮಟ್ಟಿಗೆ ಸ್ವಾಭಾವಿಕ ಬೆಳಕನ್ನು ಬಳಸಬೇಕು. ಫ್ಯಾನ್ ಮತ್ತು ದೀಪಗಳು ಕೆಲವು ಮಕ್ಕಳನ್ನು ವಿಚಲಿತಗೊಳಿಸುತ್ತವೆ. ಚಿತ್ರಪಟಗಳು ಗಾಳಿಗೆ ಅಲುಗಾಡುತ್ತಿದ್ದರೆ ಅನಗತ್ಯ ಶಬ್ಧ ಉಂಟಾಗುವುದರಿಂದ ಅವುಗಳನ್ನು ಗೋಡೆಗೆ ಅಂಟಿಸಬೇಕು.

ಎಲ್ಲಕ್ಕೂ ಮಿಗಿಲಾಗಿ ಸುತ್ತಲಿನ ಸ್ಥಳವನ್ನು ಶುಭ್ರವಾಗಿ, ವ್ಯವಸ್ಥಿತವಾಗಿ ಇಡುವುದು ಬಹಳ ಮುಖ್ಯ. ಇದನ್ನು ನಿರ್ವಹಿಸುವುದರಲ್ಲಿ ಶಿಕ್ಷಕರಾದ ನಮ್ಮ ಪಾತ್ರ ಮುಖ್ಯ ಸರತಿಯ ಪ್ರಕಾರ ಮಕ್ಕಳು ತರಗತಿಯ ಶುಚಿತ್ವ ಮತ್ತು ವ್ಯವಸ್ಥೆಯ ಜವಾಬ್ದಾರಿ ತೆಗೆದುಕೊಳ್ಳಬಹುದು. ಚಿತ್ರಪಟಗಳು ಮತ್ತು ಗೋಡೆಗೆ ಹಾಕುವ ಇತರ ಪ್ರದರ್ಶಕಗಳನ್ನು ಉತ್ತಮ ಯೋಜನೆ ಮತ್ತು ಅಭಿರುಚಿಯಿಂದ ಹಾಕಬೇಕು. ತರಗತಿಯ ಶುಚಿತ್ವ ಮತ್ತು ಸುವ್ಯವಸ್ಥೆಯು ವಿದ್ಯಾರ್ಥಿಗಳು ಕಲಿಯಲು ಸಿದ್ಧಗೊಳಿಸುತ್ತವೆ.

### 7.4.3. ಸರಳವಾದ ತರಗತಿ ನಿರ್ವಹಣಾ ತಂತ್ರಗಳನ್ನು ಹೊಂದಿಸುವುದು.

ವಿವಿಧವಾದ ಅವಶ್ಯಕತೆಗಳುಳ್ಳ ಮಕ್ಕಳು ಒಂದು ಕೊಠಡಿಯಲ್ಲಿ ಇದ್ದಾಗ ನಾವು ಸವಾಲುಗಳನ್ನೆದುರಿಸಲು ಸಿದ್ಧರಾಗಿರಬೇಕು. ಸವಾಲಿಗೆ ಸಿದ್ಧರಾಗಿದ್ದಾಗ ಸನ್ನಿವೇಶಗಳ ಬೇಡಿಕೆಗಳ ಆಧಾರದ ಮೇಲೆ ತಂತ್ರಗಳನ್ನು ಬಳಸಬಹುದು. ಸತ್ಯ, ನಮ್ಮ ಸಿದ್ಧತಾಸ್ಥಿತಿಯು ತರಗತಿಯ ದೈನಂದಿನ ವ್ಯವಹಾರದಲ್ಲಿ ವ್ಯತ್ಯಾಸ ತರುತ್ತದೆ.

ಸೂರಜ್ ತುಂಟತನಕ್ಕೆ ಹೆಸರಾಗಿದ್ದಾರೆ. ಅವನಿಗೆ ತನ್ನ ಸುತ್ತಲೂ ಕುಳಿತಿರುವವರಿಗೆ ತೊಂದರೆಯುಂಟು ಮಾಡುವುದರಲ್ಲಿ ಸಂತೋಷ ಅವನ ವರ್ತನೆಯ ಬಗ್ಗೆ ನಮಗೆ ಸೂಕ್ಷ್ಮತೆ ಇದ್ದರೆ, 'ನಾನು ನಿನ್ನನ್ನು ವೀಕ್ಷಿಸುತ್ತಿದ್ದೇನೆ'. ಎಂದು ಸೂಚಿಸುವ ಒಂದೇ ಒಂದು ನೋಟ ಅವನನ್ನು ಎಚ್ಚರಿಸುತ್ತದೆ. ಸ್ವಾತಿ ಬಹಳ ಅಂಜುಬುರುಕಿಯಾದ್ದರಿಂದ ಅವಳ ಶಿಕ್ಷಕಿಗೆ ದೂರು ಹೇಳುವುದರಲ್ಲಿ ಸಂತೋಷಪಡುತ್ತಾಳೆ. ಪ್ರಿಯಾಳ ಅಥವಾ ಸ್ವಾತಿಯ ಸ್ಥಾನವನ್ನು ಬದಲಾಯಿಸುವುದರಿಂದ ಪ್ರಿಯಾಳ ವರ್ತನೆಯನ್ನು ನಿವಾರಿಸಬಹುದು. ಇವೆರಡು ಸನ್ನಿವೇಶಗಳಲ್ಲಿ ತರಗತಿಯಲ್ಲಿ ಹೇಗೆ ವರ್ತಿಸಬೇಕೆಂದು ದೀರ್ಘ ಭಾಷಣ/ ಉಪನ್ಯಾಸ ನೀಡುವುದು ಸಮಯ ವ್ಯರ್ಥ ಮಾತ್ರವಲ್ಲದೆ ನಮ್ಮ ಉದ್ದೇಶ ಏನೆಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸುವುದೂ ಇಲ್ಲ, ಅನಿಲ್ ತನ್ನ ಸಹಪಾಠಿಗಳು ಮತ್ತು ಶಿಕ್ಷಕರ ಗಮನ ಸೆಳೆಯಲು ಶಬ್ಧಗಳನ್ನು ಮಾಡುತ್ತಾನೆ. ತರಗತಿಯಲ್ಲಿ ಅನಿಲ್ ನೀಡುವ ಸಮಯೋಚಿತ ಸರಿಯುತ್ತರ ಹಾಗೂ ಯೋಜನಾ ಕಾರ್ಯದಲ್ಲಿ ಅವನು ಹಾಕುವ ಪ್ರಯತ್ನಗಳನ್ನು ಪ್ರಶಂಸಿಸಿದ್ದೇ ಆದರೆ ಅವನು ಆ ಶಬ್ದಗಳನ್ನು ಮಾಡುವುದನ್ನು ನಿಲ್ಲಿಸುತ್ತಾನೆ. ಶೋಭಾ ತನ್ನ ಎಲ್ಲ ಗಣಿತ ತರಗತಿಗಳಲ್ಲಿ ಸಮಸ್ಯೆಗಳನ್ನು ಬಿಡಿಸಲು ಕಷ್ಟಪಡುತ್ತಾಳೆ. ಉಳಿದ ಮಕ್ಕಳು ಲೆಕ್ಕ ಮಾಡುವುದರಲ್ಲಿ ತೊಡಗಿದ್ದಾಗ, ಶಿಕ್ಷಕರು ಶೋಭಾಳ ಪಕ್ಕ ಕುಳಿತು ಸಮಸ್ಯೆ ಬಿಡಿಸಲು ಹಾಯ ಮಾಡಬಹುದು. ರಮ್ಯಾಳಿಗೆ ಬರೆಯುವುದು ಸ್ವಲ್ಪ ಕಠಿಣವಾದ್ದರಿಂದ ಕಪ್ಪು ಹಲಗೆಯಿಂದ ನೋಡಿ ಬರೆಯುವುದನ್ನು ತಪ್ಪಿಸುತ್ತಾಳೆ. ಶಿಕ್ಷಕರು ಅವಳ ಬಳಿ ಹೋಗಿ ಉತ್ತೇಜಕ ಮಾತುಗಳಿಂದ ನೋಡಿ ಬರೆಯಲು ಪ್ರೇರೇಪಿಸಬಹುದು ಸಂತೋಷ ಓದಲು ಕಷ್ಟಪಡುತ್ತಾನೆ ಮತ್ತು ಅನೇಕ ತಪ್ಪುಗಳನ್ನು ಮಾಡುತ್ತಾನೆ. ಇಡೀ ತರಗತಿ ನಗುವುದರಿಂದ ಅವನಿಗೆ ಅವಮಾನವೆನಿಸುತ್ತದೆ. ಶಿಕ್ಷಕರು ಅವನಿಗೆ ಅವನು ಇತರರಿಗಿಂತ ಉತ್ತಮವಾಗಿ ಮಾಡಬಲ್ಲ ಮತ್ತೊಂದು ಕಾರ್ಯವನ್ನು ನೀಡಬಹುದು. ಹೆಚ್ಚಿನ ಪ್ರಯತ್ನವಿಲ್ಲದೆ ಅವನ ವಿಶ್ವಾಸದ ಮಟ್ಟ ಹೆಚ್ಚುತ್ತದೆ.

ನಮ್ಮ ಅನುಭವ ಹೆಚ್ಚಿದಂತೆ ತರಗತಿ ನಿರ್ವಹಣೆ ಪರಿಷ್ಕರಣಗೊಳ್ಳುತ್ತದೆ. ಅತ್ಯಂತ ಕಡಿಮೆ ಸಮಯ ಮತ್ತು ಪ್ರಯತ್ನಗಳಿಂದ ಅನೇಕ ದೈನಂದಿನ ಕ್ಲಿಷ್ಟತೆಗಳನ್ನು ನಿಭಾಯಿಸಬಹುದು. ಇದಕ್ಕೆಲ್ಲ ಬೇಕಾಗಿರುವುದು ತರಗತಿಯಲ್ಲಿರುವ ನಮ್ಮ ಎಲ್ಲ ಮಕ್ಕಳ ಮೇಲಿನ ಪ್ರೀತಿ ಮತ್ತು ನಂಬಿಕೆ.

### 7.4.4. ಮಗು ಸ್ನೇಹಿ ಮೌಲ್ಯಮಾಪನ ವ್ಯವಸ್ಥೆಯನ್ನು ಅಳವಡಿಸುವುದು.

ಬಿಗುವಾದ, ಅನಮ್ಯ ಮೌಲ್ಯಮಾಪನ ವ್ಯವಸ್ಥೆಯು ಒಳಗೊಳ್ಳುವ ತರಗತಿಯಲ್ಲಿ ಪ್ರಾಯೋಗಿಕ (ಉಪಯುಕ್ತ)ವಲ್ಲ, ಮೌಲ್ಯಮಾಪನವು ಮಗು ಏನು ಮಾಡಬಲ್ಲದೋ ಅದನ್ನು ಮೌಲ್ಯಾಂಕನ ಮಾಡಬೇಕು, ಮಗು ಏನನ್ನು ಮಾಡಲಾರದು ಎಂಬುದನ್ನಲ್ಲ. ತರಗತಿಯಲ್ಲಿರುವ ಎಲ್ಲ ಮಗುವಿಗೆ ಸೂಕ್ತವಾಗುವಂತೆ ಶಿಕ್ಷಕರು ಇದನ್ನು ಹೇಗೆ ಸಂಬೋಧಿಸಬಹುದೆಂಬುದನ್ನು ನೋಡೋಣ.

ಶ್ರುತಿ ನಾಲ್ಕನೇ ತರಗತಿಯ ಮಗು. ಅವಳಿಗೆ ತರಗತಿಯ ಪಾಠಗಳನ್ನು ಗ್ರಹಿಸುವುದು ಸಾಧ್ಯ. ಆದರೆ ಮೌಖಿಕ ಪರೀಕ್ಷೆಯಲ್ಲಿ ಶಿಕ್ಷಕರು ಪ್ರಶ್ನೆ ಕೇಳಿದಾಗ ಅವಳಿಗೆ ಉತ್ತರಿಸಲು ಸಾಧ್ಯವಿಲ್ಲ. ಅವಳ ಸಮಸ್ಯೆ ಭಾಷಾ ಅಭಿವ್ಯಕ್ತಿಯಲ್ಲಿರಬಹುದು ಅಥವಾ ಶಿಕ್ಷಕರ ಮುಂದೆ ಉತ್ತರಿಸಲು ಸಂಕೋಚ, ನಾಚಿಕೆ ಇರಬಹುದು. ನಮ್ಮ ಕಾಳಜಿ ಅವಳ ಕಲಿಕೆಯ ಮಟ್ಟ ತಿಳಿಯುವುದೇ ಹೊರತು ಅವಳ ಅಭಿವ್ಯಕ್ತಿ ಸಾಮರ್ಥ್ಯವಲ್ಲ ಇಂತಹ ಸನ್ನಿವೇಶದಲ್ಲಿ ಶಿಕ್ಷಕರಾಗಿ ನಾವು ಅವಳ ಕಲಿಕೆಯ ಮೌಲ್ಯಾಂಕನ ಮಾಡಲು ಯಾವ ಅತ್ಯುತ್ತಮ ಪರ್ಯಾಯವನ್ನು ಆಲೋಚಿಸಬಹುದು? ನಾವು ಉತ್ತರ ಪಡೆಯುವ ರೀತಿಯಲ್ಲಿಲ ಮಾರ್ಪಾಡು ಮಾಡಬಹುದು. ಮೌಖಿಕ ಉತ್ತರದ ಬದಲು ಮಗುವಿನ ಸಾಮರ್ಥ್ಯದನುಸಾರ ಗಣಕಯಂತ್ರ, ಚಿತ್ರಗಳು ಅಥವಾ ಲಿಖಿತರೂಪದಲ್ಲಿ ಉತ್ತರ ಪಡೆಯಬಹುದು.

ದೃಷ್ಟಿಯಲ್ಲಿನ ತೊಂದರೆಗಳಿಂದಾಗಿ ಮುದ್ರಿತ ಸಾಮಗ್ರಿಯನ್ನು ಓದಲು ಸಾಧ್ಯವಾಗದ ಒಂದು ಮಗು ಇರಬಹುದು. ಇಲ್ಲಿ, ಶಿಕ್ಷಕರು ಬ್ರೈಲ್ ಅಥವಾ ದಪ್ಪ ಮುದ್ರಣವನ್ನು ಮೌಲ್ಯಮಾಪನಕ್ಕಾಗಿ ಬದಲಿಯ ರೂಪದಲ್ಲಿ ಬಳಸಬಹುದು.

13 ವರ್ಷದ ವಿಕ್ರಂ ಏಳನೇ ತರಗತಿ ವಿದ್ಯಾರ್ಥಿ, ಎಲ್ಲ ವಿಷಯಗಳಲ್ಲಿ ಅಮೂರ್ತ ಪರಿಕಲ್ಪನೆಗಳನ್ನು ಗ್ರಹಿಸುವ ಸಾಮರ್ಥ್ಯ ಅವನ ವಯೋಮಾನಕ್ಕಿಂತ ಕಡಿಮೆ ಇದೆ. ಆದರೆ, ಸರಳ ಪ್ರಶ್ನೆಗಳಿಗೆ ಉತ್ತರಿಸಬಲ್ಲ. ಈ ವಿದ್ಯಾರ್ಥಿಯನ್ನು ಶಿಕ್ಷಕರು ಹೇಗೆ ಮೌಲ್ಯಾಂಕನ ಮಾಡಬಹುದು. ಇಲ್ಲಿ 'ಬಿಟ್ಟುಬಿಡುವುದೇ' ಉತ್ತಮ ಆಯ್ಕೆಯಾಗಿದೆ. ವಿಕ್ರಂನ ಮೌಲ್ಯಾಂಕನ ಮಾಡುವಾಗ ಕಠಿಣ ಪರಿಕಲ್ಪನೆಗಳನ್ನು ಹೊರಗಿಡಬಹುದು. ಏಕೆಂದರೆ, ಇಂತಹ ಪ್ರಶ್ನೆಗಳಿಗೆ ಅವನು ಉತ್ತರಿಸಲಾರನೆಂದು ಅರಿವಿದೆ.

ಕೆಲವು ಮಕ್ಕಳು ಯಾವ ಮೂಲಭೂತ ಶೈಕ್ಷಣಿಕ ಕೌಶಲಗಳನ್ನೂ ಕಲಿಯಲಾರರು. ಆದರೆ ಅವರು ಬೇರೊಂದು ಕ್ಷೇತ್ರದಲ್ಲಿ ಪ್ರತಿಭೆ ಹೊಂದಿರಬಹುದು. ಇಲ್ಲಿ ಶಿಕ್ಷಕರು ಮಗುವಿನ ಮೌಲ್ಯಾಂಕನಕ್ಕೆ ಪರಿಹಾರ (ಅಂಟರಿಜಟಿಚಿಣುಂಟ) ತಂತ್ರವನ್ನು ಬಳಸಬೇಕು ಇದು ವ್ಯಕ್ತಿಯ ಆಧಾರದ ಮೇಲೆ ಔದ್ಯೋಗಿಕ ಕ್ಷೇತ್ರದ ಅಥವಾ ಸ್ವಯಂ ಆರೈಕೆ (ಪಾಲನೆ), ಇತ್ಯಾದಿಗಳಲ್ಲಿ ಮಗುವಿನ ಕೌಶಲಗಳನ್ನು ಮೌಲ್ಯಾಂಕನ ಮಾಡುವುದಾಗಿದೆ.

ಮಗುವಿನ ಬಗ್ಗೆ ನಮ್ಮ ಗ್ರಹಿಕೆಯ ಆಧಾರದ ಮೇಲೆ ಅದನ್ನು ಮೌಲ್ಯಾಂಕನ ಮಾಡುವ ಸ್ವಾತಂತ್ರ್ಯವನ್ನು ತೆಗೆದುಕೊಂಡರೆ ಶಾಲೆಯು ಒಂದು ಸುಂದರ ಸ್ಥಳವಾಗುತ್ತದೆ. ಪರೀಕ್ಷೆಗಳ ಭಯ ಮಗುವನ್ನು ಕಾಡುವುದು ಕೊನೆಯಾಗುತ್ತದೆ.

ನಿಮ್ಮ ಪ್ರಗತಿ ಪರಿಶೀಲಿಸಿ–3

1. ಮೌಲ್ಯಮಾಪನದ ಬಿಗುವನ್ನು ಸಂಬೋಧಿಸಬಹುದಾದ ನಾಲ್ಕು ಮಾರ್ಗಗಳಾವುವು ?

   ______________________________________________

   ______________________________

   ______________________________________________

   ________________________

7.5. ಶಿಕ್ಷಣ ವ್ಯವಸ್ಥೆಯಿಂದ ಹೊರಗಿಡಲ್ಪಡುವ ಅಪಾಯ ಇರುವ ಮಕ್ಕಳು:

ಲಕ್ಷಾಂತರ ಮಕ್ಕಳು ಮತ್ತು ಯುವಕರು ಶಿಕ್ಷಣದ ಹಕ್ಕಿನಿಂದ ವಂಚಿತರಾಗಿದ್ದು, ಸೂಕ್ತವಾದ ಪರಿಸರದಲ್ಲಿ ಸಾಕಷ್ಟು ಶಾಲಾ ಶಿಕ್ಷಣ ಪಡೆಯುವುದಿಲ್ಲ. ಶಾಲೆಯಿಂದ ಹೊರಗಿರುವ ಇಂತಹ ಬಹುತೇಕ ಮಕ್ಕಳಿಗೆ ಶಾಲಾ ಪರಿಸರ ಅನುಕೂಲಕರವಾಗಿರುವುದಿಲ್ಲ. ಅವರಿಗೆ ಸಮೀಪದ ಶಾಲೆಯಲ್ಲಿ ದಾಖಲಾತಿ ನಿರಾಕರಿಸಲಾಗುತ್ತದೆ ಇಲ್ಲವೆ ಇತರ ಅನಿವಾರ್ಯ ಸಂದರ್ಭಗಳಿಂದಾಗಿ ಶಾಲೆಯಿಂದ ಹೊರಗುಳಿಯಬೇಕಾಗುತ್ತದೆ. ಶಾಲೆಯಿಂದ ಹೊರಗುಳಿಯುವ ಅಪಾಯವಿರುವ ಪ್ರಮುಖ ಗುಂಪುಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯೋಣ.

7.5.1. ಊನಶಕ್ತತೆಯುಳ್ಳ ಮಕ್ಕಳು :

ಊನಶಕ್ತ ಮಕ್ಕಳು ಶೈಕ್ಷಣಿಕ ಕೌಶಲಗಳನ್ನು ಕಲಿಯುವಲ್ಲಿ ಸಮಸ್ಯೆಗಳನ್ನು ಹೊಂದಿರುವುದರಿಂದ ಶಿಕ್ಷಣ ವಂಚಿತರಾಗುವ ಅಪಾಯ ಎದುರಿಸುತ್ತಾರೆ. ಅವರಿಗಿರುವ ಊನಶಕ್ತತೆಯ ವಿಧವನ್ನು ಅವಲಂಬಿಸಿ ಶಾಲೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಾರೆ. ನಾವು ಮಕ್ಕಳ ಶಿಕ್ಷಣ ಪ್ರಕ್ರಿಯೆಗೆ ಬೆದರಿಕೆ ಒಡ್ಡುತ್ತಿರುವ ಇಂತಹ ಊನಶಕ್ತತೆಯ ವರ್ಗ (ವಿಧ) ಗಳನ್ನು ಸಂಕ್ಷಿಪ್ತವಾಗಿ ಗಮನಿಸೋಣ.

ಎ. ಜ್ಞಾನಾತ್ಮಕ ಮತ್ತು/ಅಥವಾ ಕಲಿಕಾ ನ್ಯೂನತೆಗಳಿರುವ ಮಕ್ಕಳು – ವಿಭಿನ್ನ ಮಟ್ಟದ ಬುದ್ಧಿ ಮಾಂದ್ಯತೆಯುಳ್ಳ ಮಕ್ಕಳು ಕಲಿಯಲು ಸೀಮಿತ ಜ್ಞಾನಾತ್ಮಕ ಸಾಮರ್ಥ್ಯದ ಕಾರಣದಿಂದ ತರಗತಿಯ ಕನಿಷ್ಠ ಅಗತ್ಯವನ್ನು ಕಲಿಯಲಾರರು. ನಿರ್ದಿಷ್ಟ ಕಲಿಕಾ ನ್ಯೂನತೆಗಳುಳ್ಳ ಮಕ್ಕಳು ಮೂಲಭೂತ ಶೈಕ್ಷಣಿಕ ಕೌಶಲಗಳಾದ ಓದು, ಬರಹ, ಲೆಕ್ಕಗಳನ್ನು ಕಲಿಯಲಾರರು. ಇವರಲ್ಲಿ ಅನೇಕ ಮಕ್ಕಳನ್ನು ಅವರ ಕಲಿಕಾ ಸಮಸ್ಯೆಗಳಿಗಾಗಿ ಗುರುತಿಸಲು ಶಿಕ್ಷಕರಿಗೆ ಸಾಧ್ಯವಾಗುತ್ತಿಲ್ಲ.

ಬಿ. ಸಾಮಾಜಿಕ, (ಸಂವೇದನಾತ್ಮಕ ಮತ್ತು ವರ್ತನಾತ್ಮಕ ದೋಷಗಳು – ಕೆಲವು ದೋಷಗಳ ಕಾರಣದಿಂದಾಗಿ ಮಕ್ಕಳು ತರಗತಿಯಲ್ಲಿ ಕಾರ್ಯಗಳಿಗೆ ಗಮನವೀಯಲು, ನಿರ್ವಹಿಅಸಲು ಕಷ್ಟ ಎದುರಿಸುತ್ತಾರೆ. ಇದು ಅವರ ಸಾಮಾಜಿಕ ಕೌಶಲಗಳ ಕೊರತೆಯಿಂದಾಗಿರಬಹುದು, ಅಥವಾ ಸಂವೇದನಾತ್ಮಕ ಗೊಂದಲ (ಕ್ಷೋಭೆ) ಅಥವಾ ವರ್ತನಾತ್ಮಕ ಸಮಸ್ಯೆಗಳಿಂದಾಗಿರಬಹುದು. ಶಿಕ್ಷಕರಿಗೆ ಈ ಸ್ಥಿತಿ, ಪರಿಸ್ಥಿತಿಗಳ ಪರಿಚಯವಿಲ್ಲದ ಕಾರಣ ಸುತ್ತಲಿನ ಜನ ಇಂತಹ ಮಕ್ಕಳನ್ನು ತಪ್ಪಾಗಿ ತಿಳಿಯುತ್ತಾರೆ.

ಸಿ. ಭಾಷೆ ಮತ್ತು ಸಂವಹನ ಸಮಸ್ಯೆಗಳು – ಕೆಲವು ಮಕ್ಕಳು ಬಾಹ್ಯನೋಟಕ್ಕೆ ಅವರ ಸಮವಯಸ್ಕರಂತೆಯೇ ಕಾಣುತ್ತಾರೆ. ಆದರೆ ಅವರು ಗ್ರಹಿಸುವಿಕೆ ಮತ್ತು / ಅಥವಾ ಸೂಕ್ತ ಭಾಷೆಯ ಮೂಲಕ ಅಭಿವ್ಯಕ್ತಿ ಮಾಡುವಲ್ಲಿ ಅನೇಕ ಸಮಸ್ಯೆಗಳನ್ನು ಹೊಂದಿರುತ್ತಾರೆ. ಇಂತಹ ಮಕ್ಕಳು ಶಾಲೆಯ ಶೈಕ್ಷಣಿಕ ಮತ್ತು ಶೈಕ್ಷಣಿಕೇತರ ಚಟುವಿಕೆಗಳಲ್ಲಿ ಸಮಸ್ಯೆ ಎದುರಿಸುತ್ತಾರೆ.

ಡಿ. ಜ್ಞಾನೇಂದ್ರಿಯ ದೋಷಗಳು – ಶಾಲೆಗಳಲ್ಲಿ ಶ್ರವಣ ಮತ್ತು ದೃಷ್ಟಿದೋಷಗಳುಳ್ಳ ಮಕ್ಕಳನ್ನು ನೋಡಿದ್ದೇವೆ. ಈ ಸಮಸ್ಯೆಗಳು ಅಲ್ಪಪ್ರಮಾಣದಿಂದ ತೀವ್ರದವರೆಗೆ ವ್ಯಾಪಿಸಿದ್ದು, ತರಗತಿಯಲ್ಲಿ ನಿಭಾಯಿಸುವುದು ಕಷ್ಟವಾಗುತ್ತದೆ. ಅಲ್ಪ ದೃಷ್ಟಿದೋಷ (ಅಪೂರ್ಣದೃಷ್ಟಿ) ಮತ್ತು ಅಲ್ಪ ಶ್ರವಣದೋಷಗಳೂ ಹೆಚ್ಚಿನ ಶೈಕ್ಷಣಿಕ ನಿಹಿತಾರ್ಥಗಳನ್ನು ಹೊಂದಿವೆ.

ಇ. ಶಾರೀರಿಕ ನ್ಯೂನತೆಗಳು – ದೊಡ್ಡ ಸ್ನಾಯುಗಳು ಅಥವಾ ಸೂಕ್ಷ್ಮಸ್ನಾಯುಗಳ ಚಲನಾತ್ಮಕ ಲೋಪಗಳನ್ನು ಶಾಲೆಗೆ ಹೋಗುವ ವಯಸ್ಸಿನ ಹಲವು ಮಕ್ಕಳಲ್ಲಿ ಕಾಣಬಹುದು. ಅದು ಮೂಳೆ ಸಂಬಂಧಿತ, ನರಸಂಬಂಧಿತ ಹಾಗೂ ಸ್ನಾಯು ಸಂಬಂಧಿತ ಸ್ಥಿತಿಗಳಿಂದಾಗಿರಬಹುದು. ಇದರಿಂದಾಗಿ ಶರೀರದ ಭಾಗಗಳ ನಡುವೆ ಸಮನ್ವಯ / ಹೊಂದಾಣಿಕೆ ತೊಂದರೆಯಾಗುತ್ತದೆ. ಇದು ಮಕ್ಕಳಿಗೆ ಶಾಲೆಯಲ್ಲಿ ಅಲ್ಪದಿಂದ ತೀವ್ರ ಸಮಸ್ಯೆಗಳಿಗೆ ಕಾರಣವಾಗುತ್ತದೆ.

ಎಫ್. ಆರೋಗ್ಯದ ಸಮಸ್ಯೆಗಳು – ಮಕ್ಕಳು ದೀರ್ಘಕಾಲ ಶಾಲೆ ತಪ್ಪಿಸುವಂತೆ ಮಾಡುವ ಅನೇಕ ಬಾಲ್ಯಾವಸ್ಥೆಯ ಆರೋಗ್ಯ ಸಮಸ್ಯೆಗಳಿಗೆ. ಮಕ್ಕಳು ತಮ್ಮ ಶಿಕ್ಷಣವನ್ನು ಮುಂದುವರೆಸದೆ ಬಿಡುವುದಕ್ಕೆ ಇದು ಒಂದು ಕಾರಣವಾಗಿದೆ. ಕಾಯಿಲೆಯಿಂದ ಎದುರಾಗುವ ವಿವಿಧ ಸನ್ನಿವೇಶಗಳು ಚಿಂತೆ / ಕಾಳಜಿಗೆ ತೀವ್ರ ಕಾರಣವಾಗಿದೆ. ಬಾಲ್ಯ ಮಧುಮೇಹ, ಸಂಧಿವಾತ, ಮೂರ್ಛೆರೋಗ, ಸಾಮಾನ್ಯ ನಿಶ್ಯಕ್ತಿಗೆ ಕಾರಣವಾಗುವ ನ್ಯೂನಪೋಷಣೆ ಮುಂತಾದವು ಸಾಮಾನ್ಯವಾಗಿ ಪ್ರಾಥಮಿಕ ಶಾಲಾ ವಯಸ್ಸಿನಲ್ಲಿ ಕಂಡುಬರುವ ಸಮಸ್ಯೆಗಳಾಗಿವೆ.

ಶಾಲೆಗೆ ಬರಲು ಅಥವಾ ಕಲಿಯಲು ತೊಂದರೆ ಉಂಟುಮಾಡುವ ಊನಶಕ್ತತೆಯ ವಿಧ/ ವರ್ಗಗಳು ತೊಂದರೆಗೊಳಗಾದ ಮಕ್ಕಳು ಶಾಲೆ ಮುಂದುವರೆಸುವುದಕ್ಕೆ ಅಪಾಯ ವುಂಟುಮಾಡುತ್ತವೆ. ಶಿಕ್ಷಕರಾಗಿ ನಾವು ಈ ರೀತಿ ಗುರುತಿಸಿದ ಮಕ್ಕಳ ವರ್ತನೆಯ ಅತಿಸಣ್ಣ ಅಂಶಗಳ ಬಗ್ಗೆಯೂ ಸೂಕ್ಷ್ಮತೆ ಹೊಂದಿರಬೇಕು. ಈ ವಿಭಾಗದ ಇತರ ಘಟಕಗಳು ಪ್ರತಿ ಆರೋಗ್ಯಸ್ಥಿತಿಯ ವಿವರಗಳನ್ನೂ, ತರಗತಿಯ ಅವುಗಳನ್ನು ನಿರ್ವಹಿಸುವ ಮಾರ್ಗಗಳನ್ನೂ ತಿಳಿಸುತ್ತವೆ. ಪರಿಸ್ಥಿತಿಯು ನಿಮ್ಮ ವ್ಯಾಪ್ತಿಗೆ ಮೀರಿದ್ದು ಎಂದೆನಿಸಿದರೆ ಹೆಚ್ಚು ಸಮಯ ವ್ಯರ್ಥ ಮಾಡದೆ ವೃತ್ತಿಪರರಿಗೆ ಉಲ್ಲೇಖಿಸಿ ಕಳುಹಿಸುವುದ ಒಳ್ಳೆಯದು.

7.5.2. ಸೌಲಭ್ಯವಂಚಿತ ಪರಿಸರಗಳಿಂದ ಬರುವ ಮಕ್ಕಳು.

ಮಕ್ಕಳು ವಾಸಿಸುವ ಪರಿಸರದಲ್ಲಿನ ಸೌಲಭ್ಯವಂಚನೆಯು ಪರಿಕಲ್ಪನೆಗಳನ್ನು ರೂಪಿಸುವುದರ ಮೇಲೆ ನೇರ ಪರಿಣಾಮ ಬೀರುತ್ತದೆಂಬುದು ಸ್ಥಿರಪಡಿಸಲ್ಪಟ್ಟ ವಾಸ್ತವವಾಗಿದೆ. ಸಹಜವಾಗಿಯೇ ಬಡತನದ ಕುಟುಂಬಗಳಿಂದ

ಬರುವ, ದಿನಗೂಲಿಗಳ, ಕೊಳಚೆ ನಿವಾಸಿಗಳ ಮಕ್ಕಳು ಹಾಗೂ ಸಿಕ್ಕಿಲ್ಲದ ಕುಟುಂಬದ ಮಕ್ಕಳು ಆರ್ಥಿಕ, ಸಾಮಾಜಿಕ ಮತ್ತು ಮನೋವೈಜ್ಞಾನಿಕ ಪರಿಸರಗಳ ಸಮಸ್ಯೆ ಎದುರಿಸುತ್ತಾರೆ.

### 7.5.3. ಹೆಣ್ಣುಮಗು

ದೈಹಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣದಿಂದಾಗಿ ಹೆಣ್ಣುಮಕ್ಕಳು ಅನಾನುಕೂಲತೆ ಹೊಂದಿರುತ್ತಾರೆ. ವಿಶೇಷವಾಗಿ ಹಳ್ಳಿಗಳಲ್ಲಿ, ಸಾಂಪ್ರದಾಯಿಕ ಅವಿಭಕ್ತ ಕುಟುಂಬಗಳಲ್ಲಿ ಹೆಣ್ಣುಮಕ್ಕಳನ್ನು ಭಿನ್ನರೀತಿಯಲ್ಲಿಯೇ ಕಾಣುತ್ತಾರೆ. ಅವರ ಪಾತ್ರಗಳು ಕುಟುಂಬಗಳಲ್ಲಿ ನಿರ್ಧಾರವಾಗುವುದರಿಂದ ಹೆಣ್ಣುಮಕ್ಕಳ ಶೈಕ್ಷಣಿಕ ಅವಶ್ಯಕತೆಗಳನ್ನು ನಿರ್ಲಕ್ಷಿಸಲಾಗುತ್ತದೆ. ಕೆಲವು ಕುಟುಂಬಗಳಲ್ಲಿ ಚಿಕ್ಕ ವಯಸ್ಸಿನಲ್ಲಿ ಶಿಕ್ಷಣ ಮುಂದುವರೆಸಲು ಅಗತ್ಯವಾದ ಪ್ರೋತ್ಸಾಹ ಇರುವುದೇ ಇಲ್ಲ. ಆದ್ದರಿಂದ ಅವರು ಶಾಲೆಯ ಹೊರಗುಳಿಯುವ ದುರ್ಬಲ ಸಮೂಹವಾಗಿರುತ್ತಾರೆ. ಹೆಣ್ಣುಮಗುವಿನ ಸಮಸ್ಯೆಗಳು ಮತ್ತು ಅವುಗಳನ್ನು ನಿಭಾಯಿಸುವ ರೀತಿಗಳನ್ನು 4ನೇ ವಿಭಾಗದ ಇತರ ಘಟಕಗಳಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

### 7.5.4. ಪ್ರತಿಭಾವಂತ ಮತ್ತು ಸರಜನಶೀಲ ಮಕ್ಕಳು:

ಕೆಲವು ವೇಳೆ ಮಕ್ಕಳು ಕ್ರೀಡೆ, ಸಂಗೀತ, ನೃತ್ಯ ಮತ್ತು ಕಲೆಯಂತಹ ಕ್ಷೇತ್ರಗಳಲ್ಲಿ ವಿಶೇಷ ಪ್ರತಿಭೆ ಹೊಂದಿರುತ್ತಾರೆ. ಈ ವಿಶೇಷ ಸಾಮರ್ಥ್ಯವು ವಿಜ್ಞಾನ, ಗಣಿತ ಅಥವಾ ಭಾಷೆಯಂತಹ ಶೈಕ್ಷಣಿಕ ಕ್ಷೇತ್ರಗಳಲ್ಲಿಯೂ ಇರಬಹುದು. ಅವರು ತರಗತಿಯಲ್ಲಿ ನೀರಸವಾಗಿ ಇರುತ್ತಾರೆ. ಏಕೆಂದರೆ ನಮ್ಮ ಶಿಕ್ಷಣ ವ್ಯವಸ್ಥೆಯು ಯಾವ ರೀತಿಯಲ್ಲೂ ಪ್ರತಿಭೆಗೆ ಅನುಕೂಲ ಮಾಡಿಕೊಡುವುದಿಲ್ಲ. ಕೆಲವು ಮಕ್ಕಳನ್ನು ತರಗತಿಯಲ್ಲಿ ಅದರ ಅನನ್ಯ ವಿಚಾರಗಳು, ವಿಭಿನ್ನ ಆಲೋಚನಾ ವಿನ್ಯಾಸಗಳಿಂದಾಗಿ ತೊಂದರೆ ಕೊಡುವವರೆಂದು ಹಣೆಪಟ್ಟಿ ಕಟ್ಟಲಾಗುತ್ತದೆ. ಇಂತಹ ಮಕ್ಕಳಿಗೆ ನಮ್ಮ ದೈನಂದಿನ ತರಗತಿ ಚಟುವಟಿಕೆಯ ಬೇಸರವುಂಟು ಮಾಡುತ್ತದೆ. ಪ್ರಸ್ತುತದಲ್ಲಿ ಶಿಕ್ಷಣ ವ್ಯವಸ್ಥೆಯು ಶೈಕ್ಷಣಿಕ ಸಾಫಲ್ಯದ ಮೇಲೆ ಕೇಂದ್ರೀಕೃತವಗಿ ಮಕ್ಕಳ ರೇಖಾತ್ಮಕ ಬೆಳವಣಿಗೆಗೆ ಗಮನ ನೀಡುತ್ತದೆ. ಇದು ಪ್ರತಿಭಾವಂತ ಮತ್ತು ಸೃಜನಶೀಲ ಮಕ್ಕಳನ್ನು ಶಾಲಾ ಚಟುವಟಿಕೆಗಳಲ್ಲಿ ಅನಾನುಕೂಲತೆಗೆ ಒಳಪಡಿಸುತ್ತದೆ. ಅವರು ಶಾಲಾ ವ್ಯವಸ್ಥೆಯನ್ನು ಬಿಟ್ಟುಬಿಡಬಹುದೆಂಬ ಅಪಾಯವೂ ಇದೆ.

### 7.5.5. ಇತರರು – ಕಡಿಮೆ (ನ್ಯೂನ) ಸಾಧಕರು, ಅಲ್ಪಸಂಖ್ಯಾತ ಸಮುದಾಯಗಳು, ಭೌಗೋಳಿಕ ಅಡತಡೆಗಳು:

ನ್ಯೂನ ಸಾಧಕರು ಶಾಲೆಗಳಲ್ಲಿರುವ ತಮ್ಮ ಪೂರ್ಣಸಾಮರ್ಥ್ಯಗಳ ಮಟ್ಟಕ್ಕೆ ಕಾರ್ಯನಿರ್ವಹಿಸಲಾಗದ ಮತ್ತೊಂದು ಗುಂಪಾಗಿದೆ. ಕೆಲವು ಮಕ್ಕಳಪೂರ್ಣ ಸಾಮರ್ಥ್ಯವು ಸುತ್ತಲಿನ (ವಿನೋದಗಳ) ಭಂಗಕಾರಕಗಳ ಕಾರಣದಿಂದಾಗಿ ಅರಳಲಾರದು. ಅದು ದೂರದರ್ಶನ. ಗಣಕಯಂತ್ರ, ಅಥವಾ ಸಮಾಜದಲ್ಲಿನ ಇತರ ಸುಖಗಳಿಗೆ ಸುಲಭ ಅವಕಾಶಗಳ ರೂಪದಲ್ಲಿರಬಹುದು. ಕಾರ್ಯನಿರ್ವಹಣೆಗೆ ಒತ್ತಡ, ಶಾಲೆಗಳಿಂದ ಪೋಷಕರಿಂದ ಅತವಾ ತನ್ನಿಂದ ಅತಿಯಾದ ಅಪೇಕ್ಷೆಗಳು, ಅನಮ್ಯ ಮತ್ತು ಏಕತಾನತೆಯ ಶಾಲಾ ಚಟುವಟಿಕೆಗಳು ಕಾರ್ಯಸಾಧನೆಯಲ್ಲಿ ಕ್ಷೀಣಿಸುವಿಕೆಗೆ ಕಾರಣಗಳಾಗಿರಬಹುದು.

ಕೆಲವು ಸಮುದಾಯಗಳು ಅವರ ಅನನ್ಯ (ವಿಶಿಷ್ಟ) ಶಾರೀರಿಕ, ಭಾಷಾತ್ಮಕ ಅಥವಾ ಸಾಂಸ್ಕೃತಿಕ ಗುಣಲಕ್ಷಣಗಳಿಂದಾಗಿ ಸಮಾಜದಲ್ಲಿ ಸಾಮೂಹಿಕ ಭೇಧಭಾವವನ್ನು ಎದುರಿಸುತ್ತಾರೆ. ಅವರ ಜೀವನಶೈಲಿ, ಭಾಷೆ, ಸಂಸ್ಕೃತಿ, ಮೂಲ ಅಥವಾ ನಂಬಿಕೆ ಅವರ ಸುತ್ತಲಿರುವ ಬಹುಸಂಖ್ಯಾತ ಜನರಿಗಿಂತ ಭಿನ್ನವಾಗಿರುತ್ತದೆ. ಅವರನ್ನು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಜನರೆಂದು ಗುರುತಿಸಲಾಗುತ್ತದೆ. ಇಂತಹ ಗುಂಪಿಗೆ ಸೇರಿರುವುದರಿಂದ ಸಮಾಜದಲ್ಲಿ ಅವರ ಭಾಗವಹಿಸುವಿಕೆ ಸೀಮಿತವಾಗಿರುತ್ತದೆ. ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಮಕ್ಕಳಲ್ಲಿ ಬಡತನ, ಊನಶಕ್ತತೆ ಮುಂತಾದ ಇತರ ಅಪಾಯದ ಅಂಶಗಳು ಸೇರಿದಾಗ ಅನಾನುಕೂಲತೆ ದ್ವಿಗುಣಗೊಳ್ಳುತ್ತದೆ.

ವಾಸಸ್ಥಳವು ಕೆಲವು ವೇಳೆ ಸೂಕ್ತ ಪರಿಸರದಲ್ಲಿ ಶಿಕ್ಷಣ ಬಯಸುವುದರಿಂದ ಮಕ್ಕಳನ್ನು ತಡೆಯುತ್ತದೆ. ಬೆಟ್ಟಪ್ರದೇಶಗಳು, ಬಹುದೂರದ ಸ್ಥಳಗಳು, ಸಾರಿಗೆ ವ್ಯವಸ್ಥೆ ಇಲ್ಲದೆ ಬೇರ್ಪಡಿಸಲ್ಪಟ್ಟ ಪ್ರದೇಶಗಳು ಕಿರಿಯರನ್ನು ಶಾಲೆ ಅರಸಿ ಬರಲು ಸಾಧ್ಯವೇ ಇಲ್ಲದಂತೆ ಮಾಡುತ್ತವೆ.

ನಿಮ್ಮ ಪ್ರಗತಿ ಪರಿಶೀಲಿಸಿ – 4

1. ತರಗತಿಯಲ್ಲಿ ಕಂಡುಬರುವ ಎರಡು ವಿಧದ ಇಂದ್ರಿಯ ದೋಷಗಳು ಯಾವುವು?

2. ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳಲ್ಲಿ ಕಡಿಮೆ ಸಾಧನೆಗೆ ಸಂಭಾವ್ಯ (ಇರಬಹುದಾದ) ಕಾರಣಗಳಾವುವು?

ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು: 1

1. ಒಳಗೊಳ್ಳುವ ಶಿಕ್ಷಣವು ಶಿಕ್ಷಣ ವ್ಯವಸ್ಥೆಯಲ್ಲಿ ನಿರ್ಲಕ್ಷಿಸಲ್ಪಡುವ ಅಪಾಯವುಳ್ಳ ಎಲ್ಲ ಮಕ್ಕಳಿಗೂ ಶಿಕ್ಷಣ ಒದಗಿಸುವ ಕ್ರಮ.

2. ಪ್ರತಿ ಮಗುವೂ ಗುಂಪಿಗೆ ಸೇರಿದೆ ಎಂಬುದನ್ನು ಒಪ್ಪಿಕೊಳ್ಳ ಎಲ್ಲ ಮಕ್ಕಳ ಭಾಗವಹಿಸುವಿಕೆಯನ್ನು ಖಾತ್ರಿಪಡಿಸಿ, ತರಗತಿಯ ಸಂಸ್ಕೃತಿಯನ್ನು ಮರುಸಂರಚಿಸಿ.

3. ಶಾಲೆಯ ವಾತಾವರಣವು ಎಲ್ಲ ಮಕ್ಕಳ ಲಾಭಕ್ಕಾಗಿ ಸುಧಾರಿಸಬಹುದು ಈ ರೂಢಿಯು ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ವ್ಯಾಪಿಸಿರುವ ಭೇದಭಾವವನ್ನು ನಿವಾರಿಸಬಹುದು.

4. ಸಮನ್ವಯ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಪ್ರಚಲಿತ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಳ್ಳಬೇಕು ಮತ್ತು ಹೆಚ್ಚುವರಿ ಬೆಂಬಲಕ್ಕೆ ಮಗುವನ್ನು ಸಂಪನ್ಮೂಲ ಕೊಠಡಿಗೆ ಕಳುಹಿಸಲಾಗುವುದು. ಒಳಗೊಳ್ಳುವ ಶಿಕ್ಷಣದಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಮಕ್ಕಳ ಅವಶ್ಯಗಳೀಗೆ ಹೊಂದುವಂತೆ ಮಾರ್ಪಡಿಸಲಾಗುತ್ತದೆ ಮತ್ತು ಅಗತ್ಯವಾದ ಎಲ್ಲ ಬೆಂಬಲವನ್ನೂ ತರಗತಿಯಲ್ಲಿ ಒದಗಿಸಲಾಗುವುದು.

ನಿಮ್ಮ ಪ್ರಗತಿ ಪರಿಶೀಲಿಸಿ – 2

1. ಕಲಿಕಾರ್ಥಿಗಳಲ್ಲಿ ದೈವಿಧ್ಯತೆ, ಕಲಿಕಾ ಸಂಪನ್ಮೂಲಗಳ ಲಭ್ಯತೆ, ಶಿಕ್ಷಕರ ಸಿದ್ಧತೆಯ ಸ್ತಿತಿ ಮತ್ತು ಅನಮ್ಯ ಮೌಲ್ಯಮಾಪನವ್ಯವಸ್ಥೆ.

ನಿಮ್ಮ ಪ್ರಗತಿ ಪರಿಶೀಲಿಸಿ – 3

1. ಮಾರ್ಪಾಡು, ಬದಲಿ ವಿಧಾನ, ಬಿಟ್ಟುಬಿಡುವಿಕೆ, ಪರಿಹಾರ.

ನಿಮ್ಮ ಪ್ರಗತಿ ಪರಿಶೀಲಿಸಿ – 4

1. ಶ್ರವಣ ಮತ್ತು ದೃಷ್ಟಿದೋಷಗಳು
2. ಬಾಲ್ಯಾವಸ್ಥೆಯ ಮಧುಮೆಹ, ಸಂಧಿವಾತ, ಸಾಮಾನ್ಯ ಬಲಹೀನತೆಗೆ ಕಾರಣವಗುವ ನ್ಯೂನಪೋಷಣೆ.

ಸಾರಾಂಶಗೊಳಿಸೋಣ:

ಪ್ರತಿ ಮಗುವಿನ ಗರಿಷ್ಠವಿಕಾಸಕ್ಕಾಗಿ ಸಮಾನ ಅವಕಾಶ ಒದಗಿಸುವುದಕ್ಕೆ ದೇಶವು ಬದ್ಧವಾಗಿದೆ. ಈ ಧ್ಯೇಯ (ಕಾಣ್ಕೆ)ವನ್ನು ತಲುಪಲು ಮಾರ್ಗದರ್ಶಿ ತತ್ವವಾಗಿ “ಒಳಗೊಳ್ಳುವ ಶಿಕ್ಷಣವು” ಹೊರಹೊಮ್ಮಿದೆ. ಇತ್ತೀಚಿನ ಎಲ್ಲ ಶಿಕ್ಷಣ ಯೋಜನೆಗಳು ಮತ್ತು ನೀತಿಗಳು ಕೆಲವು ಮಕ್ಕಳಿಗೆ ಶಿಕ್ಷಣ ಇಲ್ಲ ಎಂದು ಹೇಳುವುದಕ್ಕೆ ಪೂರ್ಣವಿರಾಮ ಹಾಕುವಂತಹ

ಶಿಕ್ಷಣ ವ್ಯವಸ್ಥೆಯನ್ನು ಬೆಂಬಲಿಸಿವೆ. ಒಳಗೊಳಿಸುವಿಕೆಯು ಮಕ್ಕಳಲ್ಲಿ ಆಂತರಿಕ ಶಕ್ತಿಯನ್ನು ಬೆಳೆಸಿ ಆತ್ಮವಿಶ್ವಾಸವನ್ನು ನೆಲೆಗೊಳಿಸುವುದೇ ಆಗಿದೆ. ಅದು ಬಾಹ್ಯಅಂಶಗಳ ಕಾರಣದಿಂದ ಹೇರಲ್ಪಟ್ಟ ಇತಿಮಿತಿಗಳನ್ನು ಪರಿಗಣಿಸದೆ ಭಿನ್ನತೆಗೆ ಬೆಲೆ ಕೊಡುವುದೇ ಆಗಿದೆ. ಶಿಕ್ಷಕರು ಶಾಲೆಯಲ್ಲಿ ವಿದ್ಯಾರ್ಥಿಗಳ ವೈವಿಧ್ಯತೆಗೆ ಸ್ಪಂದಿಸುವ ರೂಢಿಯ ಮೇಲೆ ಕೇಂದ್ರೀಕರಿಸಬೇಕು. ಎಲ್ಲ ಮಕ್ಕಳಿಗಾಗಿ ಇರುವ ಶಿಕ್ಷಣ ಕಾರ್ಯಕ್ರಮದಲ್ಲಿ ನ್ಯೂನತೆಗಳುಳ್ಳ ಮಕ್ಕಳು ಭಾಗವಹಿಸುವುದನ್ನು ವಿವರಿಸಲು ಸಮನ್ವಯ ಎಂಬ ಪದವನ್ನು ಬಳಸಲಾಗುತ್ತಿತ್ತು. ಒಳಗೊಳಿಸುವಿಕೆಯನ್ನು ಅನುಷ್ಠಾನಗೊಳಿಸಲು ಸಮನ್ವಯವು ನಮ್ಮನ್ನು ಸಿದ್ಧಗೊಳಿಸಿತೆಂಬುದರಲ್ಲಿ ಅನುಮಾನವೇ ಇಲ್ಲ. ಒಳಗೊಳಿಸುವಿಕೆಯು ಮಗುವನ್ನು ಮಾರ್ಪಡಿಸುವ ಬದಲು ವ್ಯವಸ್ಥೆಯಲ್ಲಿಯೇ ಬದಲಾವಣೆ ಉಂಟುಮಾಡುವುದಕ್ಕೆ ಪ್ರಾಧ್ಯನ್ಯತೆ ಕೊಡುತ್ತದೆ. ವಿದ್ಯಾರ್ಥಿಗಳಲ್ಲಿನ ವಿವಿಧತೆ, ಶಿಕ್ಷಕರ ಸಿದ್ಧತಾಸ್ಥಿತಿ, ಕಳಪೆ ಮೂಲಸೌಕರ್ಯಗಳು, ಸಂಪನ್ಮೂಲಗಳು ಲಭ್ಯವಿಲ್ಲದಿರುವುದು ಮತ್ತು ಅನಮ್ಯ ಮೌಲ್ಯಮಾಪನ ವ್ಯವಸ್ಥೆಗಳು ಗುರಿಸಾಧನೆಯ ಹಾದಿಯಲ್ಲಿ ಅಡತಡೆಗಳನ್ನುಂಟುಮಾಡುವ ಅಂಶಗಳಾಗಿವೆ. ಶಿಕ್ಷಕರು ಒಳಗೊಳ್ಳುವ ತರಗತಿಗಳನ್ನು ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸಲು ತಯಾರಾಗಬೇಕು. ನ್ಯೂನತೆಯುಳ್ಳ ಮಕ್ಕಳು, ಪ್ರತಿಭಾವಂತ ಹಾಗೂ ಸೃಜನಶೀಲ ಮಕ್ಕಳು, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಹಾಗೂ ಆರ್ಥಿಕವಾಗಿ ವಂಚಿತರಾದ ಮಕ್ಕಳು ಶಾಲೆಗಳಲ್ಲಿ ಸಮಸ್ಯೆ ಎದುರಿಸುತ್ತಾರೆ. ಸೂಕ್ತ ಸಾಮಗ್ರಿಗಳ ಬಳಕೆ ಮಾಡುವ ಹಾಗೂ ಸರಳವಾದ ನಿರ್ವಹಣಾ ತಂತ್ರಗಳ ಮೂಲಕ ತರಗತಿಯಲ್ಲಿ ಈ ಮಕ್ಕಳ ಕಲಿಕಾ ಅವಶ್ಯಕತೆಗಳನ್ನು ಸಂಬೋಧಿಸಬೇಕಾಗಿದೆ.

### 7.7 ಪರಾಮರ್ಶನ ಗ್ರಂಥಗಳು :


1. Jhulka, A. (2006) "Including Children and youth with disabilities in education – a guide fro practioners" NCERT, New Delhi.
2. Right to Education Bill (2005 Draft, enacted 2009) Available online.
3. Internet Source, SSA (2002). 'Basic features of SSA', Inclusive education in SSA, Retrieved from www.ssa.nic.in/ inclusive_ education / ssa_plan_manualaviable online
4. Mani, M.N.g. (2000). Inclusive Education in Indian Context. International Human Resource Development Center (IHRDC) for the disabled, Coimbatore : Ramakrishna Mission Vivekannada University.
5. Swarup, S. (2007). Inclusive Education, Sixth Survey of Educational Research 1993 N. Delhi. : 2000. NCERT.
6. Hallahan, D.P., Kauffma, J.M., Pullen, P.C. (2009). Exceptional Learners : An Introduction to Education (11th Ed.) USA: Allyn & Bacon, Pearson Education. Inc.
7. Alur. M. & Evans, D (2011) "Attitude towards Inclusive Education: Gaps Between Belief and Practice". International Journal of Special Education, Vol 26, No. 1
8. Kalyanpur, M. (2007) "Equaluity, Quality and Quanityt : Challenges in Inclusive Education Policy and Service Provision in India". International Journal of Inclusive Education, 2007, Vol 2, No.1.

# ಘಟಕ 8

# ವಿಶೇಷ ಅಗತ್ಯತೆಗಳುಳ್ಳ ಮಕ್ಕಳು – ಪರಿಕಲ್ಪನೆ

ಸಂರಚನೆ:


| | |
|---|---|
| 8.0 | ಪೀಠಿಕೆ |
| 8.1 | ಕಲಿಕಾ ಉದ್ದೇಶಗಳು |
| 8.2 | ವಿಶೇಷ ಅಗತ್ಯತೆಗಳುಳ್ಳ ಮಕ್ಕಳನ್ನು ಅರ್ಥಮಾಡಿಕೊಳ್ಳುವುದು |
| 8.2.1. | ಜ್ಞಾನಾತ್ಮಕ ನ್ಯೂನತೆ |
| 8.2.2. | ಶ್ರವಣ ಹಾಗೂ ವಾಕ್ ದೋಷಗಳು |
| 8.2.3. | ವಾಗ್ದೋಷಗಳು |
| 8.2.4. | ದೃಷ್ಟಿದೋಷ |
| 8.2.5. | ಚಲನ ದೋಷಗಳು |
| 8.2.6. | ಬಹ ಅಂಶದೋಷಗಳು |
| 8.2.7. | ಕಲಿಕಾ ನ್ಯೂನತೆ |
| 8.2.8. | ಸಂವೇದನಾತ್ಮಕ ಮತ್ತು ವರ್ತನಾತ್ಮಕ ಅಸ್ವಸ್ಥತೆ |
| 8.2.9. | "ಕಾಯುತ್ತಿರುವ ಮಕ್ಕಳ" ಪರಿಕಲ್ಪನೆ |
| 8.3 | ಆರಂಭಿಕ ಗುರುತಿಸುವಿಕೆ, ಮೌಲ್ಯಾಂಕನ ಮತ್ತು ಮಧ್ಯವರ್ತನೆ |
| 8.3.1. | ನ್ಯೂನತೆಗಳನ್ನು ಗುರುತಿಸುವಿಕೆ |
| 8.3.2. | ಮೌಲ್ಯಾಂಕನ (ಅಳತೆ) |
| 8.3.3. | ಆರಂಭಿಕ ಮಧ್ಯವರ್ತನೆ |
| 8.4 | ನ್ಯೂನತೆಯ ಕಾಯ್ದೆ ಮತ್ತು ನೀತಿಗಳು |
| 8.4.1 | ನ್ಯೂನತೆಯುಳ್ಳ ವ್ಯಕ್ತಿಗಳ ಹಕ್ಕುಗಳ ಕುರಿತ ಒಡಂಬಡಿಕೆ |
| 8.4.2 | ನ್ಯೂನತೆಯುಳ್ಳ ವ್ಯಕ್ತಿಗಳ ಕಾಯ್ದೆ – 1995 |
| 8.4.3 | ನ್ಯೂನತೆಗಳುಳ್ಳ ವ್ಯಕ್ತಿಗಳ ಹಕ್ಕುಗಳ ಮಸೂದೆ |
| 8.5 | ಸಾರಾಂಶಗೊಳಿಸೋಣ |
| 8.6 | ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು |
| 8.7 | ಪರಾಮರ್ಶನ ಗ್ರಂಥಗಳು |
| 8.8 | ಘಟಕಾಂತ್ಯದ ಅಭ್ಯಾಸಗಳು |


## 8.0 ಪೀಠಿಕೆ

ಹಿಂದಿನ ಘಟಕದಲ್ಲಿ ನೀವು ವಿಶೇಷ ಅಗತ್ಯವಿರುವ ಮಕ್ಕಳು ಯಾರು ಎಂಬುದನ್ನು ಅಧ್ಯಯನ ಮಾಡಿದ್ದೀರಿ, ಈ ಘಟಕದಲ್ಲಿ ವಿವರವಾಗಿ ಚರ್ಚಿಸೋಣ. ಉಳಿದ ಮಕ್ಕಳಿಗೆ ಅಗತ್ಯವಿರದ ವಿಶೇಷ ಗಮನ ಮತ್ತು ನಿರ್ದಿಷ್ಟ ಅವಶ್ಯಕತೆಗಳನ್ನು ಬಯಸುವ ಮಕ್ಕಳನ್ನು ವಿಶೇಷ ಅವಶ್ಯಕತೆ ಇರುವ ಮಕ್ಕಳು ಎನ್ನುತ್ತೇವೆ. ಎಲ್ಲ ತರಗತಿಗಳಲ್ಲೂ ವಿಭಿನ್ನ ಸಾಮರ್ಥ್ಯಗಳುಳ್ಳ ಮಕ್ಕಳು ಇರುತ್ತಾರೆ. ತರಗತಿಯಲ್ಲಿರುವ ವಿವಿಧತೆಗಳನ್ನು ಗುರುತಿಸುವುದು ಮುಖ್ಯ. ನಮ್ಮ ಶಾಲಾ/ ಕಾಲೇಜು ದಿನಗಳಲಿ ನಾವು ಪ್ರತಿಯೊಬ್ಬರೂ ಯಾವುದಾದರೂ ವಿಶೇಷ ಅವಶ್ಯಕತೆಯನ್ನು ಅನುಭವಿಸಿದ್ದೇವೆ.

ವಿಶೇಷ ಅವಶ್ಯಕತೆ ಎಂಬುದು ಒಂದು ಪರಿಕಲ್ಪನೆಯನ್ನು ಗ್ರಹಿಸಲು ಅಥವಾ ಒಂದು ಚಟುವಟಿಕೆಯನ್ನು ಮಾಡಲು (ಸಂಗೀತ, ಕಲೆ ಇತ್ಯಾದಿ) ಹೆಚ್ಚುವರಿ ಸಹಾಯದ ಅಗತ್ಯ. ಯಾರೊಬ್ಬರೂ ಪರಿಪೂರ್ಣರಲ್ಲ. ಸಾಮಾಜಿಕ, ಬೌದ್ಧಿಕ,

ಇಂದ್ರಿಯಾತ್ಮಕ, ಚಲನಾತ್ಮಕ ಅಥವಾ ದೀರ್ಘಕಾಲಿಕ ಅನಾರೋಗ್ಯ ರೂಪದ ಯಾವುದೇ ಸಮಸ್ಯೆಯು ಕಲಿಕೆಯಲ್ಲಿ ತೊಂದರೆಯ ರೂಪದಲ್ಲಿ ವ್ಯಕ್ತವಾಗುತ್ತದೆ. ಈ ಘಟಕವು ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಅರ್ಥಗಳು, ಕಾರಣಗಳು, ಆರಂಭಿಕ ಮಧ್ಯವರ್ತನೆ ಮತ್ತು ಗುರುತಿಸುವಿಕೆಗಳ ಬಗ್ಗೆ ತಿಳಿಸುತ್ತದೆ.

**8.1. ಕಲಿಕಾ ಉದ್ದೇಶಗಳು:**

ಈ ಘಟಕದ ಅಧ್ಯಯನದ ನಂತರ ನೀವು ಈ ಸಾಮರ್ಥ್ಯಗಳನ್ನು ಗಳಿಸುವಿರಿ.

- ವಿಶೇಷ ಅಗತ್ಯವುಳ್ಳ ಮಕ್ಕಳು ಎಂಬುದರ ಅರ್ಥ ವಿವರಿಸುವಿರಿ.
- ವಿವಿಧ ರೀತಿಯ ನ್ಯೂನತೆಗಳನ್ನು (ಊನಶಕ್ತತೆ) ಗುರುತಿಸುವಿರಿ (ಜ್ಞಾನಾತ್ಮಕ ನ್ಯೂನತೆ, ಶ್ರವಣದೋಷ, ಚಲನಾದೋಷ, ವಾಕ್‌ದೋಷ, ಕಲಿಕಾ ನ್ಯೂನತೆಗಳು ಮತ್ತು ಬಹು ಅಂಶ ನ್ಯೂನತೆಗಳು)
- ಆರಂಭಿಕ ಗುರುತಿಸವಿಕೆ, ಮಧ್ಯವರ್ತನೆ ಮತ್ತು ಪರೀಕ್ಷೆಗಳ ಅಗತ್ಯವನ್ನು ಸಮರ್ಥಿಸುವಿರಿ.
- (ಸಿ.ಡಬ್ಲ್ಯೂ.ಎಸ್.ಎನ್.) ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಂಬಂಧಿಸಿದ ಅಂಶಗಳನ್ನು ಗುರ್ತಿಸುವುದು ಮತ್ತು ಸಂಬೋಧಿಸುವುದರಲ್ಲಿ ಶಿಕ್ಷಕರ ಪಾತ್ರವನ್ನು ವ್ಯಾಖ್ಯಾನಿಸುವಿರಿ.
- ಪ್ರತಿ ಗುಂಪಿನ ನ್ಯೂನತೆಗಳಿಗೆ ಕಲಿಕಾ ಅವಶ್ಯಕತೆಗಳನ್ನು ಸೂಚಿಸುವಿರಿ.
- ಪಿ.ಡಬ್ಲ್ಯೂ.ಡಿ. ಕಾಯ್ದೆ 1995, ಯು.ಎನ್.ಸಿ.ಆರ್.ಪಿ.ಡಿ. ಗಳಲ್ಲಿ ಚರ್ಚೆಯಾಗಿರುವ ಪ್ರಮುಖ ವಿಚಾರಗಳನ್ನು ಎತ್ತಿತೋರಿಸುವಿರಿ.
- ಸಿ.ಡಬ್ಲ್ಯೂ.ಎಸ್.ಎನ್. ಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪಾತ್ರವನ್ನು ವಿವರಿಸುವಿರಿ.

**8.2 ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನು ಅರ್ಥಮಾಡಿಕೊಳ್ಳುವುದು :**

ನನ್ನ ಮಗುವಿಗೆ ವಿಶೇಷ ಅವಶ್ಯಕತೆ ಇದೆಯೆ? ಎಂಬುದು ಹಲವು ಚಿಕ್ಕ ಮಕ್ಕಳ ಪೋಷಕರು ಕೇಳುವ ಪ್ರಶ್ನೆ ಇದು ಮುಂದುವರೆದು ಮತ್ತೊಂದು ಮುಖ್ಯ ಪ್ರಶ್ನೆ ಮುಂದಾಗುತ್ತದೆ. ವಿಶೇಷ ಅವಶ್ಯಕತೆ ಯಾವುದು ? 14 ತಿಂಗಳ ಮಗುವೊಂದು ಇತರ ಅನೇಕ ಮಕ್ಕಳಂತೆ ನಡೆಯದೇ ಇರಬಹುದು. ಈ ಮಗುವಿಗೆ ವಿಶೇಷ ಅಗತ್ಯವಿದೆಯೇ? ಮತ್ತೊಂದು ಮಗು ತಾನು ಕೇಳಿದ ಪ್ರತಿಯೊಂದನ್ನು ಪುನರುಚ್ಛರಿಸುತ್ತದೆ – ದೂರದರ್ಶನದಲ್ಲಿ ಬರುವ ಅಂಶಗಳನ್ನೂ ಸೇರಿ. ಇದು ವಿಶೇಷ ಅಗತ್ಯವೆ ? ಮಗುವಿಗೆ ಒಂದು ಅಥವಾ ಹೆಚ್ಚು ವಿಶೇಷ ಅಗತ್ಯತೆಗಳಿದ್ದರೆ, ಕುಟುಂಬಕ್ಕೆ ಸಹಾಯ ಮಾಡಬಲ್ಲ ಸೇವೆಗಳು ಮತ್ತು ಬೆಂಬಲಗಳನ್ನು ಪಡೆಯಲು ಎಲ್ಲಿ ಹೋಗಬಹುದು?

ಚಿಂತೆಗೀಡಾದ ಪೋಷಕರು ಮೊದಲು ಬರುವುದು ಶಿಕ್ಷಕರ ಬಳಿ. ಆದ್ದರಿಂದ ವಿಶೇಷ ಅಗತ್ಯವುಳ್ಳ ಮಕ್ಕಳು ಯಾರೆಂಬುದನ್ನು ಶಿಕ್ಷಕರು ಅರಿತಿರಬೇಕು. ಶಾರೀರಿಕ ತೊಂದರೆಗಳಿಂದಾಗಿ ಗಮನ ಬಯಸುವ ಅಥವಾ ಶಾರೀರಿಕ ಅಥವಾ ಸಂವೇದನಾತ್ಮಕ ಯೋತನೆಗೊಳಗಾಗಿರುವ ಯಾವುದೇ ಮಗುವನ್ನು ವಿಶೇಷ ಅಗತ್ಯವುಳ್ಳ ಮಗುವೆಂದು ಪರಿಗಣಿಸಬೇಕು. ತಡವಾದ ಮೈಲಿಗಲ್ಲುಗಳು, ಮಾಡಲು ಸಾಧ್ಯವಾಗದ ಚಟುವಟಿಕೆಗಳು, ತಿನ್ನಲಾಗದ ಆಹಾರ, ನಾವು ಸಹಜವೆಂದು ಭಾವಿಸುವ, ಆದರೆ ಸಹಾಯವಿಲ್ಲದೆ ಮಾಡಲಾಗದ ಕಾರ್ಯಗಳು.

ವಿಶೇಷ ಅಗತ್ಯತೆಗಳು, ಎಂಬುದು ಹಲವರು ವ್ಯಾಖ್ಯೆಗಳುಳ್ಳ ಪದವಾಗಿದ್ದು, ಅಲ್ಪರೂಪದ ಕಲಿಕಾ ನ್ಯೂನತೆಗಳಿಂದ ತೀವ್ರೂಪದ ಜ್ಞಾನಾತ್ಮಕ ನ್ಯೂನತೆ (ಬುದ್ಧಿಮಾಂದ್ಯತೆ) ಅಂತಿಮ ಹಂತದ ಕಾಯಿಲೆಗಳು, ಆಹಾರ ಒಗ್ಗದಿರುವಿಕೆ ಅಥವಾ ವಿಕಾಸಾತ್ಮಕ ವಿಳಂಬಗಳವರೆಗೂ ವ್ಯಾಪಿಸಿದೆ. ಸಾಧಾರಣಕ್ಕಿಂತ ಮೀರಿ ಒಂದು ಮಗುವಿಗೆ ಸಹಾಯ ಅಗತ್ಯವಾದಾಗ, ಅದಕ್ಕೆ ಪೂರೈಸಬೇಕಾದ ವಿಭಿನ್ನ ಅವಶ್ಯಕತೆಗಳಿದ್ದು ತಲುಪಲು ವಿಭಿನ್ನ ಗುರಿಗಳಿರುತ್ತವೆ.

ನ್ಯೂನತೆ (ಊನಶಕ್ತತೆ)ಯ ವ್ಯಾಖ್ಯೆ : ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ನ್ಯೂನತೆ ಎಂಬ ಪದವನ್ನು ಕಠಿಣತೆ (ಕ್ಲಿಷ್ಟತೆ) – ನೋಡಲು, ಆಲಿಸಲು, ಸಂವಹನದ, ಚಲನೆ, ಕಲಿಕೆಗಳಲ್ಲಿ ಕಠಿಣತೆ ವಿಶೇಷ ಅಗತ್ಯತೆ ಇರುವ ಮಕ್ಕಳನ್ನು

ಅರ್ಥಮಾಡಿಕೊಳ್ಳಲು ನಮಗೆ ಅವರನ್ನು ಆಗಾಗೆ ವಿವರಿಸುವ ವಿವಿಧ ವಿಶೇಷಣಗಳು ಅಥವಾ ಪದಗಳ ಪರಿಚಯವಿರಬೇಕು. ದೋಷ, ನ್ಯೂನತೆ ಮತ್ತು ಅಂಗವಿಕಲತೆ ಮುಂತಾದ ಪದಗಳನ್ನು ಪದೇ ಪದೇ ಪರ್ಯಾಯವಾಗಿಯೂ ಬಳಸಲಾಗುತ್ತದೆ. ಆದರೂ ಈ ಪದಗಳ ನಡುವೆ ಪರಿಕಲ್ಪನಾತ್ಮಕ ವ್ಯತ್ಯಾಸಗಳಿವೆ. ದೋಷ, ನ್ಯೂತೆ ಮತ್ತು ಅಂಗವಿಕಲತೆಗಳ ಅಂತರರಾಷ್ಟ್ರೀಯ ವರ್ಗೀಕರಣದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಪ್ರತಿ ಪದದ ವ್ಯಾಖ್ಯೆಯಲ್ಲಿ ವ್ಯತ್ಯಾಸವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ.

ದೋಷವು ಯಾವುದೇ ಸಂರಚನಾತ್ಮಕ ಹಾನಿ, ನ್ಯೂನತೆಯು ಕಾರ್ಯನಿರ್ವಹಣಾ ಸಾಮರ್ಥ್ಯದ ಕೊರತೆ, ಅಮಗವಿಕಲತೆಯು ಒಬ್ಬ ವ್ಯಕ್ತಿ ಅನುಭವಿಸುವ ಸಾಮಾಜಿಕ ಅನಾನುಕೂಲತೆ.

ಈಗ ನಾವು ನ್ಯೂನತೆಯ ಅರ್ಥ, ಕಾರಣಗಳು ಮತ್ತು ಸಂಭಾವ್ಯ ಪರಿಣಾಮಗಳನ್ನು ಚರ್ಚಿಸೋಣ.

### 8.2.1. ಜ್ಞಾನಾತ್ಮಕ ನ್ಯೂನತೆ:

ಮಾನಸಿಕ ಕಾರ್ಯನಿರ್ವಹಣೆ ಮತ್ತು ಸಂವಹನ, ತನ್ನನ್ನು ನಿರ್ವಹಿಸಿಕೊಳ್ಳುವುದು (ಸ್ವಯಂ ಆರೈಕೆ) ಸಾಮಾಜಿಕ ಕೌಶಲಗಳು ಮುಂತಾದವುಗಳಲ್ಲಿ ಒಬ್ಬ ವ್ಯಕ್ತಿಗೆ ಕೆಲವು ಇತಿಮಿತಿಗಳಿದ್ದಾಗ (ಕೊರತೆಗಳು) ಜ್ಞಾನಾತ್ಮಕ ನ್ಯೂನತೆ ಎಂಬ ಪದ ಬಳಸಲಾಗುತ್ತದೆ. ಈ ಕೊರತೆಗಳು ಮಗು ಸಾಧಾರಣಮಟ್ಟದ ಬೇರೊಬ್ಬ ಮಗುವಿಗಿಂತ ನಿಧಾನವಾಗಿ ಕಲಿಯುವಂತೆ, ವಿಕಾಸ ಹೊಂದುವಂತೆ ಮಾಡುತ್ತದೆ. ಬುದ್ಧಿಮಾಂದ್ಯತೆ ಇರುವ ಮಕ್ಕಳು ಮಾತನಾಡುವುದು, ನಡೆಯುವುದು, ಉಡುಪು ಧರಿಸುವುದು, ತಿನ್ನುವುದು ಮುಂತಾದ ವೈಯಕ್ತಿಕ ಅವಶ್ಯಕತೆಗಳನ್ನು ನಿರ್ವಹಿಸುವುದನ್ನು ಕಲಿಯಲು ಹೆಚ್ಚು ಸಮಯ ತೆಗೆದುಕೊಳ್ಳುತ್ತರೆ. ಅವರು ಶಾಲೆಯಲ್ಲಿ ಕಲಿಯುವುದಕ್ಕೂ ತೊಂದರೆ ಇರುತ್ತದೆ. ಅವರು ಕಲಿಯುತ್ತಾರೆ. ಆದರೆ ಹೆಚ್ಚು ಸಮಯ. ಆದರೆ ಹೆಚ್ಚು ಸಮಯ ಬೇಕಾಗುತ್ತದೆ. ಅವರು ಕಲಿಯಲಾಗದೇ ಇರುವ ಕೆಲವು ಅಂಶಗಳೂ ಇರಬಹುದು.

ಮಾನಸಿಕ (ಬೌದ್ಧಿಕ) ಸವಾಲುಗಳುಳ್ಳ ಮಗುವು ಸಾಮಾನ್ಯ ಬುದ್ಧಿಶಕ್ತಿ ಸಾಮರ್ಥ್ಯಕ್ಕಿಂತ ಕಡಿಮೆ ಸರಾಸರಿ ಬುದ್ಧಿಶಕ್ತಿ ಹೊಂದಿರುವುದು ಮತ್ತು ಬೌದ್ಧಿಕ ವಿಕಾಸವು ನಿಧಾನಗತಿಯಲ್ಲಿ ಸಾಗುತ್ತದೆ. ಮಾಂದ್ಯತೆಯು ಅಲ್ಪಮಟ್ಟದಿಂದ ತೀವ್ರದವರೆಗೆ ವ್ಯಾಪಿಸಿರಬಹುದು. ಇದು ವಿಕಾಸದ ಅವಧಿಯಲ್ಲಿ ಜೀವನದ ಆರಂಭಿಕ ಹಂತದಲ್ಲಿಯೇ ಕಂಡುಬರುತ್ತದೆ.

ಎ) ಅರ್ಥ: ಪ್ರಸ್ತುತದಲ್ಲಿ 'ಜ್ಞಾನಾತ್ಮಕ ನ್ಯೂನತೆ' ಎಂಬ ಪದವನ್ನು ಹಳೆಯ ಪದಗಳಾದ ಬುದ್ಧಿಮಾಂದ್ಯತೆ, ಮಾನಸಿಕ ವಿಕಲತೆ, ಮುಂತಾದವುಗಳ ಬದಲಾಗಿ ಬಳಸಲಾಗುತ್ತಿದೆ. ಪಾರಿಭಾಷಿಕ ಪದದ ಬದಲಾವಣೆಯು 'ಅಂಗವಿಕಲ' ಅಥವಾ 'ಊನಶಕ್ತ' (ನ್ಯೂನತೆಯುಳ್ಳ) ಎಂಬಂತಹ ಪದಗಳಿಗೆ ಸಂಬಂಧಿಸಿದ ಹಣೆಪಟ್ಟಿ ಅಥವಾ ಕಳಂಕದ ಪರಿಣಾಮವನ್ನು ನಿವಾರಿಸುವ ಉದ್ದೇಶದಿಂದ ಮಾಡಲಾಗಿದೆ.

ಮಾನಸಿಕ (ಬೌದ್ಧಿಕ) ಸವಾಲುಗಳುಳ್ಳ ಮಗುವಿನ ಬುದ್ಧಿಮಟ್ಟ (ಐ.ಕ್ಯೂ) ಸಹ ಸರಾಸರಿಗಿಂತ ಕಡಿಮೆ ಇರುತ್ತದೆ. ಅವರಲ್ಲಿ ಕೆಲವರನ್ನು ಸಾಧಾರಣ ಮಟ್ಟದ ಮಕ್ಕಳ ತರಗತಿಯಲ್ಲಿ ತರಬೇತಿಗೊಳಿಸಬಹುದು ಮತ್ತು ತಮಗೂ, ದೇಶಕ್ಕೂ ಉಪಯುಕ್ತರಾಗುವಂತೆ ಮಾಡಬಹುದು. ಆದರೆ ಉಳಿದವರ ಬುದ್ಧಿಮಾಂದ್ಯತೆ ಎಷ್ಟು ತೀವ್ರವಾಗಿರತ್ತದೆಂದರೆ ಅವರನ್ನು ಯಾವುದೇ ಕೆಲಸಕ್ಕೆ ತರಬೇತಿ ಮಾಡಲಾಗುವುದಿಲ್ಲ. ಹೀಗೆ, ಕೆಲವು ಬುದ್ಧಿಮಾಂದ್ಯತೆಯುಳ್ಳ ಮಕ್ಕಳು 'ಶಿಕ್ಷಣ ಪಡೆಯಬಲ್ಲ'ವರು. ಆದರೆ ತೀವ್ರಮಾಂದ ್ಯತೆ ಇರುವವರು 'ತರಬೇತಿ ಪಡೆಯಬಲ್ಲ'ವರು ಮಾತ್ರವೇ ಆಗಿರುತ್ತಾರೆ.

ಬುದ್ಧಿಶಕ್ತಿಮಟ್ಟವನ್ನು ಆಧರಿಸಿ ಬುದ್ಧಿಮಾಂದ್ಯತೆಯನ್ನು ಹೀಗೆ ವರ್ಗಿಕರಿಸಲಾಗಿದೆ.

| ತೀವ್ರತೆಯ ಮಟ್ಟಗಳು | ಬುದ್ಧಿಲಬ್ಧದ ವ್ಯಾಪ್ತಿ |
|---|---|
| ಅಲ್ಪ (ಸೌಮ್ಯ) ಮಟ್ಟದ ಬುದ್ಧಿಮಾಂದ್ಯರು | 50–75 |
| ಮಧ್ಯಮಮಟ್ಟದ ಬುದ್ಧಿಮಾಂದ್ಯತೆ | 35–49 |
| ತೀವ್ರರೂಪದ ಬುದ್ಧಿಮಾಂದ್ಯರು | 20–34 |
| ಗಂಭೀರ ರೂಪದ ಬುದ್ಧಿ ಮಾಂದ್ಯರು | 20 ಕ್ಕಿಂತ ಕಡಿಮೆ |

ಬಿ) ಕಾರಣಗಳು: ಜ್ಞಾನಾತ್ಮಕ ನ್ಯೂನತೆಗಳಿಗೆ ಮುಖ್ಯ ಹಾಗೂ ಪರಿಚಿತ ಕಾರಣಗಳು ಹೀಗಿರಬಹುದು.

ಎ) ಸೋಂಕುಗಲು ಮತ್ತು ಮಾದಕತೆ (ಉದಾಹರಣೆಗೆ, ರುಬೆಲ್ಲ, ಸಿಫಿಲಿಸ್, ಎನ್ಸೆಫಾಲಿಟಿಸ್,ಮೆನಿಂಜೈಟಿಸ್ (ಮೆದುಳಿನ ರೋಗ)

ಬಿ) ಆಘಾತಗಳು ಮತ್ತು ಭೌತಿಕ ಕಾರಕಗಳು (ಉದಾ. ಅಪಘಾತಗಳು, ಜನನ ಪೂರ್ವ, ಜನನ ಕಾಲದ ಮತ್ತು ಜನನಾಂತರದ ಅನೋಕ್ಸಿಯಾ)

ಸಿ) ಚಯಾಪಚಯ ಮತ್ತು ಪೋಷಣೆ (ಉದಾ, ಫಿನಾಯ್ಲಾ ಕಿಟೋನ್ಯೂರಿಯಾ)

ಡಿ) ಸಮಗ್ರ ಮೆದುಳು ಕಾಯಿಲೆ (ಗೆಡ್ಡೆಯಂತಹ)

ಇ) ಜನನ ಪೂರ್ವ ಪ್ರಭಾವ (ಉದಾ.ಜಲಮಸ್ತಿಷ್ಕರೋಗ, ಕಿರಿದಲೆ)

ಎಫ್) ವರ್ಣತಂತು ಸಂಬಂಧಿತ ವೈಪರೀತ್ಯ (ಡೌನ್ಸ್ ಸಿಂಡ್ರೋಮ್ ನಂತಹ)

ಜಿ) ಮನೋವೈದ್ಯಕೀಯ ದೋಷಗಳು (ಇಂದಿಗೂ ಇದನ್ನು ಕಾರಣವೆಂದು ಹೇಳುವುದೇ ಇಲ್ಲ.

ಸಿ) ಜ್ಞಾನಾತ್ಮಕ ದೋಷದಿಂದ ಪ್ರಭಾವಿತವಾಗುವ ಅಂಶಗಳು

ಜ್ಞಾನಾತ್ಮಕ ನ್ಯೂನತೆಯುಳ್ಳ ಒಂದು ಮಗುವು ಸ್ಮರಣೆಯ ಸಮಸ್ಯೆ, ಅರಿವಿನ ಸಮಸ್ಯೆಗಳು, ಸಮಸ್ಯಾ ಪರಿಹಾರದಲ್ಲಿ ತೊಂದರೆಗಳು, ಮತ್ತು ಭಾಷಾ ತೊಂದರೆಗಳನ್ನು ಎದುರಿಸಬಹುದು ಮತ್ತು ಇವು ಗ್ರಹಿಕೆಯಲ್ಲಿ ಮತ್ತು / ಅಥವಾ ಲಿಖಿತ ಮತ್ತು / ಅಥವಾ ಮೌಖಿಕ ಭಾಷೆಯಲ್ಲಿ ತೊಂದರೆಯುಂಟುಮಾಡಬಹುದು.

ಜ್ಞಾನಾತ್ಮಕ ನ್ಯೂನತೆಗಳು ವಿವಿಧ ರೀತಿಯದಾಗಿರಬಹುದು ತೀವ್ರ ಬುದ್ಧಿಮಾಂದ್ಯತೆಯಿಂದ ಹಿಡಿದು ನೆನಪಿನ ಸಮಸ್ಯೆ, ನಿದಿಷ್ಟ ಜ್ಞಾನಾತ್ಮಕ ಕಾರ್ಯದ ಅಭಾವ ಅಥವಾ ನ್ಯೂನತೆ (ಬಹುಮಟ್ಟಿಗೆ ಭಾಷೆ) ಯವರೆಗೆ ವ್ಯಾಪಿಸಿರಬಹುದು. ಆದ್ದರಿಂದ ಕಾರ್ಯ ನಿರ್ವಹಣೆಯ ಮಿತಿಗಳು (ಕೊರತೆಗಳು) ವ್ಯಾಪಕವಾಗಿ ಭಿನ್ನವಾಗಿರಬಹುದು.

### 8.2.2 ಶ್ರವಣದೋಷ ಮತ್ತು ವಾಗ್ದೋಷಗಳು

ಎ) ಅರ್ಥ: ಶ್ರವಣದೋಷ ಎಂದರೆ ಯಾವುದೇ ಮಟ್ಟದ ಮತ್ತು ವಿಧದ ಶ್ರವಣ ಸಂಬಂಧಿತ ಅಶ್ವಸ್ಥತೆ, ಆದರೆ ಕಿವುಡು ಎಂದರೆ ಕಿವಿಯ ಮೂಲಕ ಸಂಭಾಷಣಾ ಮಾತುಗಳುನ್ನು ಬೇರ್ಪಡಿಸಿ ವ್ಯತ್ಯಾಸ ಗ್ರಹಿಸಲು ಸಾಮರ್ಥ್ಯವಿಲ್ಲದಿರುವುದು. ಶ್ರವಣ ದೋಷ ಇರುವ ಮಕ್ಕಳು ಎಂದರೆ, ತಮ್ಮ ಶ್ರವಣ ಶಕ್ತಿಯನ್ನು ಸಂವಹನಕ್ಕಾಗಿ ಬಳಸಲು ಅಸಮರ್ಥರಾದವರು. ಕಡಿಮೆ ಮಟ್ಟದ ಶ್ರವಣದೋಷ ಇರುವವರನ್ನು ಸರಿಯಾಗಿ ಕೇಳಿಸಿದ ಶ್ರವಣಮಾಂದ್ಯತೆಯುಳ್ಳವರು ಎನ್ನುತ್ತೇವೆ. ಸಾಮಾನ್ಯವಾಗಿ ಶಬ್ದವು ಕನಿಷ್ಟ 90 ಡೆಸಿಬಲ್‌ಗಳನ್ನು (ಸಾಧಾರಣಕ್ಕಿಂತ 5 ರಿಂದ 10 ರಷ್ಟು ಹೆಚ್ಚು ಜೋರಾಗಿ) ಮುಟ್ಟಿದಾಗ ಮಾತ್ರ ಕೇಳಿಸುವ, ಒಬ್ಬ ವ್ಯಕ್ತಿಯನ್ನು ಕಿವುಡನೆಂದು ಪರಿಗಣಿಸಬಹುದು ಹಾಗೂ ಇವರಿಗೆ ವರ್ದಿಸಲ್ಪಟ್ಟ ಮಾಡೂ ಸಹ ಅರ್ಥವಾಗುವುದಿಲ್ಲ.

ಶ್ರವಣ ದೋಷವು ಕಿವಿಯ ನರದ ದೌರ್ಬಲ್ಯದಿಂದಾಗಿರಬಹುದು ಅಥವಾ ವಾಹಕ ದೋಷದಿಂದಾಗಬಹದು. ಕಿವಿಯ ನರ ದೌರ್ಬಲ್ಯದಿಂದ ಉಂಟಾಗುವ ಶ್ರವಣ ಹಾನಿಯು (ಒಳಕಿವಿ) ಕಾಕ್ಲಿಯಾ ಮತ್ತು ಶ್ರವಣ ನರದಿಂದ ಆರಂಭವಾಗಿ, ಮೆದಳು ಮತ್ತು ಮೆದುಳಿನ ತೊಗಟೆ (ಕಾರ್ಟೆಕ್ಸ್) ಸೇರಿದಂತೆ ಶ್ರವಣ ಮಾರ್ಗಗಳಿಗೆ ಉಂಟಾಗಿರುವ ಹಾನಿಯ ಕಾರಣದಿಂದ ಆಗಿರುತ್ತದೆ (ಇದು ಶ್ರವಣ ಸಂಕೇತಗಳ ಅರ್ಥ ತಿಳಿಯುವುದನ್ನು ತಡೆಯುತ್ತದೆ ಅಥವಾ ಅಡ್ಡಿಪಡಿಸುತ್ತದೆ) ವಾಹಕ ಶ್ರವಣ ಹಾನಿಯು ಹೊರಕಿವಿ ಮತ್ತು ಮಧ್ಯಕಿವಿಗಳ ಹಾನಿಯಿಂದಾಗಿದ್ದು ಇದು ಶಬ್ದ ಅಲೆಗಳು ಒಳಗಿವಿ ತಲುಪುವುದಕ್ಕೆ ಅಡ್ಡಿಯುಂಟು ಮಾಡುತ್ತದೆ.

ಬಿ) ಕಾರಣಗಳು :

ಕಿವುಡುತನಕ್ಕೆ ಅನುವಂಶೀಯತೆ, ಅಪಘಾತ ಮತ್ತು ಕಾಯಿಲೆಗಳು ಮುಖ್ಯ ಕಾರಣಗಳಾಗಿವೆ. ಎಲ್ಲ ಕಿವುಡುತನದ ಶೇ. 50 ರಷ್ಟು ಮಕ್ಕಳಲ್ಲಿ ಅನುವಂಶಿಕ ಅಂಶಗಳೇ ಸಂಭಾವ್ಯ ಕಾರಣಗಳಾಗಿರುತ್ತವೆ. ಪರಿಸರಾತ್ಮಕ ಕಾರಣಗಳು (ಅಪಘಾತಗಳು, ಕಾಯಿಲೆ, ಸ್ವಯಂ ವಿಷಕಾರಿ ಔಷಧಗಳು ಇತ್ಯಾದಿ) ಹಲವಾರು ಮಕ್ಕಳಲ್ಲಿ ಶ್ರವಣ ದೋಷಕ್ಕೆ ಕಾರಣಗಳಾಗುತ್ತವೆ. ಗರ್ಭಿಣಿ ತಾಯಿಗೆ ತಗಲಿರುವ ರೂಬೆಲ್ಲ, ಮತ್ತಿತರ ವೈರಾಣು ಸೋಂಕುಗಳು ಮಗುವನ್ನು ಕಿವುಡು ಮಾಡಬಹುದು. ಜನನ

ಪ್ರಕ್ರಿಯೆಗೆ ಸಂಬಂಧಿಸಿದ ಆಮ್ಲಜನಕ ಸರಬರಾಜು ನಿಂತು ಹೋಗುವಂತಹ ಹಲವು ಅಪಾಯಗಳು ಶ್ರವಣ ಶಕ್ತಿಯ ಮೇಲೆ ಪ್ರಭಾವ ಬೀರಬಹುದು. ಕಾಯಿಲೆ ಅಥವಾ ಸೊಂಕು ಚಿಕ್ಕ ಮಕ್ಕಳಲ್ಲಿ ಕಿವುಡುತನ ಉಂಟು ಮಾಡಬಹುದು ಸತತವಾದ ಜೋರಾದ ಸದ್ದು, ಶಬ್ದದ ಮಟ್ಟವೂ ಕ್ರಮೇಣ ಮತ್ತು ಅಂತಿಮವಾಗಿ ತೀವ್ರವಾದ ಕಿವಿ– ನರ ಸಂಬಂಧಿತ ಶ್ರವಣ ದೋಷಕ್ಕೆ ಕಾರಣವಾಗುವುದು. ಹಾಗೆಯೇ, ಗೆಡ್ಡೆಗಳು, ಸ್ಫೋಟಕ ಶಬ್ದಕ್ಕೆ ಈಡಾಗುವುದು, ತಲೆಡೆ ಬುರುಡೆ ಅಥವಾ ಕಿವಿಗೆ ನೋವು, ಗಾಯ ಉಂಟಾದಾಗಲೂ ಕಿವುಡುತನ ಉಂಟಾಗಬಹುದು.

ಸಿ) ಶ್ರವಣ ದೋಷದಿಂದಾಗಿ ಪ್ರಭಾವಿತವಾಗುವ ಅಂಶಗಳು:

ಶ್ರವಣದೋಷವುಳ್ಳ ಮಗುವು (ಅದರಲ್ಲಿಯೂ ತೀವ್ರರೂಪದಿಂದ ಗಂಭೀರ ರೂಪದ ಶ್ರವಣ ಹಾನಿ) ಭಾಷೆ ಮತ್ತು ಮಾತು ಕಲಿತು ಸಂವಹನ ಕೌಶಲ್ಯಗಳಿಸಲು ಬಹಳ ಸಮಯ ತೆಗೆದುಕೊಳ್ಳಬೇಕಾಗುವುದು ಇದರಿಂದ ಶಿಕ್ಷಣ ಪಡೆಯಲು ಮತ್ತು ಸಾಮಾಜಿಕ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತವೆ.

**8.2.3 ವಾಗ್ದೋಷಗಳು**

ಎ) ಅರ್ಥ: ವಾಗ್ದೋಷವು ಧ್ವನಿಯ ಬಲ ಅಥವಾ ಅಭಿವ್ಯಕ್ತಿಯ ಸಮಸ್ಯೆಗಳಿಂದ ಹಿಡಿದು ಸಂಪೂರ್ಣ ಧ್ವನಿ ಇಲ್ಲದ ಸ್ಥಿತಿ, ದೀರ್ಘಕಾಲಿಕ ಒರಟುಧ್ವನಿ, ತೊದಲುವಿಕೆ, ಉಗ್ಗುವಿಕೆಯ ವರೆಗೆ ವ್ಯಾಪಿಸಿರಬಹುದು ಮಾತಿನ ಸಮಸ್ಯೆಗಳು ಮಿದುಳು ಪಾರ್ಶ್ವವಾಯು, ಶ್ರವಣದೋಷ ಮತ್ತು ಮೆದುಳಿಗಾದ ಪೆಟ್ಟುಗಳಿಗೂ ಸಂಬಂಧಿಸಿರಬಹುದು. ಮಾತಿನ ಸಮಸ್ಯೆಗಳಿರುವ ಮಕ್ಕಳಿಗೆ ಗ್ರಹಿಕೆ ಹಾಗೂ ತಮ್ಮ ವಿಚಾರಗಳ ಅಭಿವ್ಯಕ್ತಿಯಲ್ಲಿಯೂ ಸಮಸ್ಯೆಗಳಿರಬಹುದು.

ಬಿ. ಕಾರಣಗಳು: ಮಾತು ಕಲಿಕೆ ವಿಳಂಬ: ಬುದ್ಧಿಮಾಂದ್ಯತೆ, ಶ್ರವಣ ದೋಷ ಮತ್ತು ವರ್ತನಾತ್ಮಕ ಸಮಸ್ಯೆಗಳಂತಹ ಹಲವು ಅಂಶಗಳು ಮಾತು ಕಲಿಕೆ ವಿಳಂಬಕ್ಕೆ ಕಾರಣವಾಗಬಹುದು.

ಸೀಳ್ದುಟಿ: ಬಾಯಿಯ ಅಂಗುಳ ಮತ್ತು ತುಟಿಯಲ್ಲಿರುವ ರಚನಾತ್ಮಕ ದೋಷಗಳು ಮಾತಿನ ನ್ಯೂನತೆಗಳಿಗೆ ಕಾರಣವಾಗಬಹುದು. ವಾಗ್ದೋಷಗಳು ಸಂವೇದನಾತ್ಮಕ ಮತ್ತು ಮನೋವೈಜ್ಞಾನಿಕ ಮೂಲಗಳು ಇವೆ ಉದಾಹರಣೆಗೆ ಪ್ರಚೋದನೆಗಳ ಕೊರತೆ, ಹೊಂದಾಣಿಕೆ ಇಲ್ಲದ ವರ್ತನೆ ಅತಿಚಟುವಟಿಕೆ, ಚಲತಾನ್ಮಕ ಅಸಮನ್ವಯ, ಸಾಮಾನ್ಯ ವರ್ತನಾತ್ಮಕ ನ್ಯೂನತೆಗಳು, ಅನುವಂಶೀಯತೆ.

ಸಿ. ಶ್ರವಣ ನ್ಯೂನತೆಯಿಂದ ಪ್ರಭಾವಿತವಾಗುವ ಅಂಶಗಳು

ವಾಗ್ದೋಷದ ಸಮಸ್ಯೆ ಇರುವುದರಿಂದ ಸಾಮಾಜಿಕ ಪರಿಣಾಮಗಳಾಗಬಹುದು. ಅದರಲ್ಲಿಯೂ ಚಿಕ್ಕಮಕ್ಕಳು ವಾಗ್ದೋಷವಿರುವ ಮಕ್ಕಳು ಈ ಕಾರಣಕ್ಕಾಗಿಯೇ ಇತರರ ಸೀಡಿಸುವಿಕೆಗೆ ಒಳಗಾಗಬಹುದು. ಪೀಡಿಸುವಿಕೆಯು ಆತ್ಮಗೌರವ ಕುಂಠಿತವಾಗಲು ಕಾರಣವಾಗುವುದು. ನಂತರದ ಜೀವನದಲ್ಲಿ ಸಾಮಾನ್ಯ ಸಮುದಾಯದಲ್ಲಿ ಪೀಡುಸುವಿಕೆ ಕಡಿಮೆಯಾಗಬಹದು ಏಕೆಂದರೆ ಜನರಿಗೆ ವಯಸ್ಸಾದಂತೆ ಇತರರನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ.

**8.2.4 ದೃಷ್ಟಿ ದೋಷಗಳು**

ಎ) ಅರ್ಥ: ದೃಷ್ಟಿ ದೋಷವು ಮಕ್ಕಳಲ್ಲಿ ದೃಷ್ಟಿ ಮಾಂದ್ಯತೆಯಿಂದ ಹಿಡಿದು ಬೆಳಕ್ನನು ಕಾಣಬಲ್ಲ ಆದರೆ ಆಕೃತಿಗಳನ್ನು ಕಾಣಲಾಗದ ಮತ್ತು ಬೆಳಕನ್ನೇ ಗ್ರಹಿಸಲಾಗದ ಮಕ್ಕಳ ವರೆಗೆ ವ್ಯಾಪಿಸಿರಬಹುದು. ಆದರೆ ಸಾಮಾನ್ಯ ಚರ್ಚೆಗಾಗಿ ಈ ಜನಸಂಖ್ಯೆಯನ್ನು ಎರಡು ವಿಶಾಲ ಗುಂಪುಗಳಾಗಿ – ದೃಷ್ಟಿ ಮಾಂದ್ಯರು ಮತ್ತು ದೃಷ್ಟಿಹೀನಗರು (ಕಾನೂನಿ ಪ್ರಕಾರ ಅಂಧರು) ಎಂದು ವರ್ಗೀಕರಿಸಬಹುದು ಉಪಯುಕ್ತ.

ಒಂದು ಮಗುವಿನ ದೃಷ್ಟಿ ಸಾಮರ್ಥ್ಯವು 20/200 ಅಥವಾ ತಿದ್ದುಪಡಿ ನಂತರ ಇನ್ನೂ ಕಡಿಮೆಯಾದ, ಅವರ ದೃಷ್ಟಿಕ್ಷೇತ್ರವು ತಿದ್ದುಪಡಿಯ ನಂತರ $20^0$ ಗಳಿಗಿಂತ ಕಡಿಮೆ ಇದ್ದರೆ ಆ ಮಗುವನ್ನು ಕಾನೂನಿನ ಪ್ರಕಾರ ಅಂಧ ಎಂದು ಪರಿಗಣಿಸಲಾಗುತ್ತದೆ. ದೃಷ್ಟಿ ಮಾಂದ್ಯತೆಯು (ತಿದ್ದುಪಡಿಯ ನಂತರ) ದೃಷ್ಟಿ ಮಂದವಾಗಿರುವುದು, ಅಸ್ಪಷ್ಟತೆ, ಕಣ್ಣಿನ ಮೇಲೆ ಪೊರೆ, ಮಬ್ಬಾದ ದೃಷ್ಟಿ, ತೀವ್ರರೂಪದ ಸಮೀಪ ದೃಷ್ಟಿ ಅಥವಾ ದೂರದೃಷ್ಟಿ ದೋಷ, ದೃಷ್ಟಿಯ ಏರುಪೇರು, ಕಣ್ಣುಗಳ ಮುಂದೆ ಚುಕ್ಕೆಗಳು, ಬಣ್ಣದ ಏರುಪೇರು, ದೃಷ್ಟಿಕ್ಷೇತ್ರದ ದೋಷಗಳು, ಸುರಂಗದೃಷ್ಟಿ, ಅಕ್ಕಪಕ್ಕದಲ್ಲಿರುವುದು ಕಾಣದೇ ಇರುವುದು. ಬೆಳಕು ಮತ್ತು ಪ್ರಕಾಶಕ್ಕೆ ಅತಿಯಾದ ಸೂಕ್ಷ್ಮತೆ, ಇರುಳುಗುರುಡು ಮುಂತಾದುವನ್ನು ಒಳಗೊಂಡಿರುತ್ತದೆ.

ಬಿ) ಕಾರಣಗಳು: ದೃಷ್ಟಿ ಮಾಂದ್ಯತೆಗೆ ಪ್ರಮುಖ ಕಾರಣಗಳೆಂದರೆ

1) ಎ' ಜೀವಸತ್ವದ ಕೊರತೆ,
2) ಗರ್ಭಾವಸ್ಥೆಯಲ್ಲಿ ಅಥವಾ ಅನುವಂಶೀಯತೆಯಿಂದಾಗಿ ಉಂಟಾಗುವ ಏರುಪೇರುಗಳಿಂದ ಜನ್ಮಜಾತ ಪೊರೆ.
3) ಅಕಾಲಿಕ ಶಿಶು ಇನ್ಯೂಬೇಟರ್‌ನಲ್ಲಿರುವಾಗ ಅತಿ ಹೆಚ್ಚು ಸಾಂದ್ರತೆಯ ಆಮ್ಲಜನಕ ನೀಡಿದಾಗ ಕಣ್ಣಿನ ಪೊರೆ ಬೆಳೆದು ದೃಷ್ಟಿಯೇ ಹೋಗುವ ಸಂದರ್ಭವುಂಟಾಗಬಹುದು.
4) ಕಣ್ಣಿನ ಪೊರೆ ಇದು ಸಾಮಾನ್ಯವಾಗಿ ಮಧ್ಯವಯಸ್ಸು ಅಥವಾ ವೃದ್ಧಾಪ್ಯದಲ್ಲಿ ಕಂಡುಬಂದು ಇದನ್ನು ಶಸ್ತ್ರ ಚಿಕಿತ್ಸೆಯ ಮೂಲಕ ತಿದ್ದುಪಡಿ ಮಾಡಬಹುದು.
5) ಗ್ಲೂಕೋಮಾ, ಕಣ್ಣಿದಲ್ಲಿ ಹೆಚ್ಚಿನ (ಅತಿ) ಒತ್ತಡ, ಇವುಗಳಿಂದಾಗುವ ರೆಟಿನಾದ ಹಾನಿ

ಸಿ) ದೃಷ್ಟಿದೋಷದಿಂದ ಪ್ರಭಾವಿತವಾಗುವ ಅಂಶಗಳು

ದೃಷ್ಟಿ ದೋಷವುಳ್ಳವರು ದೃಷ್ಟಿ ಸಂಬಂಧಿತ ಪ್ರದರ್ಶನ, ಮತ್ತಿತರ ದೃಶ್ಯ ಹೊರ ಹರಿವುಗಳಿಗೆ ಸಂಬಂಧಿಸಿದ (ಅಪಾಯದ ಸೂಚನೆಗಳು) ತೊಂದರೆಗಳನ್ನು ಎದುರಿಸುತ್ತಾರೆ. ಇದರ ಜೊತೆಗೆ ದೃಷ್ಟಿಯ ಮೇಲೆ ಅವಲಂಬಿತವಾದ ಪಟ್ಟಿ ಹಚ್ಚುವ, ಅಥವಾ ಕಾರ್ಯನಿರ್ವಹಣೆಗೆ ಸಂಬಂದಿಸಿದಂತೆ ನಿಯಂತ್ರಕಗಳನ್ನು ಉಪಯೋಗಿಸಲು ಸಮಸ್ಯೆ ಇರುತ್ತದೆ (ಕಣ್ಣು ಕೈಗಳ ನಡುವಿನ ಹೊಂದಾಣಿಕೆ ಅಗತ್ಯವಿದ್ದಾಗ, ಉದಾ. ಗಣಕಯಂತ್ರದ ಮೌಸ್‌ಬಳಕೆ) ಲಿಖಿತ ಕಾರ್ಯ ವಿಧಾನ ಸೂಚನೆಗಳು, ದಾಖಲು ಮಾಡುವುದು ಉಪಯೋಗಿಸಲು ಆಗದೇ ಇರಬಹುದು ಕುಶಲತೆಯಿಂದ ಕಾರ್ಯನಿರ್ವಹಿಸುವುದು ಕಠಿಣವಾಗಬಹುದು. (ಉದಾ. ಆಳವಡಿಸುವುದು, ನಿಯೋಜಿಸುವುದು, ಜೋಡಣೆ)

ವರ್ಣಾಂಧತೆ ಇರುವವರಿಗೆ ಕೆಲವು ಬಣ್ಣಗಳ ಜೊತೆಗಳನ್ನು ವರ್ಗೀಕರಿಸುವುದು ಕಠಿನವಾಗಬಹುದು. ಇದು ಮಾಹಿತಿಯು ಬಣ್ಣಗಳ ಆಧಾರದ ಮೇಲೆ ಕೋಡಿಂಗ್ ಮಾಡಿದಾಗ ಅಥವಾ ಬಣ್ಣದ ಜೊತೆಗಳನ್ನು ಬಳಸಿದಾಗ ಹೊರತುಪಡಿಸಿ ಹೆಚ್ಚಿನ ಸಮಸ್ಯೆಯನ್ನು ಉಂಟು ಮಾಡಲಾರರು.

### 8.2.5 ಚಲನಾತ್ಮಕ ದೋಷಗಳು.

ಎ. ಅರ್ಥ:

ಚಲನಾತ್ಮಕ ದೋಷಗಳುಳ್ಳ ಮಕ್ಕಳು ವಿಶೇಷ ಅಗತ್ಯತೆಗಳುಳ್ಳ ಮಕ್ಕಳಲ್ಲಿ ಒಂದು ವರ್ಗವಾಗಿದ್ದು ಇತರರಂತೆಯೇ ಸಮಾಜದ ಸದಸ್ಯರಾಗಿರುತ್ತಾರೆ. ಮನೋವೈಜ್ಞಾನಿಕ ಸಂರಚನೆಯಲ್ಲಿ ಈ ಮಕ್ಕಳಿಗೂ ಸಾಮಾನ್ಯ (ಆರೋಗ್ಯವಂತ) ಮಕ್ಕಳಿಗೂ ವ್ಯತ್ಯಾಸವಿಲ್ಲ ಅವರು ಸಮಾಜದಲ್ಲಿ ತಮ್ಮದೇ ವಿಶಿಷ್ಟತೆಯನ್ನು ಪ್ರಭಾವವನ್ನೂ ಹೊಂದಿರುತ್ತಾರೆ. ಈ ಹಿಂದೆ ಅವರನ್ನು ಅನುಕಂಪ (ಸಹಾನುಭೂತಿ)ದ ಅಥವಾ ಕರುಣೆಯ ದೃಷ್ಟಿಯಿಂದ ನೋಡಲಾಗುತ್ತಿತ್ತು. ಆದರೆ ಸಾಮಾಜಿಕ ಅರಿವಿನ ಜಾಗೃತಿಯಿಂದಾಗ ಭಿನ್ನ ಸಾಮರ್ಥ್ಯವುಳ್ಳವರ ಬಗ್ಗೆ ಸಾಮಾನ್ಯ ಮನೋಭಾವವೂ ಬದಲಾವಣೆಗೊಳಗಾಗಿದೆ.

ಮಗು ಸಾಧಾರಣ ಮಕ್ಕಳಂತೆ ಶಾಲಾ ಚಟುವಟಿಕೆಗಳಲ್ಲಿ ಸಾಮಾನ್ಯ ಪ್ರಗತಿ ಸಾಧಿಸುವುದಕ್ಕೆ ಅಡ್ಡಿಪಡಿಸುವ ಶಾರೀರಿಕ ಸ್ಥಿತಿಯನ್ನು ಚಲನಾತ್ಮಕ ನ್ಯೂನತೆ ಎನ್ನಲಾಗವುದು. ಇಂತಹ ಮಕ್ಕಳಿಗೆ ವಿಭಿನ್ನ ಸಾಮರ್ಥ್ಯಗಳನ್ನು ನಿಯಂತ್ರಿಸಲು ಅಥವಾ ಪರಿಹರಿಸಿಕೊಳ್ಳಲು ವಿಶೇಷ ಗಮನ ಮತ್ತು ಉಪಕರಣ (ಸಾಧನ)ಗಳ ಅಗತ್ಯವಿದೆ.

ಬಿ) ಕಾರಣಗಳು:

ಸಂಧಿತವಾತ: ಇದು ಸಾಮಾನ್ಯವಾಗಿ ಚಲನೆಯ ವ್ಯಾಪ್ತಿಯನ್ನು ಕಡಿಮೆ ಮಾಡಿ ಬಲಹೀನತೆಯನ್ನುಂಟು ಮಾಡುವಂತಹ ಕೀಲುಗಳಲ್ಲಿ ನೋವಿನ ಸ್ಥಿತಿ. ರುಮಟಾಯ್ಡ್ ಸಂಧಿವಾತವು ನಿರಂತರವಾಗಿರುವ ಕಾಯಿಲೆಯಾಗಿದ್ದು ಮೂಳೆಗಳ ಸಂಧಿವಾತ ಕೀಲುಗಳಲ್ಲಿ ಸವೆತ ಉಂಟುಮಾಡುವ ಕಾಯಿಲೆಯಾಗಿರುತ್ತದೆ.

ಮೆದುಳಿನ ಪಾರ್ಶ್ವವಾಯು: ಇದು ಮೆದಳು ಪಕ್ವತೆ ಹೊಂದುವ ಮೊದಲೇ ಮೆದುಳಿನ ಚಲನಾ ಕ್ಷೇತ್ರಗಳಿಗೆ ಹಾನಿಯುಂಟು ಮಾಡುವ ಸ್ಥಿತಿ. (ಇಂತಹ ಬಹುತೇಕ ಮಕ್ಕಳಿಗೆ ಜನನಕಾಲ ಅಥವಾ ಜನನಾನಂತರದ ಸ್ವಲ್ಪಕಾಲದಲ್ಲಿ ಹೀಗಾಗುತ್ತದೆ) ಮೆದುಳಿನ ಪಾಶ್ವವಾಯು ಒಂದು ತೊಂದರೆ (ಪೆಟ್ಟು)ಯೇ ವಿನಃ ಕಾಯಿಲೆಯಲ್ಲ (ಕಾಯಿಲೆಯ ಕಾರಣದಿಂದ

ಉಂಟಾಗಬಹುದು ಆದರೆ ಕಾಲ ಕಳೆದಂತೆ ತೀವ್ರಗೊಳ್ಳವುದಿಲ್ಲ ಆದರೆ ಇದಕ್ಕೆ ಚಿಕಿತ್ಸೆ ಇಲ್ಲ) ಬೆನ್ನು ಹುರಿಯ ಗಾಯ (ಪೆಟ್ಟು) ಇದು ಪಾರ್ಶ್ವವಾಯುವಾಗಿ ಪರಿಣಮಿಸಬಹುದು (ಬಲಹೀನತೆ) ಪಾಶ್ವವಾಯು (ಬಲಹೀನತೆ) ವಿನ ಪ್ರಮಾಣ ಮತ್ತು ಪ್ರಭಾವಕೊಳ್ಳಗಾದ ದೇಹದ ಭಾಗಗಳ ವಿವರವು ಬೆನ್ನು ಹುರಿಯ ಎಷ್ಟು ಮೇಲ್ಭಾಗದಲ್ಲಿ ಅಥವಾ ಕೆಳಭಾಗದಲ್ಲಿ ಹಾನಿ ಆಗಿದೆ ಮತ್ತು ಹುರಿಗೆ ಆಗಿರುವ ಹಾನಿಯ ವಿಧದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

ತಲೆಗೆ ಪೆಟ್ಟು (ಮೆದುಳಿನ ಆಘಾತ): ತಲೆಗೆ ಪೆಟ್ಟು ಎಂಬುದನ್ನು ಹಲವಾರು ಪೆಟ್ಟುಗಳ ಶ್ರೇಣಿಯನ್ನೇ ವಿವರಿಸಲು ಬಳಸಲಾಗುತ್ತದೆ. ಅದು ಆಘಾತ, ಮೆದುಳಿನ ಕಾಂಡಕ್ಕೆ ಪೆಟ್ಟು, ಮುಚ್ಚಿದ ತಲೆಗೆ ಪೆಟ್ಟು, ಮೆದುಳಿನ ರಕ್ತಸ್ರಾವ, ತಲೆಬುರುಡೆಯ ಮೂಳೆ ಮುರಿತ, ಅನ್ಯವಸ್ತು (ಗುಂಡು) ಆಮ್ಲಜನಕದ ಕೊರತೆ ಮತ್ತು ಶಸ್ತ್ರಚಿಕಿತ್ಸೆ ನಂತರದ ಸೋಂಕುಗಳು.

ಪಾರ್ಶ್ವವಾಯು ಹೊಡೆತ: (ಸಿ.ವಿ.ಎ. ಮೆದುಳು ನಾಳದ ಅಪಘಾತ) ಹೊಡೆತಕ್ಕೆ ಮೂರು ಮುಖ್ಯ ಕಾರಣಗಳೆಂದರೆ ರಕ್ತ ಹೆಪ್ಪುಗಟ್ಟುವಿಕೆ (ರಕ್ತನಾಳದಲ್ಲಿ) ಹೆಪ್ಪುಗಟ್ಟಿರುವುದರಿಂದ ನಿರ್ದಿಷ್ಟ ಬಿಂದುವಿನಿಂದ ಮುಂದಕ್ಕೆ ರಕ್ತ ಹರಿಯಲಾರದು) ರಕ್ತಸ್ರಾವ (ಮೆದುಳಿನ ಅಂಗಾಂಶದೊಳಕ್ಕೆ ರಕ್ತಸ್ರಾವವಾಗಿ ರಕ್ತದೊತ್ತಡ ಹೆಚ್ಚುವುದು ಅಥವಾ ಹಿಗ್ಗಿರುವ ರಕ್ತನಾಳ ಒಡೆಯುವುದು ಛಿದ್ರವಾಗುವುದು) ಮತ್ತು ಧಮನಿಬಂಧ (ಒಂದು ದೊಡ್ಡ ಹೆಪ್ಪುಗಟ್ಟಿದ ತುಂಡು ಧಮನಿಯನ್ನು ಮುಚ್ಚಿಹಾಕುತ್ತದೆ)

ಚಲನಾಂಗಳ (ಕೈ, ಕಾಲುಗಳ) ಅಥವಾ ಬೆರಳುಗಳ ಹಾನಿ ಅಥವಾ ನಷ್ಟ: ಇದು ಆಘಾತದಿಂದಾಗಿರಬಹುದು (ಉದಾ, ಸ್ಫೋಟಗಳು, ಯಂತ್ರದಲ್ಲಿ ಸಿಲುಕಿ ಜಜ್ಜಿ ಹೋಗುವುದು, ತುಂಡಾಗುವುದು, ಸುಟ್ಟಗಾಗಯ) ಅಥವಾ ಶಸ್ತ್ರಚಿಕಿತ್ಸೆ (ಕ್ಯಾನ್ಸರಿನಿಂದ, ಬಾಹ್ಯ ಧಮನಿಗಳ ಕಾಯಿಲೆ ಮಧುಮೇಹ)

ಪಾರ್ಕಿನ್ಸನ್ಸ್ ರೋಗ: ಇದು ಕಾಲದೊಂದಿಗೆ ಹೆಚ್ಚಾಗುವ ಸಾಮಾನ್ಯವಾಗಿ ವಯಸ್ಸಾದವರಲ್ಲಿ ಕಾಣುವ ರೋಗ. ಇದರ ಲಕ್ಷಣಗಳೆಂದರೆ ಸ್ನಾಯು ಬಿಗಿತ, ಚಲನೆ ನಿಧಾನವಾಗುವುದು, ವಿಶಿಷ್ಟ ರೀತಿಯ ನಡುಕ ನಿಜವಾದ ಪಾರ್ಶ್ವವಾಯುವಲ್ಲ.

ಬಹು ಅಂಗಾಂಶದ ಪಡೆಸುತನ (ಎಂ.ಎಸ್) ಇದು ಸಹ ಕಾಲದೊಂದಿಗೆ ಹೆಚ್ಚಾಗುವ, ಕೇಂದ್ರನರಮಂಡಲದ ರೋಗವಾಗಿದ್ದು ನರನಾರುಗಳನ್ನು ಕವಚದಂತೆ ಕಾಪಾಡುವ ವಸ್ತುವಿನ ನಾಶವೇ ಮುಖ್ಯ ಲಕ್ಷಣವಾಗಿದೆ.

ಸ್ನಾಯುಕ್ಷಯ (ಎಂ.ಡಿ) ಇದು ಅನುವಂಶೀಯ ರೋಗಗಳ ಸಮೂಹವಾಗಿದ್ದು ಕ್ರಮೇಣ ಹೆಚ್ಚುವ ಸ್ನಾಯು ದುರ್ಬಲತೆ, ಸ್ನಾಯು ಹತೋಟಿಯ ನಷ್ಟ ಸಂಕೋಚನ ಮತ್ತು ನಡೆಯಲು, ಉಸಿರಾಡಲು ಕೈಚಾಚಲು ಮತ್ತು ಕೈಗಳನ್ನು ಬಲದ ಅಗತ್ಯವಿರುವ ಕಾರ್ಯಕ್ಕೆ ಬಳಸಲಾಗದಿರುವುದು.

ಚಲನಾತ್ಮಕ ನ್ಯೂನತೆಗಳಿಂದ ಪ್ರಭಾವಿತವಾಗುವ ಅಂಶಗಳು: ಚಲನಾತ್ಮಕ ದೋಷಗಳಿರುವ ವ್ಯಕ್ತಿಗಳು ಎದುರಿಸುವ ಸಮಸ್ಯೆಗಳು ಕಳಪೆಮಟ್ಟದ ಸ್ನಾಯು ನಿಯಂತ್ರಣ, ಬಲಹೀನತೆ ಮತ್ತು ಆಯಾಸ, ನಡೆಯುವುದು, ಮಾತನಾಡುವುದು, ನೋಡುವುದು, ಸ್ಪರ್ಶಾನುಭವ ಅಥವಾ ಹಿಡಿಯುವುದು (ನೋವು ಅಥವಾ ಬಲಹೀನತೆ ಯಿಂದಾಗಿ) ವಸ್ತುಗಳನ್ನು ಕೈಚಾಚಿ ತಲುಪುವುದು, ಸಂಕೀರ್ಣ ಅಥವಾ ಸಂಯುಕ್ತ ಕುಶಲಕಾರ್ಯಗಳು (ತಳ್ಳುವುದು ಮತ್ತು ತಿರುಗಿಸುವುದು) ಮುಂತಾದವುಗಳನ್ನೊಳಗೊಂಡಿರುತ್ತದೆ. ಬೆನ್ನು ಹುರಿಗೆ ಪೆಟ್ಟಾಗಿರುವ ವ್ಯಕ್ತಿಗಳಿಗೆ ತಮ್ಮ ಕೈಕಾಲುಗಳನ್ನು ಬಳಸುವುದು ಅಸಾಧ್ಯವಾಗಿರಬಹುದು. ಅನೇಕ ನ್ಯೂನತೆಗಳಿರುವ ವ್ಯಕ್ತಿಗಳಿಗೆ ತಿರುಚುವ ಚಲನೆಗಲು ಕಠಿಣ ಅಥವಾ ಅಸಾಧ್ಯವಾಗಿರಬಹುದು (ಮೆದುಳಿನ ಪಾಶ್ವವಾಯು, ಬೆನ್ನುಹುರಿ ಪೆಟ್ಟು, ಸಂಧಿವಾತ, ಬಹು ಅಂಗಾಂಶಪೆಡಸುತನ (ಎಂ.ಎಸ್) ಸ್ನಾಯುಕ್ಷಯ (ಎಂ.ಡಿ)ಗಳನ್ನೊಳಗೊಂಡಂತೆ)

**8.2.6** ಬಹು ಅಂಶ ನ್ಯೂನತೆಗಳು

ಎ) ಅರ್ಥ: ಒಂದು ವಿಧದ ನ್ಯೂನತೆಯನ್ನುಂಟುಮಾಡಿದ ಅಂಶವು ಇತರ ನ್ಯೂನತೆಗಳಿಗೂ ಕಾರಣವಾಗಿದೆ ಎಂಬುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಇದು ತೀವ್ರವಾದ ರೋಗ ಅಥವಾ ಆಘಾತದ ವಿಷಯದಲ್ಲಿ, ಅಥವಾ ವಯಸ್ಸಾದ ಕಾರಣದಿಂದಾಗುವ ನ್ಯೂನತೆಗಳ ವಿಷಯದಲ್ಲಿ ಸತ್ಯವಾಗಿದೆ.

ಕಿವುಡು – ಕುರುಡತನವು ಸಾಮಾನ್ಯವಾಗಿ ಗುರುತಿಸಲ್ಪಡುವ ಕೂಟಾಗಿದೆ. ಈ ವ್ಯಕ್ತಿಗಳಲ್ಲಿ ಅನೇಕರು ಗಂಭೀರಮಟ್ಟದ ಶ್ರವಣದೋಷವನ್ನಾಗಲಿ, ಕಾನೂನಿನ ಪ್ರಕಾರ ಕುರುಡರಾಗಲಿ ಆಗಿರುವುದಿಲ್ಲ ಆದರೆ ಶ್ರವಣ ಹಾಗೂ

ದೃಷ್ಟಿದೋಷಗಳೆರಡೂ ಇರುವುದರಿಂದ ಕಿವುಡುತನ ಅಥವಾ ಕುರುಡುತನವೊಂದಕ್ಕೆ ಮಾತ್ರ ತಂತ್ರಗಳನ್ನು ಆಳವಡಿಸಿದರೆ ಪರಿಣಾಮಕಾರಿಯಾಗುವುದಿಲ್ಲ. ವಿಕಾಸಾತ್ಮಕ ನ್ಯೂನತೆಗಳನ್ನುಳ್ಳ ವ್ಯಕ್ತಿಗಳು ಮಾನಸಿಕ ಹಾಗೂ ಶಾರೀರಿಕ ನ್ಯೂನತೆಗಳೆರಡನ್ನೂ ಜೊತೆಯಾಗಿ ಹೊಂದಿರಬಹುದು. ಇದರಿಂದಾಗಿ 3 ಅಥವಾ 4 ಪ್ರಧಾನ ಜೀವನ ಚಟುವಟಿಕೆಯಲ್ಲಿ ಕ್ರಿಯಾತ್ಮಕ ಇತಿಮಿತಿ (ಲೋಪ)ಗಳಿರಬಹುದು. ಕುರುಡುತನಕ್ಕೆ ಕಾರಣವಾಗಬಹುದಾದ ಮಧುಮೇಹವು ಕೈ ಬೆರಳುಗಳಲ್ಲಿ ಸಂವೇದನೆಯ ಹಾನಿಗೂ ಕಾರಣವಾಗಬಹುದು.ಇದರಿಂದ ಬ್ರೈಲ್ ಅಥವಾ ಉಬ್ಬಿದ ಲಿಪಿಯನ್ನು ಓದುವುದು ಅಸಾಧ್ಯವಾಗುತ್ತದೆ ಮೆದುಳಿನ ಪಾರ್ಶ್ವವಾಯುವಿನೊಂದಿಗೆ ಸಾಮಾನ್ಯವಾಗಿ ದೃಷ್ಟಿ ದೋಷಗಳು, ಶ್ರವಣ ಮತ್ತು ಭಾಷಾನ್ಯೂನತೆಗಳು ಅಥವಾ ಜ್ಞಾನಾತ್ಮಕ ನ್ಯೂನತೆಗಳು ಕಂಡುಬರುತ್ತವೆ.

ಬಿ) ಕಾರಣಗಳು: ಬಹು ಅಂಗ ನ್ಯೂನತೆಗಳಿಗೆ ನಿರ್ದಿಷ್ಟ ಕಾರಣವನ್ನು ನಿರ್ಧರಿಸಲಾಗದಿದ್ದರೂ ಹಲವು ಸಾಮಾಜಿಕ, ಪರಿಸರಾತ್ಮಕ ಮತ್ತು ದೈಹಿಕ ಕಾರಣಗಳಿರುತ್ತವೆ. ಬಹು ಅಂಗ ನ್ಯೂನತೆಗಳನ್ನುಂಟು ಮಾಡುವ ಸಾಮಾನ್ಯ ಕಾರಣಗಳೆಂದರೆ :

- ಜನನಪೂರ್ವ, ಜನನಕಾಲ ಅಥವಾ ಜನನಾನಂತರದ ಸಮಯದಲ್ಲಿ ಆದ ಮೆದುಳಿನ ಗಾಯ ಅಥವಾ ಸೋಂಕು
- ಬೆಳವಣಿಗೆ ಅಥವಾ ಪೋಷಣೆಯ ಸಮಸ್ಯೆಗಳೂ (ಜನನಪೂರ್ವ, ಜನನಕಾಲ, ಜನನಾನಂತರ)
- ವರ್ಣತಂತುಗಳಲ್ಲಿ ಅಥವಾ ವಂಶವಾಹಿಗಳಲ್ಲಿ ಅಸಹಜತೆ (ವೈಪರೀತ್ಯ)
- ನಿರೀಕ್ಷಿತ ಜನನ ದಿನಾಂಕಕ್ಕಿಂತ ಬಹಳ ಮುಂಚೆಯೇ ಜನನ ತೀವ್ರ ಅಕಾಲಿಕ ಜನನ,
- ತಾಯಿಯ ನ್ಯೂನಪೋಷನೆ ಮತ್ತು ಕನಿಷ್ಠ ಆರೋಗ್ಯ ನಿರ್ವಹಣೆ ಇಲ್ಲದಿರುವುದು.
- ಗರ್ಭಾವಸ್ಥೆಯಲ್ಲಿ ಮದ್ಯಸೇವನೆ ಮತ್ತು ಧೂಮಪಾನ ಸೇರಿದಂತೆ ಮಾದಕವಸ್ತು ಬಳಕೆ,
- ಔಷಧ ಸಂಬಂಧಿತ ಜನನ ಪೂರ್ವ ವಿಕಾಸಾತ್ಮಕ ಅಪಮಾನ – ಉದಾ, ಥಾಲಿಡೊಮೈಡ್ ಕೊಡುವುದು.
- ತೀವ್ರ ರೂಪದ ಶಾರೀರಿಕ ದುಷ್ಕೃತ್ಯಗಳು (ಮಗುವಿನ ದುರ್ಬಳಕೆ) ಮೆದುಳಿನ ಗಾಯ (ಪೆಟ್ಟು)ಕ್ಕೆ ಕಾರಣವಾಗಿದ್ದು ಮಗುವಿಗೆ ಕಲಿಕಾ ಸಾಮರ್ಥ್ಯಗಳು ಮತ್ತು ಸಾಮಾಜಿಕ – ಭಾವನಾತ್ಮಕ ವಿಕಾಸದ ಮೇಲೆ ದುಷ್ಪರಿಣಾಮ ಉಂಟು ಮಾಡಿರಬಹುದು.

### 8.2.7 ಕಲಿಕಾ ನ್ಯೂನತೆ.

ಎ. ಅರ್ಥ: ಕಲಿಕಾನ್ಯೂನತೆ ಎಂದರೆ ಶ್ರವ್ಯ, ದೃಶ್ಯ ಅಥವಾ ಸ್ಥಳಾವಕಾಶ ಸಂಬಂಧಿತ ಮಾಹಿತಿಯನ್ನು, ಅಥವಾ ಈ ಮಾಹಿತಿ ರೂಪಗಳ ಯಾವುದೇ ಸಂಯೋಜನೆ (ಕೋನ) ಯನ್ನು ಗ್ರಹಿಸುವುದು ಮತ್ತು ಅಥವಾ ಸಂಸ್ಕರಿಸುವುದರಲ್ಲಿ ಮಹತ್ವದ ಸಮಸ್ಯೆಗಳನ್ನು ಉಂಟುಮಾಡುವ, ನರಮಂಡಲದಲ್ಲಿ ಉದ್ಭವಿಸುವುದೆಂದು ನಂಬಲಾಗಿರುವ ವಿವಿಧ ಸ್ಥಿತಿಗಳ ಗುಂಪಿನಲ್ಲಿ ಯಾವುದಾದರೂ ಒಂದು ನ್ಯೂನತೆ ಎನ್ನಲಾಗುತ್ತದೆ.

ಕಲಿಕಾ ಸಮಸ್ಯೆಗಳು ಸಾಧಾರಣ ಮಟ್ಟದ ಅಥವಾ ಅದಕ್ಕೂ ಹೆಚ್ಚಿನ ಬುದ್ಧಿಶಕ್ತಿ ಇರುವ ಮಕ್ಕಳಲ್ಲಿ ಕಂಡುಬರುವುದು ಹಾಗೂ ಅವುಗಳು ಮೌಖಿಕ ಅಥವಾ ಲಿಖಿತ ಭಾಷೆಯನ್ನು ಗ್ರಹಿಸುವ ಅಥವಾ ಬಳಸುವ ಮೂಲಭೂತ ಪ್ರಕ್ರಿಯೆಗಳಲ್ಲಿ ಒಂದು ಅಥವಾ ಹೆಚ್ಚಿನ ಪ್ರಕ್ರಿಯೆಗಳಿಗೆ ಸಂಬಂಧಿಸಿರುತ್ತವೆ.

ಅವುಗಳು ಓದುವುದು (ಡಿಸ್ಲೆಕ್ಸಿಯಾ), ಬರೆಯುವುದು (ಡಿಸ್‌ಗ್ರಾಫಿಯಾ) ಗಣಿತದ ಲೆಕ್ಕಾಚಾರ (ಡಿಸ್‌ಕ್ಯಾಲ್ಕ್ಯುಲಿಯಾ) ಗಳಂತಹ ಕ್ರಿಯೆ ಸಮಸ್ಯೆಯುಂಟುಮಾಡುವ ನ್ಯೂನತೆಗಳನ್ನೊಳಗೊಂಡಿರುತ್ತದೆ. ಅವು ಪ್ರತಿ ಗುಂಪಿನಲ್ಲಿಯೂ (ವರ್ಗ) ಪ್ರಕಟಗೊಳ್ಳುವ ವಿನ್ಯಾಸಗಳಲ್ಲಿ ವ್ಯಾಪಕವಾಗಿ ಭಿನ್ನವಾಗಿರುತ್ತವೆ. ಬೌದ್ಧಿಕ ಸಾಮರ್ಥ, ಮತ್ತು ಸಾಧನೆ ಹಾಗೂ ಉತ್ಪತ್ತಿಗಳ ನಡುವಿನ ಎದ್ದು ಕಾಣುವ ವ್ಯತ್ಯಾಸವೇ ಕಲಿಕಾ ನ್ಯೂನತೆಯ ಲಕ್ಷಣವಾಗಿರುತ್ತದೆ.

ಬಿ) ಕಾರಣಗಳು

ಕಲಿಕಾ ನ್ಯೂನತೆಗಳಿಗೆ ಕಾರಣಗಳನ್ನು ಸಮರ್ಪಕವಾಗಿ ಗ್ರಹಿಸಲಾಗಿಲ್ಲ ಹಾಗೂ ಕೆಲವು ವೇಳೆ ಒಂದು ಕಲಿಕಾ ನ್ಯೂನತೆಗೆ ಸ್ಪಷ್ಟವಾದ ಕಾರಣ ಇರುವುದಿಲ್ಲ. ಆದರೂ ನರಮಂಡಲ ಸಂಬಂಧಿತ ದೋಷಗಳಿಗೆ ಸಂಬಂಧಿಸಿದ ಕೆಲವು ಕಾರಣಗಳು ಹೀಗಿವೆ.

- ಅನುವಂಶೀಯತೆ – ಅನೇಕ ಸಲ ಕಲಿಕಾ ನ್ಯೂನತೆ ಕುಟುಂಬದಲ್ಲಿ ಹರಡಿರುತ್ತದೆ.
- ಗರ್ಭಾವಸ್ಥೆ ಮತ್ತು ಜನನ ಕಾಲದ ತೊಂದರೆಗಳು – ಕಲಿಕಾ ನ್ಯೂನತೆಗಳು ಬೆಳೆಯುತ್ತಿರುವ ಮೆದುಳಿನ ವೈಪರೀತ್ಯಗಳಿಮದ ಕಾಯಿಲೆ ಅಥವಾ ಗಾಯ ಗರ್ಭಸ್ಥ ಶಿಶು ಮದ್ಯ ಅಥವಾ ಮಾದಕ ದ್ರವ್ಯಗಳಿಗೆ ಒಡ್ಡಲ್ಪಡುವಿಕೆ, ಜನನ ಕಾಲದ ತೂಕ ಕಡಿಮೆಯಾಗಿರುವುದು, ಆಮ್ಲಜನಕದಿಂದ ವಂಚಿತವಾಗಿರುವುದು ಅಥವಾ ಅಕಾಲಿಕ ಅಥವಾ ವಿಸ್ತರಿಸಲ್ಪಟ್ಟ ಪ್ರಸವ ಮುಂತಾದುವು.
- ಜನನಾನಂತರ ಅಪಘಾತಗಳು – ತಲೆಗೆ ಪೆಟ್ಟುಗಳಾಗುವುದು, ನ್ಯೂನ ಪೋಷಣೆ, ಅಥವಾ ವಿಷಕಾರಿ ವಸ್ತುವಿಗೆ ಒಡ್ಡಲ್ಪಡುವುದು, ಭಾರಿ ಲೋಹಗಳು ಅಥವಾ ಕೀಟನಾಶಕಗಳು

### 8.2.8 ಸಂವೇದನಾತ್ಮಕ ಮತ್ತು ವರ್ತನಾತ್ಮಕ ದೋಷಗಳು

ಎ. ಅರ್ಥ: ಸಂವೇದನಾತ್ಮಕ ಮತ್ತು ವರ್ತನಾತ್ಮಕ ದೋಷಗಳು ಎಂಬುದು ಶೈಕ್ಷಣಿಕ ಸನ್ನಿವೇಶಗಳಲ್ಲಿ ಸಾಮಾನ್ಯವಾಗಿ ಬಳಸುವ ವಿಶಾಲ ವರ್ಗದ ದೋಷಗಳಾಗಿದ್ದು, ಮಕ್ಕಳ ಮತ್ತು ಹದಿಹರೆಯದವರ ಹೆಚ್ಚು ನಿರ್ದಿಷ್ಟವಾಗಿ ಗ್ರಹಿಸಲ್ಪಟ್ಟ ಸಮಸ್ಯೆಗಳ ಶ್ರೇಣಿಯನ್ನು ಗುಂಪುಮಾಡಲು ಬಳಸಲಾಗುತ್ತದೆ.

ಮಗುವೊಂದು ಅದರ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತಹ ದೀರ್ಘಕಾಲದ ವರೆಗೆ ಹೆಚ್ಚಿನ ಪ್ರಮಾಣದಲ್ಲಿ ಈ ಕೆಳಗಿನ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತಿದ್ದರೆ–

1. ಬೌದ್ಧಿಕ, ಇಂದ್ರಿಯ ಸಂಬಂಧಿತ ಅಥವಾ ಆರೋಗ್ಯದ ಅಂಶಗಳಿಂದ ವಿವರಿಸಲಾದ ಕಲಿಕಾ ಸಮಸ್ಯೆ.
2. ಸಮವಯಸ್ಕರೊಂದಿಗೆ ಅಥವಾ ಶಿಕ್ಷಕರೊಂದಿಗೆ ತೃಪ್ತಿಕರವಾದ ಅಂತರ್‌ವ್ಯಕ್ತಿ ಸಂಬಂಧ ಬೆಳೆಸುವಲ್ಲಿ ಅಥವಾ ನಿರ್ವಹಿಸುವಲ್ಲಿ ಸಮಸ್ಯೆ.
3. ಸಾಧಾರಣ ಸನ್ನಿವೇಶಗಳಲ್ಲಿ ಸೂಕ್ತವಲ್ಲದ ವರ್ತನೆಗಳು ಅಥವಾ ಭಾವನೆಗಳು.
4. ಒಂದು ಸಾಮಾನ್ಯವಾದ ಅತೃಪ್ತಿ ಅಥವಾ ಖಿನ್ನತೆಯ ವ್ಯಾಪಕ ಮನ:ಸ್ಥಿತಿ.
5. ವೈಯಕ್ತಿಕ ಅಥವಾ ಶಾಲಾ ಸಮಸ್ಯೆಗಳಿಗೆ ಸಂಬಂಧಿಸಿದ ದೈಹಿಕ ಚಿಹ್ನೆಗಳನ್ನು ಅಥವಾ ಭಯಗಳನ್ನು ಬೆಳೆಸಿಕೊಳ್ಳುವ ಪ್ರವೃತಿ.

ಬಿ) ಜೀವ ಶಾಸ್ತ್ರವೂ ಒಂದು ಕಾರಕವಾಗಬಲ್ಲದು. ಸಂವೇದನಾತ್ಮಕ ಮತ್ತು ವರ್ತನಾತ್ಮಕ ವಿಕಲತೆಗಳು ವ್ಯಕ್ತಿಯ ವಂಶವಾಹಿಗಳ ಮೂಲಕ, ಮಡದುಳಿನಲ್ಲಿ ರಾಸಾಯನಿಕ ಅಸಮತೋಲನದಿಂದ ಅಥವಾ ಮೆದುಳಿಗೆ ಘಾಸಿಯಾಗುವುದರಿಂದ ಉಂಟಾಗಬಹುದು. ವ್ಯಕ್ತಿಯ ಪರಿಸರಗಳೂ ತಮ್ಮ ಪಾತ್ರ ವಹಿಸಬಹುದು. ಯುವ ವಯಸ್ಕರು ದುರ್ಬಳಕೆಗೆ ಒಳಗಾಗಿದ್ದರೆ, ತೀವ್ರವಾದ ಒತ್ತಡ, ಕುಟುಂಬದಲ್ಲಿ ಸಾವು ಅಥವಾ ನಷ್ಟ, ಮತ್ತು / ಅಥವಾ ಹಿಂಸೆಗಳಿಗೆ ಒಡ್ಡಲ್ಪಟ್ಟಿದ್ದರೆ ಇಂತಹ ನ್ಯೂನತೆಗಳಿಗೊಳಗಾಗುವ ಹೆಚ್ಚಿನ ಸಾಧ್ಯತೆ ಇದೆ.

### 8.2.9 "ಕಾಯುತ್ತಿರುವ ಮಕ್ಕಳ" ಪರಿಕಲ್ಪನೆ.

ದತ್ತು ತೆಗೆದುಕೊಳ್ಳುವರಿಗಾಗಿ, ಎಂದರೆ ದತ್ತು ಹೋಗಲು ಕಾನೂನಾತ್ಮಕವಾಗಿ ಮುಕ್ತವಾಗಿರುವ ಮಕ್ಕಳು "ಕಾಯುತ್ತಿರುವ ಮಕ್ಕಳು" ಅವರು ಸಾರ್ವಜನಿಕ (ಮಕ್ಕಳ) ಶಿಶುಕ 'ಲ್ಯಾಣ ವ್ಯವಸ್ಥೆಯ ಆರೈಕೆಯಲ್ಲಿದ್ದು, ಹುಟ್ಟಿದ ಕುಟುಂಬಕ್ಕೆ ಮರಳಲು ಸಾಧ್ಯವಿಲ್ಲದೆ ಶಾಶ್ವತ ಕುಟುಂಬಗಳ ಅಗತ್ಯವಿರುತ್ತದೆ.

ಈ ಪದವು ಸಾಮಾನ್ಯವಾಗಿ ದತ್ತು ಹೋಗಲು ಕಾನೂನಾತ್ಮಕವಾಗಿ ಲಭ್ಯವಾಗಿರುವ ಶಿಶುಗಳಲ್ಲದ, ಶಾಲಾವಯಸ್ಸಿನ ಮಕ್ಕಳಿಗೆ ಅನ್ವಯಿಸುತ್ತದೆ. ಅವರು ಸಾಮಾನ್ಯವಾಗಿ ಕಾನೂನಿನ ಅಧಿಕಾರ ಸಾರ್ವಜನಿಕ ಪೋಷಣಾ ಸಂಸ್ಥೆಗಳ ಆರೈಕೆಗೆ ಒಳಪಟ್ಟಿರು ವ್ಯಾಪ್ತಿಯಲ್ಲಿದ್ದು. ಮತ್ತು ನಿರ್ಲಕ್ಷ್ಯ, ತ್ಯಜಿಸಲ್ಪಟ್ಟಿರುವುದು, ದುರ್ಬಳಕೆ, ಮತ್ತು / ಅಥವಾ ಅವರ ಕುಟುಂಬದ ಪರಿಸರದೊಳಗೆ ಇತರ ಅಸಸಾಮಾನ್ಯ ಸನ್ನಿವೇಶಗಳೂ ಒಳಗೊಂಡಂತೆ ಹಲವಾರು ಕಾರಣಗಳಿಂದ ಪೋಷಣಾಸಂಸ್ಥೆಗಳಿಗೆ ಬಂದಿರುತ್ತಾರೆ.

ಅನೇಕ ಕಾಯುತ್ತಿರುವ ಮಕ್ಕಳು ಒಡಹುಟ್ಟಿದವರನ್ನು ಹೊಂದಿದ್ದು, ಒಂದು ಕುಟುಂಬವೆಂಬ ಘಟಕವಾಗಿ ಒಟ್ಟಿಗೇ ಇರಲು ಇಚ್ಛಿಸುವ ಮಕ್ಕಳು ದತ್ತು ಹೋಗಲು ಲಭ್ಯವಿರುತ್ತಾರೆ. ಬಹುಮಟ್ಟಿನ ಭೌಗೋಳಿಕ ಕ್ಷೇತ್ರ (ಸ್ಥಳ)ಗಳಲ್ಲಿ 'ಕಾಯುತ್ತಿರುವ ಮಕ್ಕಳಲ್ಲಿ' ಅರ್ಧಕ್ಕಿಂತ ಹೆಚ್ಚಿನವರು ಜನಾಂಗೀಯ ವೈವಿಧ್ಯತೆಯ ಅಥವಾ ವರ್ಣೀಯ ಮಕ್ಕಳಾಗಿರುತ್ತಾರೆ. ಎಲ್ಲ "ಕಾಯುತ್ತಿರುವ ಮಕ್ಕಳ'ಲ್ಲಿಯೂ ಕಾಣುವ ಎರಡು ಸಾಮಾನ್ಯ ಅಂಶಗಳೆಂದರೆ,

1. ತಮ್ಮ ಸಂಪೂರ್ಣ ಸಾಮರ್ಥ್ಯಗಳನ್ನು ಸಾಧಿಸಲು ಉತ್ತೇಜಿಸಿ ಪ್ರೀತಿತೋರುವ, ಜವಬ್ದಾರಿಯುತ ಮತ್ತು ಪೋಷಿಸುವಂತಹ ಕುಟುಂಬದ ಶಾಶ್ವತ ಸದಸ್ಯರಾಗುವ ಅವಶ್ಯಕತೆ.
2. ಪರಿಪೂರ್ಣರಲ್ಲದಿದ್ದರೂ ಮತ್ತು ಅನೇಕ ವೇಳೆ ಸವಾಲೊಡ್ಡುವ ಮಕ್ಕಳಾಗಿದ್ದರೂ ಅವರು ಅಸಾಧಾರಣ ಸಂತಸ ಮತ್ತು ತೃಪ್ತಿಯನ್ನು ತಮ್ಮ ಹೊಸ ಕುಟುಂಬಕ್ಕೆ ತರಬಲ್ಲರು.
   ಭಾರತದ ದತ್ತು ತೆಗೆದುಕೊಳ್ಳುವ ವ್ಯವಸ್ಥೆಯ ಪ್ರಕಾರ, ಹಿಂದೂಗಳಿಂದ ದತ್ತು ಪಡೆಯುವುದು ಹೊರತುಪಡಿಸಿ ದತ್ತು ಸ್ವೀಕಾರಕ್ಕೆ ಅವಕಾಶವಿಲ್ಲ. ಮಕ್ಕಳನ್ನು ದತ್ತು ಪಡೆಯುವ ಪೋಷಕರ ರಕ್ಷಣೆಯಲ್ಲಿ ನಿಯೋಜಿಸಿ, ದೇಶದಿಂದ ಹೊರಗೆ ಹೋಗಲು ಅವಕಾಶ ನೀಡಲಾಗುತ್ತದೆ. ಆದರೆ ದತ್ತುಸ್ವೀಕಾರವು ಪೋಷಕ ತವರು ನಾಡಲ್ಲಿಯೇ ಆಗಬೇಕು.

ನಿಮ್ಮ ಪ್ರಗತಿ ಪರಿಶೀಲಿಸಿ–1

1. ದತ್ತು ಹೋಗಲು ಕಾಯುತ್ತಿರುವ ಮಕ್ಕಳನ್ನು, ಎಂದರೆ ಕಾನೂನಿನ ಪ್ರಕಾರ ದತ್ತು ಸ್ವೀಕಾರಕ್ಕೆ ಮುಕ್ತರಾಗಿರುವ ಮಕ್ಕಳನ್ನು............... ಎನ್ನುತ್ತೇವೆ.
2. ಒಂದು ಮಗುವಿನ ದೃಷ್ಟಿಯ ಚುರುಕುತನ (ತೀಕ್ಷ್ಣತೆ) ............... ನಷ್ಟಿದ್ದಾಗ ಅದನ್ನು ಕಾನೂನಾತ್ಮಕವಾಗಿ ಕುರುಡು ಎನ್ನಲಾಗುವುದು (20/20,20/200,10/200,20/2000)
3. ಶ್ರವಣ ನ್ಯೂನತೆಯುಳ್ಳ ಮಗು ಇದನ್ನು ಕಲಿಯಲು ಸಾಕಷ್ಟು ಸಮಯ ತೆಗೆದುಕೊಳ್ಳಬೇಕಾಗುತ್ತದೆ................. (ಭಾಷೆ, ಬ್ರೈಲ್, ಬರಹ, ಓದು)
4. 'ಎ' ಜೀವನತ್ವದ ಕೊರತೆಯಿಂದ ಉಂಟಾಗುವ ನ್ಯೂನತೆ............ (ಶ್ರವಣ ದೋಷ, ಚಲನಾದೋಷ, ಜ್ಞಾನಾತ್ಮಕ ನ್ಯೂನತೆ, ದೃಷ್ಟಿದೋಷ

**8.3** ಆರಂಭಿಕ ಹಂತದ ಗುರುತಿಸುವಿಕೆ, ಪರೀಕ್ಷಣ ಮತ್ತು ಮಧ್ಯವರ್ತನೆ.

ಭಾರತದಲ್ಲಿ ಆರಂಭಿಕ ಬಾಲ್ಯ ಪಾಲನೆ ಮತ್ತು ವಿಕಾಸನ ಅವಶ್ಯಕತೆಯನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಮಾನ್ಯ ಮಾಡಿವೆ. ಪ್ರಾಥಮಿಕ ಹಾಗೂ ಅನುಷಂಗಿಕ ವೈಕಲ್ಯಗಳನ್ನು ತಡೆಗಟ್ಟುವುದಲ್ಲದೆ ಮಗುವನ್ನು ಶಾಲೆಗೆ ಸಿದ್ಧಗೊಳಿಸಲು ಪರಿಣಾಮಕಾರಿಯಾಗಬಲ್ಲ ಪ್ರಾರಂಭಿಕ ಮಧ್ಯವರ್ತನೆಯನ್ನು ಗುರುತಿಸಲಾಗಿದೆ. ಪ್ರತಿ ಮಗುವಿನಲ್ಲೂ ಉಳಿಕೆ ಇರುವ ಸಾಮರ್ಥ್ಯವನ್ನು ಗರಿಷ್ಟಮಟ್ಟಕ್ಕೆ ಬಳಸುವುದೂ ಸಹ ಸ್ವಾಭಾವಿಕವಾಗಿಯೇ ಮುಖ್ಯವಾಗಿದೆ. ಏಕೆಂದರೆ ಅದು ಮಗುವಿನ ಭವಿಷ್ಯಕ್ಕೆ ಅಡಿಪಾಯ ಹಾಕುತ್ತದೆ ಮತ್ತು ಮಕ್ಕಳ ಸಮಗ್ರ ವಿಕಾಸವನ್ನು ಪ್ರೋತ್ಸಾಹಿಸುತ್ತದೆ.

ಆರಂಭಿಕ ಗುರುತಿಸುವಿಕೆ ಮತ್ತು ಮಧ್ಯವರ್ತನೆಯ ಲಾಭಗಳನ್ನು ಪುನವಸತಿ ಕ್ಷೇತ್ರದ ಪರಿಣತರು ಸ್ವೀಕರಿಸಿ ದಾಖಲು ಮಾಡಿದ್ದಾರೆ. ಮಗುವಿನ ಸಮಗ್ರ ವಿಕಾಸದ ರೂಪದಲ್ಲಿ ಪ್ರಾರಂಭಿಸಿದ ಐ.ಸಿ.ಡಿ.ಎಸ್. ಕಾರ್ಯಕ್ರಮವು ಪೋಷಣೆಯ ಮೇಲೆ ವಿಶೇಷ ಒತ್ತು ನೀಡಿತ್ತು. ಈ ಕಾರ್ಯಕ್ರಮವು ಮುಂದೆ ಹನಿಹರೆಯದ ಹೆಣ್ಣುಮಕ್ಕಳು, ಜನನ–ಪೂರ್ವ, ಜನನಾನಂತರದ ಆರೈಕೆ ಹಾಗೂ 6 ವರ್ಷ ವಯಸ್ಸಿನವರಗೆ ಪೂರ್ವಪ್ರಾಥಮಿಕ ಶಿಕ್ಷಣಗಳಿಗೂ ವಿಸ್ತರಿಸಿತು. ಕೆಳಮಟ್ಟದ ಕಾರ್ಯಕರ್ತೆಯರಿಗಾಗಿ (ಅಂಗನವಾಡಿ ಕಾರ್ಯಕರ್ತೆಯರು) ಒಂದು ತರಬೇತಿ ಘಟಕವಾಗಿ

ನ್ಯೂನತೆಗಳನ್ನು ಕುರಿತ ಒಂದು ಅರಿವುಂಟುಮಾಡುವ ಮಾಡ್ಯೂಲನ್ನು ಸೇರಿಸಲಾಯಿತು ಆದರೆ, ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವಯೋಜಿತವಾಗಿ ನ್ಯೂನತೆಯುಳ್ಳ ಮಕ್ಕಳನ್ನು ಸೇರ್ಪಡೆ ಮಾಡಲಿಲ್ಲ.

ಐದು ವರ್ಷದ ಒಳಗಿನ, ನ್ಯೂನತೆಗಳುಳ್ಳ ಮಕ್ಕಳನ್ನು ಸೂಕ್ತ ತಂತ್ರಜ್ಞಾನ ಮತ್ತು ಕೌಶಲ್ಯಗಳನ್ನು ಬಳಸಿ ಆರಂಭಿಕ ಹಂತ ಗುರುತಿಸುವುಕೆ, ಮಧ್ಯವರ್ತನೆ ಹಾಗೂ ಪ್ರಚೋದನೆಗಳನ್ನು ಕೈಗೊಂಡರೆ, ಆನುಷಂಗಿಕ ವೈಕಲ್ಯಗಳನ್ನು ಮತ್ತು ಸಮಸ್ಯೆಗಳ ತೀವ್ರತೆಯನ್ನು ತಡೆಗಟ್ಟಲು ಸಹಾಯಕವಾಗುತ್ತದೆ.

ಆದ್ದರಿಂದ ಆದಷ್ಟು ಆರಂಭಿಕ ಹಂತದಲ್ಲಿ ವಿಶೇಷ ಅಗತ್ಯಗಳುಳ್ಳ ಮಕ್ಕಳನ್ನು ಗುರುತಿಸಿ, ಅವರನ್ನು ಹಾಗೆ ವ್ಯಾಖ್ಯಾನಿಸುವುದು ಪ್ರಾಯೋಗಿಕ ಉದ್ದೇಶಗಳಿಗಾಗಿ ಬಹು ಮುಖ್ಯ. ಇದರಿಂದಾಗಿ ಅವರು ಸಾಧ್ಯವಾದಷ್ಟು ಉತ್ತಮ ಜೀವನ ನಡೆಸಲು ಅಗತ್ಯವಾದ ವಿಶೇಷ ಸಹಾಯವನ್ನು ಪಡೆಯಬಹುದಾಗಿದೆ.

ತಮ್ಮ ಮಕ್ಕಳನ್ನು ವಿಶೇಷ ಅಗತ್ಯೆಯುಳ್ಳವರು ಮಗು ಎಂದು ಹೆಸರಿಸುವುದರಿಂದ ಮಗು ಕಳಂಕ/ಅಸಮಾನಕ್ಕೆ ಒಳಪಡಬಹುದೆಂದು ಅನೇಕ ಪೋಷಕರು ಚಿಂತಿತರಾಗುತ್ತಾರೆ. ವಿಶೇಷ ಅಗತ್ಯತೆಯನ್ನು ಗುರುತಿಸುವುದು ಮಗುವಿಗೆ ಹಾಗಿ ಉಂಟುಮಾಡಬಹುದೆಂದು ಚಿಂತೆಗೀಡಾಗುತ್ತಾರೆ ಇದರಿಂದಾಗಿ ಮಗುವನ್ನು ಸಾಮಾನ್ಯ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಂದ ಕೈಬಿಡಬಹುದೆಂಬ ಆತಂಕವಿರುತ್ತದೆ.

ಇಲ್ಲಿ ಶಿಕ್ಷಕರ ಪಾತ್ರವು ನಿರ್ಣಾಯಕವಾಗಿದೆ ಮೊದಲಿಗೆ ಶಿಕ್ಷಕರು ಈ ಘಟಕದಲ್ಲಿ ಹೇಳಲಾಗಿರುವ ಕೆಲವು ಲಕ್ಷಣಗಳನ್ನು ಒಂದು ಮಗುವಿನಲ್ಲಿ ಕಾಣುತ್ತಾರೆ, ನಂತರ ಅವರು ಶೋಧನಾ ನಮೂನೆ ಬಳಸಿ ಮುಂದೆ ಮಗುವನ್ನು ವೃತ್ತಿಪರ ತಜ್ಞರ ಬಳಿ ಪರೀಕ್ಷಣಕ್ಕಾಗಿ ಕಳುಹಿಸಬೇಕು.

ಆರಂಭಿಕ ಬಾಲ್ಯ ಹಂತದಲ್ಲಿ ವಿಕಾಸಾತ್ಮಕ ವಿಳಂಬದ ಕೆಲವು ಎಚ್ಚರಿಕೆಯ ಸೂಚನೆಗಳು ಹೀಗಿವೆ:

- ಗಟ್ಟಿಯಾದ ಶಬ್ದಕ್ಕೆ ಸ್ಪಂದಿಸದಿರುವುದು
- ತಮ್ಮ ಕೈಗಳನ್ನು ಅನ್ವೇಇಸಿರುವುದಿಲ್ಲ, ಮತ್ತು ತಮ್ಮ ಕೈಗಳನ್ನು ಬಾಯಲ್ಲಿಡುವುದಿಲ್ಲ.
- ತಮ್ಮ ಕಣ್ಣುಗಳಿಂದ ವಸ್ತುಗಳನ್ನು ಅನುಸರಿಸುವುದಿಲ್ಲ, ಅಥವಾ ಶಬ್ದ ಬಂದಕಡೆಗೆ ತಲೆ ತಿರುಗಿಸುವುದಿಲ್ಲ.
- ಆಟಿಕೆಗಳನ್ನು ಕೈಚಾಚಿ ತಲುಪುವುದಿಲ್ಲ ಅಥವಾ ಅವುಗಳನ್ನು ಹಿಡಿಯುವುದಿಲ್ಲ.
- ಅತಿ ಬಿಗುವಾದ ಅಥವಾ ಅತಿ ಬಳುಕುವ (ನಮ್ಯ) ಕೈಕಾಲಗಳಿರುತ್ತವೆ.
- ತಮ್ಮ ಶರೀರದ ಒಂದು ಭಾಗಕ್ಕೆ ಮತ್ತೊಂದು ಭಾಗ್ಕಕಿಂತ ಹೆಚ್ಚು ಆದ್ಯತೆ ಕೊಡುತ್ತಾರೆ.
- ಸಣ್ಣ ವಸ್ತುಗಳನ್ನು ಆಯ್ದುಕೊಳ್ಳಲಾರರು
- ನಾಜೂಕಿರುವುದಿಲ್ಲ, ಆಗಾಗ ಬೀಳುತ್ತಾರೆ
- ನಿರಂತರವಾಗಿ ಜೊಲ್ಲು ಸುರಿಸುತ್ತಾರೆ
- ಇತರ ಮಕ್ಕಳೊಂದಿಗೆ ಆಟವಾಡಲು ಆಸಕ್ತಿ ಇರುವುದಿಲ್ಲ
- ಸರಳ ಸೂಚನೆಗಳನ್ನು ಅನುಸರಿಸಲಾರರು
- ತಾಯಿಯಿಂದ ಬೇರ್ಪಡುವ ಆತಂಕದಿಂದ ಕಷ್ಟಪಡುತ್ತಾರೆ.
- ಅಪರಿಚಿತರನ್ನು ಕಂಡರೆ ಭಯ
- ಚೆಂಡನ್ನು ಎಸೆಯುವುದು, ಓಡುವುದು ಅಥವಾ ನೆಗೆಯುವುದು ಸಾಧ್ಯವಿಲ್ಲ
- ಬಹು ಬೇಗ ಚಟುವಟಿಕೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ.

### 8.3.1 ನ್ಯೂನತೆಗಳನ್ನು ಗುರುತಿಸುವುದು

ಸಮಯಕ್ಕೆ ಸರಿಯಾಗಿ ನ್ಯೂನ್ಯತೆಗಳನ್ನು ಗುರುತಿಸುವುದು, ಅನುಷಂಗಿಕವನ್ನು ತಡೆಗಟ್ಟುವುದರಿಂದ ವ್ಯಕ್ತಿಯ ನ್ಯೂನ್ಯತೆಯ ಕ್ರಿಯಾತ್ಮಕ ಮಟ್ಟದ ಮೇಲೆ ಪ್ರಭಾವ ಬೀರುವುದನ್ನು ಕಡಿಮೆ ನೋಡಬಹುದು ಹಾಗೂ ದೋಷಗಳನ್ನು ನ್ಯೂನತೆಗಳ ಸ್ಥಿತಿ ತಲುಪುವುದನ್ನು ತಡೆಯಬಹುದು ಆರಂಭದಲ್ಲಿ ಪೋಷಕರು ಮತ್ತು ಹೊರಗೆ ಸಾಧ್ಯವಾದಷ್ಟು ಬೇಗ ಇಂತಹ ಮಕ್ಕಳನ್ನು

ಗುರುತಿಸಬೇಕು (ಅಂಗನವಾಡಿ ಕೇಂದ್ರಗಳು, ಶಾಲೆಗಳು/ಉಪ ಆರೋಗ್ಯ ಕೇಂದ್ರಗಳು/ಕ್ಯಾಂಪ್ಗಳ ಮೂಲಕ ಹಾಗೂ ಅನಂತರದಲ್ಲಿ ಅಗತ್ಯ ಮಧ್ಯವರ್ತನೆಗಳನ್ನು ಯೋಜಿಸಲು ವಿಶೇಷಜ್ಞರ ತಂಡವು ಆ ಮಕ್ಕಳನ್ನು ಪರೀಕ್ಷಿಸುವ ಅಗತ್ಯವಿದೆ ಎಲ್ಲಾ ಸರ್ಕಾರಿ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ನ್ಯೂನತೆಗಳುಳ್ಳ ಮಕ್ಕಳನ್ನು ಗುರುತಿಸುವ ಜವಾಬ್ದಾರಿ ಇದೆ. ವಿಶೇಷ ಅಗತ್ಯತೆಗಳುಳ್ಳ ಮಕ್ಕಳನ್ನು ಗುರುತಿಸಲು ಬಳಸಬಹುದು ತಪಶಿಲು ಪಟ್ಟಿಯೊಂದು ನೀಡಲಾಗಿದೆ (ಶಾಲಾ ಶಿಕ್ಷಕರು ಮತ್ತು ಪೋಷಕರು ಈ ತಪಶೀಲುಪಟ್ಟಿಯನ್ನು ಬಳಸಬೇಕು)

| ದೋಷ/ನ್ಯೂನತೆ | ಲಕ್ಷಣಗಳು |
|---|---|
| ದೃಷ್ಟಿ | ಎ. ಕಣ್ಣಿನ್ಲಿ ನೀರು ಸುರಿಯುವುದು<br>ಬಿ. ಪದೇ ಪದೇ ಕಣ್ಣು ಕೆಂಪಾಗುವುದು<br>ಸಿ. ಆಗಾಗ ಕೆರಳುವುದು<br>ಡಿ. ಪದೇ ಪದೇ ಕಣ್ಣು ಮಿಟುಕಿಸುವುದು<br>ಇ. ಮೆಳ್ಳಗಣ್ಣು<br>ಎಫ್. ಅಸಮರ್ಪಕವಾಗಿ ವಸ್ತುಗಳನ್ನು ಎಡುವುದು ಅಥವಾ<br>ಇತರರಿಗೆ<br>ಜಿ) ತಲೆ ಪಕ್ಕಕ್ಕೆ ಬಾಗಿಸುವುದು ಅಥವಾ ಒಂದು ಕಣ್ಣು ಮುಚ್ಚುವುದು<br>ಎಚ್) ಒಂದು ಮೀಟರನಷ್ಟು ದೂರದಲ್ಲಿ ಚಾಚಿದ ಕೈಗಳ ಬೆರಳುಗಳನ್ನು ಎಣಿಸಲು ಸಮಸ್ಯೆ<br>ಐ) ಓದುವಾಗ ತಲೆಯನ್ನು ಒಂದು ಪಕ್ಕದಿಂದ ಇನ್ನೊಂದು ಚಲಿಸುವುದು<br>ಜೆ) ದೂರದ ವಸ್ತುಗಳನ್ನು ಗುರುತಿಸಲು ಕಠಿಣತೆ<br>ಕೆ) ಸಂಪೂರ್ಣ ದೃಷ್ಟಿ ಅಗತ್ಯವಿರುವ ಸೂಕ್ಷ್ಮ ಕಾರ್ಯ ನಿರ್ವಹಿಸಲು ಸಮಸ್ಯೆ<br>ಎಲ್) ಪುಸ್ತಕವನ್ನು ಕಣ್ಣಿಗೆ ಅತಿ ಸಮೀಪ ಅಥವಾ ಅತಿದೂರ ಹಿಡಯುವುದು<br>ಎಮ್) ಕಪ್ಪು ಹಲಗೆಯಿಂದ ನೋಡಿ ಬರೆಯುವಾಗ ಆಗಾಗ ಬೇರೆ ಮಕ್ಕಳನ್ನು ಕೇಳುವುದು<br>ಎನ್) ಕಪ್ಪು ಹಲಗೆಯಿಂದ ಓದಲು ಸಮಸ್ಯೆ<br>ಓ) ಪಕ್ಕದಲ್ಲಿರುವ ವಸ್ತುವಿಗೆ ತಾಕಿಸಿಕೊಳ್ಳುವುದು |
| ಶ್ರವಣ | ಎ) ಕಿವಿಯ ರಚನೆಯಲ್ಲಿ ರಚನೆಯಲ್ಲಿ ದೋಷ<br>ಬಿ) ಕಿವಿ ಸೋರುವುದು<br>ಸಿ) ಕಿವಿ ನೋವು |
| ಶ್ರವಣ | ಡಿ) ಕಿವಿಯಲ್ಲಿ ತುರಿಕೆ/ಕೆಳುವಿಕೆ<br>ಇ) ಹತ್ತಿರದಿಂದ ಕೇಳಿಸಿಕೊಳ್ಳಲು ಯತ್ನಿಸುವುದು<br>ಎಫ್) ಸೂಚನೆಗಳನ್ನು ಪದೇ ಪದೇ ಕೇಳುವುದು<br>ಜಿ) ಸರಿಯಾಗಿ ಬರೆಯಲು ಸಾಧ್ಯವಿಲ್ಲದಿರುವುದು<br>ಎಚ್) ಮಾತನಾಡುತ್ತಿರುವವರು ಆಲಿಸುವ ಬದಲು ಪ್ರತಿಧ್ವನಿತ ಬಿಂಬವನ್ನು<br>ಆಆಲಿಸಲು ಯತ್ನಿಸುವುದು<br>ಐ) ಕಪ್ಪು ಹಲಗೆಯಿಂದ ನೋಡಿ ಬರೆಯುವಾಗ ತಪ್ಪು ಮಾಡುವುದು<br>ಜೆ) ಆಗಾಗ ತನ್ನ ಸಹಪಾಠಿಯನ್ನು ಕಾರ್ಯಪ್ರಸ್ತಕ ತೋರಿಸಲು ಕೇಳುವುದು<br>ಕೆ) ತರಗತಿಯಲ್ಲಿ ಅವಧಾನದಿಂದಿರಲು ಸಮಸ್ಯೆ<br>ಎಲ್) ಆಲಿಸಲು ಹೆಚ್ಚಾಗಿ ಒಂದು ಕಿವಿ ಬಳಸುವುದು<br>ಎಮ್) ಯಾರಾದರೂ ಹಿಂದಿನಿಂದ ಮಾತನಾಡಿದರೆ ಸಮಸ್ಯೆ<br>ಎನ್) ಮಗು ಅತಿ ಜೋರಾಗಿ ಅಥವಾ ಅತಿ ಮೆಲ್ಲಗೆ ಮಾತನಾಡುವುದು<br>ಓ) ಧ್ವನಿ ಸಮಸ್ಯೆ ಮತ್ತು ತಪ್ಪು ಉಚ್ಚಾರಣೆ<br>ಪಿ) ಟಿವಿ/ರೇಡಿಯೋ ನನ್ನು ಜೋರಾಗಿ ಹಾಕುವುದು<br>ಕ್ಯೂ) ಅಸಂಬದ್ಧ ಉತ್ತರಗಳು<br>ಆರ್) ಮಗು ತನ್ನ ಸಮವಂತುಸ್ಕರಿಂದ ದೂರವಿರುವುದು<br>ಎಸ್) ಬೇರೆ ಕೋಣೆಯಿಂದ ಕೂಗಿದಾಗ ಮ ಗು ಉತ್ತರಿಸುವುದಿಲ್ಲ |

| | |
|---|---|
| | ಟಿ) ಕೆಲವು ಪುನರುಕ್ತಿಗಳ ನಂತರವೇ ಮಗು ಗ್ರಹಿಸುತ್ತದೆ. |
| ಮಾತು | ಎ) ಮಾತಿನಲ್ಲಿ ಅನುಚಿತ (ಹೊಂದದ) ಶಬ್ದಗಳು<br>ಬಿ) ಉಗ್ಗುವುದು<br>ಸಿ) ಬಾಲಭಾಷೆ<br>ಡಿ) ಸರಿಯಾದ ಶಬ್ದ ಕಲಿಯಲು ಸಾಮರ್ಥ್ಯವಿಲ್ಲ, ಮತ್ತು ತಪ್ಪಾದ ಮಾತು ಬಳಕೆ<br>ಇ) ಅರ್ಥವಾಗದ ಮಾತು |
| ಚಲನಾ ನ್ಯೂನತೆಗಳು | ಎ) ಕತ್ತು, ಕೈ, ಬೆರಳು, ಸೊಮಟ ಅಥವಾ ಕಾಲುಗಳಲ್ಲಿ ಊನ<br>ಬಿ) ಕುಳಿತುಕೊಳ್ಳಲು, ನಿಲ್ಲಲು ಮತ್ತು ನಡೆಯಲು ಕಠಿಣತೆ<br>ಸಿ) ವಸ್ತುಗಳನ್ನು ಎತ್ತಲು, ಹಿಡಿದಿರಲು ಮತ್ತು ನೆಲದ ಮೇಲಿಸಲು ಕಠಿಣತೆ<br>ಡಿ) ದೇಹದ ಯಾವುದೇ ಭಾಗವನ್ನು ಚಲಿಸಲು ಅಥವಾ ಬಳಸಲು ಕಷ್ಟ<br>ಇ) ಲೇಖನಿ ಹಿಡಿಯಲು ಕಠಿಣತೆ<br>ಎಫ್) ನಡೆಯಲು ಕೋಲು ಬಳಸುವುದು<br>ಜಿ) ನಡೆಯುವಾಗ ಎಳೆತ ಸರಕ್ಕನೆ ಸರಿಯುವುದು)<br>ಎಚ್) ದೈಹಿಕ ಸಮನ್ವಯತೆ (ಹೊಂದಾಣಿಕೆ) ಕೊರತೆ<br>ಐ) ಅಪಸ್ಮಾರದ, ನಡುಕದ ಚಲನೆಗಳು<br>ಜೆ) ಕೀಲು ನೋವುಗಳು<br>ಕೆ) ದೇಹದ ಯಾವುದೇ ಭಾಗ ಕತ್ತರಿಸಿ ತೆಗೆದುಹಾಕಲ್ಪಟ್ಟಿರುವುದು. |
| ಜ್ಞಾನಾತ್ಮಕ ನ್ಯೂನತೆ (ಬುದ್ಧಿ ಮಾಂದ್ಯತೆ) | ಎ) 12–15 ತಿಂಗ ಳ ವಯಸ್ಸಿನ ನಂತರವೂ ಮಗು ಸಹಾಯವಿಲ್ಲದೆ ಕುಳಿತುಕೊ ಳ್ಳದಿದ್ದರೆ<br>ಬಿ) ಅಥವಾ ವರ್ಷಗಳ ನಂತರವೂ ನಡೆಯದಿದ್ದರೆ<br>ಸಿ) ಅಥವಾ ವರ್ಷಗಳಾದರೂ ಮಾತನಾಡದಿದ್ದರೆ<br>ಡಿ) 6 ವರ್ಷ ವಯಸ್ಸಿನಲ್ಲಿ ಕೆಳಗಿನ ಯಾವುದೇ ಚಟುವಟಿಕೆಗಳನ್ನು ಸ್ವತಂತ್ರವಾಗಿ ಮಾಡಲು ಅನಗತ್ಯ ಸಮಸ್ಯೆ ಹೊಂದಿದ್ದರೆ<br>– ತಿನ್ನುವುದು<br>ಉಡುಪು ಧರಿಸುವುದು<br>ಶೌಚ ಚಟುವಟಿಕೆ<br>ಇ) ಲೇಖನಿ ಹಿಡಿಯಲು/ಅಥವಾ ಕತ್ತರಿ ಬಳಸಲು ಸಮಸ್ಯೆ<br>ಎಫ್) ಚೆಂಡಿನೊಡನೆ ಆಡಲು ಅಥವ ಆ ಚಿಣ್ಣೀಖೊಳೂ ಅಥಳೂ ಅಸರ್ಥತೆ<br>ಜಿ) ಪದೇ ಪದೇ ಸಿಡಿಮಿಡಿಗೊಳ್ಳುವುದು, ನೊಂಡು ಹಿಡಿಯುವುದು ಅಥವಾ ಸಂಭೋಧನೆಗೆ<br>ಎಚ್) ಇತರರು ಆಡಿದ ಮಾತಿಗೆ ಸಾಮಾನ್ಯವಾಗಿ ಗಮನ ನೀಡಿರುವುದು,<br>ಐ) ಸರಳ ವಿಷಯಗಳನ್ನು ಸಹ ನೆನಪಿಡಲು ಹಲವಾಗಿ ಪುನರುಕ್ತಿಗಳು ಅವಶ್ಯ<br>ಜೆ) ಕೇವಲ ಐದು ಹಣ್ಣುಗಳು, ತರಕಾರಿಗಳು ಅಥವಾ ಸಸ್ಯಗಳ ಹೆಸರು ಹೇಳಲು ಸಮಸ್ಯೆ<br>ಕೆ) ವಾರದ ದಿನಗಳನ್ನು ಹೆಸರಿಸಲು ಸಮಸ್ಯೆ<br>ಎಲ್) ಉಳಿದ ಸಮವಯಸ್ಕರಂತಲ್ಲದೆ ಸ್ಪಷ್ಟ ಮಾತಿನಲ್ಲಿ ಅವಶ್ಯಕತೆಯನ್ನು ವ್ಯಕ್ತ ಪಡಿಸಲು ಸಮಸ್ಯೆ. |
| | ಸಾಧಾರಣಮಟ್ಟದ, ಅದೇ ವಯಸ್ಸಿನ ತರಗತಿಯ, ಶಾಲಗೆ ಹೋಗುವ ಮಕ್ಕಳಿಗೆ ಹೋಲಿಸಿದಂತೆ ಯಾವುದೇ ನಾಲ್ಕು ಸೂಚಕಗಳಿಗೆ ಪ್ರತಿಕ್ರಿಯೆಗಳು ಧನಾತ್ಮಕವಾಗಿದ್ದರೆ, ಮಗುವು ಅರ್ಹ ಮನೋವಿಜ್ಞಾನಿ ಅಥವಾ ಮಾನಸಿಕ ಸವಾಲುಗಳುಳ್ಳ ಮಕ್ಕಳೊಂದಿಗೆ ವ್ಯವಹರಿಸಲು ತರಬೇತಿ ನಡೆದ ಶಿಕ್ಷಕರಿಂದ ಪರೀಕ್ಷಿಸಲ್ಪಡಬೇಕು.<br>ಎಮ್) ಸ್ವಲ್ಪ ಸಮಯಕ್ಕಾಗಿಯೂ ಕಾರ್ಯಗಳ ಮೇಲೆ ಗಮನ ಕೇಂದ್ರಿಕರಿಸುವ ಸಾಮರ್ಥ್ಯವಿರುವುದಿಲ್ಲ.<br>ಎನ್) ಅಸಮರ್ಪಕ ಮೌಖಿಕ ಉತ್ತರಗಳು |

| | |
|---|---|
| | ಓ) ಹೊಸ ವಿಷಯ ಅಂಶಗಳನ್ನು ಕಲಿಯಲು ಕಠಿಣತೆ<br>ಪಿ) ತರಗತಿಯಲ್ಲಿ ಕಲಿಸಿದ ಪಾಠಗಳ ಅತ್ಯಲ್ಪ ಗ್ರಹಿಕೆ<br>ಆರ್) ಪರಿಕಲ್ಪನೆಗಳ ಊಹೆ ಮಾಡಿಕೊಳುವುದು ಕಷ್ಟ<br>ಎಸ್) ಸಮ ವಯಸ್ಸಕರೊಂದಿಗೆ ಚೆನ್ನಾಗಿ ಹೊಂದಿಕೊಳ್ಳುವುದಿಲ್ಲ.<br>ಟಿ) ಸಮವಯಸ್ಸಕರಿಗೆ ಹೋಲಿಸಿದರೆ ಕಲಿಯಲು ಅಥವಾ ಅಭ್ಯಾಸ ಮಾಡಲು ಹೆಚ್ಚು ಪ್ರಯತ್ನ ಅಗತ್ಯ<br>ಯು) ಯಾವುದೇ ಕಾರ್ಯದಲ್ಲಿ ಪರಿಣತಿ ಪಡೆಯಲು ಅತಿ ದೀರ್ಘ ಸಮಯ ಅಗತ್ಯ<br>ವಿ) ಕನಿಷ್ಠ ಮಟ್ಟದ ಶೈಕ್ಷಣಿಕ ಸಾಧನೆ<br>ಡಬ್ಲ್ಯೂ) ಕಲಿಯಲು ದೃ ಶ್ಯ ಸುಳಿವುಗಳು ಅಥವಾ ವಸ್ತುಗಳ ಮೇಲೆ ಅತಿಯಾದ ಅವಲಂಬನೆ |
| ಕಲಿಕಾ ನ್ಯೂನತೆಗಳು | ಎ) ಎಣಿಸಲು ಕಠಿಣತೆ<br>ಬಿ) ಮನೆ ಅಥವಾ ಶಾಲೆಯಲ್ಲಿ ಏಕಾಗ್ರತೆಯ ಕೊರತೆ, ಅಥವಾ<br>ಸಿ) ತರಗತಿಯಲ್ಲಿ ನಿ:ಶಬ್ದವಾಗಿ ಕುಳಿತು ಕೊಳ್ಳಲಾರರು<br>ಡಿ) ಹೇಳಿದ ಮಾತುಗಳನ್ನೇ (ಪದಗಳನ್ನು)<br>ಸರಿಯಾಗಿ ಬರೆದುಕೊಳ್ಳುವುದಿಲ್ಲ.<br>ಇ) ಸರಿಯಾದ ಪದಗಳಿಗೆ ಸೂಕ್ತವಲ್ಲದ ಸೇರ್ಪಡೆಗಳು ಉದಾಅ:<br>ಎಫ್) ಯಾವಾಗಲೂ ಎಡ ಬಲಗಳ ನಡುವೆ ಗೊಂದಲ.<br>ಜಿ) ಶಾಬ್ದಿಕ ಸೂಚನೆಗಳನ್ನು ನೆನಪಿಟ್ಟುಕೊ ಳ್ಳುವುದಕ್ಕೆ ಅಸಮಂಜಸವಾದ ಕಠಿಣತೆ<br>ಎಚ್) ವಿಷಯಗಳನ್ನು ಕಂಠಪಾಠ ಮಾಡಲು ಸಾಮಾನ್ಯ ಸಮಸ್ಯೆ<br>ಐ) ಮಗುವಿನಲ್ಲಿ ವಿವಿಧ ಕಾರ್ಯಗಳನ್ನು ಸಮಯಾನುಸಾರ ಪೂರ್ಣಗೊಳಿಸುವುದಕ್ಕೆ ಅಡ್ಡಿ ಮಾಡುವ ತೀವ್ರರೂಪದ ಚಡಪಡಿಕೆ<br>ಜೆ) ಓದುವಾಗ ಪದೇ ಪದೇ ಅಕ್ಷರಗಳನ್ನೇ ಹಿಂದು ಮುಂದಾಗಿ ಓದುವುದು ಉದಾಯನ್ನು ಬಿ ಎಂದು, ಎಂಬುದನ್ನು ಎಂದು<br>ಕೆ) ಓದುವಾಗ ಪದೇ ಪದೇ ಸಂಖ್ಯೆಗಳನ್ನು ಹಿಂದುಮುಂದಾಗಿ ಓದುವುದು ಉದಾ 31ನ್ನು 13, 6ನು 9 ಇತ್ಯಾದಿ<br>ಎಲ್) ಓದುವಾಗ ಅತಿಯಾದ ತಪ್ಪುಗಳು ಪದಗಳ ಸ್ಥಾನ ಬದಲಿ ಪುನರುಚ್ಚಾರ ಸೇರಿಸುವುದು ಬದಲಿಸುವುದು ಬಿಟ್ಟುಬಿಡುವುದು<br>ಎಮ್) ಗಣಿತ ಲೆಕ್ಕಾಚಾರದಲ್ಲಿ ಕನಿಷ್ಠ ಮಟ್ಟ<br>ಎನ್) ದೃಷ್ಟಿ ಸಾಮರ್ಥ್ಯ ಉತ್ತಮವಾಗಿದ್ದರೂ ಪುಸ್ತಕ, ಕಪ್ಪು ಹಲಗೆಯಂತಹ ಸಾಮಾನ್ಯ ಮೂಲಗಳಿಂದ ನೋಡಿ ಬರೆಯುವಾಗ ತಪ್ಪುಗಳು<br>ಓ) ಅಕ್ಷರಗಳನ್ನು/ಪದಗ ಳನ್ನೇ ಅತಿ ಸಮೀಪದಲ್ಲಿ ಅಥವಾ ಅತಿ ದೂರದಲ್ಲಿ ಬರೆಯುವುದು ಅಂತರ ಬಿಡುವ ಸಮಸ್ಯೆ<br>ಪಿ) ಮಗು ಸಮರ್ಪಕವಾಗಿ ಗ್ರಹಿಸಿದಂತೆ ಕಂಡರೂ ಸಂಬಂಧಪಟ್ಟರೂ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಿಲ್ಲ ಯಾವುದಾರೂ 3 ಅಥವಾ 5 ಲಕ್ಷಣಗಳಿದ್ದಲ್ಲಿ ಆರಂಭಿಕ ತಪಾಸಣೆಗಾಗಿ ಮತ್ತು ಸಮಾಲೋಚನೆಗಾಗಿ ಮನೋವಿಜ್ಞಾನಿ,<br><br>ಶಿಶುತಜ್ಞರು ಅಥವಾ ವಿಶೇಷ ಶಿಕ್ಷಕರಿಗೆ ಉಲ್ಲೇಖಿಸಬೇಕು ಕಲಿಕಾ ನ್ಯೂನತೆಗಳುಳ್ಳ ಮಕ್ಕಳಲ್ಲಿರುವ ಒಂದು ಪ್ರಮುಖ ಲಕ್ಷಣವೆಂದರೆ ಅವರ ಬಹರ ಕೌಶಲ್ಯ ಶಾಬ್ದಿಕ ಕೌಸಲ್ಯ ಗಳು ಉತ್ತಮವಾಗಿರುತ್ತವೆ. ಆದ್ದರಿಂದ ಅವರನ್ನು ಓಪಚಾರಿಕವಾಗಿ ಪರೀಕ್ಷಿಸಬೇಕು |

**8.3.2** ಮೌಲ್ಯಾಂಕನ (ಅಳತೆ, ಪರೀಕ್ಷೆ)

ವಿಶೇಷ ಅವಶ್ಯಕತೆಯುಳ್ಳ ಚಿಕ್ಕ ಮಕ್ಕಳ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿ ಗುರುತಿಸುವಿಕೆ

ಮತ್ತು ಮಧ್ಯವರ್ತನೆ ಅನೇಕ ವೇಳೆ ಉತ್ತಮ ಶಾಲಾ ಹೊಂದಾಣಿಕೆ ಮತ್ತು ಕಾರ್ಯನಿರ್ವಹಣೆಗೆ ಸಹಾಯಕವಾಗುತ್ತದೆ ಪರೀಕ್ಷಣವು ಮಗುವಿನ ವೈಯಕ್ತಿಕ ಅಗತ್ಯತೆಗಳನ್ನು ನಿರ್ಧರಿಸಲು ಸಹಾಯಕ ಕೆಲವು ಮಕ್ಕಳಿಗೆ ಒಂದು ನಿರ್ದಿಷ್ಟ ಸಮಯದಲ್ಲ ಕಲಿಯಲು ತೊಂದರೆ ಇರಬಹುದು ಮತ್ತು ಅಲ್ಪಾವಧಿಯ ಸಹಾಯ ಬೇಕಾಗಬಹುದು. ಆದರೆ ಹಲವು ವಿಶೇಷ ಅಗತ್ಯತೆಗಳು ಜೀವನ ಪರ್ಯಂತ ಇರುವ ಅಗತ್ಯತೆಗಳಾಗಿರಬಹುದು ಮಗುವಿನ ಅವಶ್ಯಕತೆಗಳು ಪರಿಸರ ಹಾಗೂ ಅವನು/ಅವಳು ಬೆಳೆಸಿಕೊಳ್ಳುವ ಹೊಂದಾಣಿಕೆ ತಂತ್ರಗಳ ಆಧಾರದ ಮೇಲೆ ಬದ ಲಾಗಬಹುದು ಮಗುವಿನ ಶೈಕ್ಷಣಿಕ ಅವಶ್ಯಕತೆಗಳ ಮೇಲೆ ಇನ್ನೂ ಹಲವು ಅಂಶಗಳು ಪ್ರಭಾವ ಬೀರಬಹುದು ಹಾಗೂ ಈ ಅಂಶಗಳನ್ನು ಗುರುತಿಸಿ ಚರ್ಚಿಸಲು ಶಾಲಾ ತಂಡವು ನಿಯಮಿತವಾಗಿ ಸಭೆಸೇರಿ, ಅಗತ್ಯಕ್ಕನುಸಾರ ಮಗುವಿನ ಕಾರ್ಯಕ್ರಮವನ್ನು ಹೊಂದಾಣಿಕೆ ಮಾಡುವುದು ಅವಶ್ಯ.

ತಮ್ಮ ಮಗುವನ್ನು ಒಬ್ಬ ಸಂಪನ್ಮೂಲ ಶಿಕ್ಷಕರಿಗೆ ಅಥವಾ ಚಿಕಿತ್ಸಕರಿಗೆ ಉಲ್ಲೇಖಿಸಲು ಇಲಾಖೆ ಪೋಷಕರು ಒಪ್ಪಿಗೆ ನಿಡಿದ ಕೂಡಲೇ ಒಂದು ಪರೀಕ್ಷಣ ಯೋಜನೆಯನ್ನು ರೂಪಿಸಲಾಗುವುದು ಪರೀಕ್ಷಣ ಪ್ರಕ್ರಿಯೆಯಲ್ಲಿ ವಿವಿಧ ರೀತಿಯಲ್ಲಿ ಪೋಷಕರನ್ನು ತೊಡಿಗಿಸಿಕೊಳ್ಳಬಹುದು.

ಪರೀಕ್ಷಣವನ್ನು ಹೇಗೆ ನಿರ್ವಹಸಲಾಗುವುದು?
ಪರೀಕ್ಷಣ ಪ್ರಕ್ರಿಯೆಯು ಕೆಳಕಂಡ ಪ್ರಶ್ನೆಗಳನ್ನು ಸಂಭೋದಿಸುತ್ತದೆ.

1. ಮಗು ಯಾರು? – ಆಸಕ್ತಿಗಳು, ಇಷ್ಟಾನಿಷ್ಟಗಳು, ಕೌಶಲ್ಯಗಳು ಮತ್ತಿತರ ಬಲ ಧನಾತ್ಮಕ ಅಂಶಗಳು)
2. ಮಗುವಿನ ವಿಶೇಷ ಅವಶ್ಯಕತೆಗಳೇನು? ಮಗು ವಿಶೇಷ ಶಿಕ್ಷಣವನ್ನು ಏಕೆ ಪಡೆಯುತ್ತಿದೆ?
3. ಮಗುವಿನ ಕುಟುಂಬ ಮತ್ತು ಬೆಂಬಲದ ವೃತ್ತಯಾದು?
   ಆ ತಂತುಗಳು, ಕನಸುಗಳು, ಅವಶ್ಯಕತೆಗಳು ಕಾಳಜಿಗಳು ಒಳಗೊಂಡಂತೆ
4. ವಿದ್ಯಾರ್ಥಿಯ ನಿಯಮಿತ ಹಾಗೂ ದೈನಂದಿನ ಚಟುವಟಿಕೆಗಳೇನು?
5. ನಿಯಮಿತ ಕಾರ್ಯಗಳು ಮತ್ತು ಚಟುವಟಿಕೆಗಳನ್ನು ನೇರವಾಗಿ ಒಮ್ಮೆಗೆ ಬಂದರಂತೆ ಗಮನಿಸಿದಾಗ, ಮಗು ಹೆಚ್ಚು ಸಫಲನಾಗಲು ಯಾವುದು ಸಹಾಯಕವಾಗಬಹುದು?

- ಮಾತನಾಡುವುದು ಮತ್ತು ಸಂವಹನ
- ಚಲಿಸುವುದು ಮತ್ತು ಓಡಾವುದು
- ಆಟ ಆಡುವುದು ಮತ್ತು ಇತರರೊಂದಿಗೆ ಬೆರೆಯುವುದು
- ಕಲಿಯುವುದು ಮತ್ತು ಸಮರಿಸುವುದು
- ಆಯ್ಕೆಗಳನ್ನು ಮಾಡುವುದು ಮತ್ತು ನಿಯಂತ್ರಿಸುವುದು
- ಸ್ನೇಹಿತರೊಂದಿಗೆ ಭಾಗವಹಿಸುವುದು
- ಇತರರಿಗೆ ಸಹಾಯ ಮಾಡುವುದು ಇವೆಲ್ಲ ಸೇರಿದಂತೆ ಸಹಾಯಕ ತಂತ್ರಜ್ಞಾನಕ್ಕಾಗಿ ನಾವು ಒಳಗೊಳ್ಳುವ ಶಿಕ್ಷಣ ಕಾರ್ಯಕ್ರಮದ ಯಾವ ಗುರಿ,

ಉದ್ದೇಶಗಳನ್ನು ನೋಡಬೇಕು? (2 ಅಥವಾ 3ನ್ನು ಪ್ರಧಾನವಾಗಿರುವುದು)

- ಭಾಷೆ ಮತ್ತು ಸಂವಹನ
- ಆಟ ಮತ್ತು ಸಾಮಾಜೀಕರಣ
- ಪೋಷಣೆ
- ಚಲನೆ ಮತ್ತು ಸ್ಥಾನ ನಿರ್ಣಯ

- ಸಿದ್ಧತಾ ಕೌಶಲ್ಯಗಳು
- ಸ್ವಸಹಾಯ
- ದೈನಂದಿನ ಜೀವನದ ಚಟುವಟಿಕೆಗಳು
- ವರ್ತನೆ
- ಸ್ನೇಹಿತರ ಸಮೂಹ – ಇವುಗಳನ್ನು ಒಳಗೊಂಡಂತೆ

ಮಗುವಿನ ಅಗತ್ಯತೆಗಳನ್ನು ಆಧರಿಸಿ ಒಬ್ಬ ಸಂಪನ್ಮೂಲ ಶಿಕ್ಷಕರು, ಓದುವ ಚಿಕಿತ್ಸಕರು, ಮಾತು, ಭಾಷೆ ಚಿಕಿತ್ಸಕರು, ಮನೋವಿಜ್ಞಾನಿ, ಓದ್ಯೋಗಿಕ ಚಿಕಿತ್ಸಕರು ಅಥವಾ ಇತರನ್ನೊಳಗೊಂಡ ಪರಿಣತರನೇಕರು ಇರಬಹುದು ಬೇರೆ ಬೇರೆ ವೃತ್ತಿಪರರು ಮಗುವಿನ ವಿಕಾಸದ ಬೇರೆ ಬೇರೆ ಕ್ಷೇತ್ರವನ್ನು ಪರೀಕ್ಷಿಸಲು ಅರ್ಹರಾಗಿರುತ್ತಾರೆ. ಉದಾಹರಣೆಗೆ ಒಬ್ಬ ಮನೋವಿಜ್ಞಾನಿಯು ಮಗುವಿನ ಜ್ಞಾನಾತ್ಮಕ ಸಾಮರ್ಥ್ಯವನ್ನು ಪರೀಕ್ಷಿಸುವರು ತರಗತಿ ಶಿಕ್ಷಕರು ಅಥವಾ ಸಂಪನ್ಮೂಲ ಶಿಕ್ಷಕರು ಮಗುವಿನ ಕಲಿಕಾ ಕೌಶಲ್ಯಗ ಳನ್ನು ಪರೀಕ್ಷಿಸಬಹುದು ನ್ಯೂನತೆಗಳ ಪ್ರಾರಂಭಿಕ ಪರೀಕ್ಷಣಕ್ಕಾಗಿ ಒಂದು ಪ್ರಶ್ನಾವಳಿಯನ್ನೇ ಶಿಕ್ಷಕರು ಬಳಸಬಹುದು ಅನುಬಂಧಲ್ಲಿ ಕೊಡಲಾಗಿದೆ.

ಮಗುವಿಗೆ ಒಂದು ಪರೀಕ್ಷಣ ಯೋಜನೆಯನ್ನು ರೂಪಿಸಿದ ನಂತರ ಮತ್ತು ಪರೀಕ್ಷಣದ ಎಲ್ಲಾ ಫಲಿತಾ ಂಶಗಳು ಪೂರ್ಣಗೊಂಡಾಗ ಶಾಲೆಯು ಪೋಷಕರನ್ನು ಸಂಪರ್ಕಿಸಬಹುದು ಮತ್ತು ಪರೀಕ್ಷಣದಲ್ಲಿ ಭಾಗವಹಿಸಿದ ಶೀಕ್ಷಕರನ್ನು ಫಲಿತಾ ಂಶ ವಿವರಿಸಲು, ಶಿಫಾರಸ್ಸುಗಳನ್ನು ಚರ್ಚಿಸಲು ಹಾಗೂ ಸಂಬಂಧಿಸಿದ ಯಾವುದೇ ತೀರ್ಮಾನ ಕೈಗೊಳ್ಳಲು ಪೋಷಕರನ್ನು ತೊಡಗಿಸಿಕೊಳ್ಳುವುದಕ್ಕಾಗಿ ಸಭೆಯನ್ನು ಏರ್ಪಡಿಸಬಹುದು ಮಗುವಿನೊಂದಿಗೆ ಕೆಲಸ ಮಾಡುವ ಪೋಷಕರು, ಶೀಕ್ಷಕರು ಮತ್ತು ಅಥವಾ ಇತರರೊಂದಿಗೆ ಒಂದು ಲಿಖಿತ ವರದಿಯನ್ನು ವಿನಿಮಯ ಮಾಡಿಕೊಳ್ಳಬಹುದು.

### 8.3.3 ಆರಂಭಿಕ ಮಧ್ಯವರ್ತನೆ

ಆರಂಭಿಕ ಮಧ್ಯವರ್ತನೆ ಎಂಬ ಪದವು ವಿಶೇಷ ಅಗತ್ಯತೆಗಳ್ಳುಳ್ಳ ಚಿಕ್ಕ ಮಕ್ಕಳಿಗೆ ಅವರ ಸ್ಥಿತಿಯ ಪರಿಣಾಮಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ನೀಡುವ ಸೇವೆಗಳಿಗೆ ಅನ್ವಯಿಸುತ್ತದೆ. ಸೇವೆಗಳು ಮಾತು, ಶಾರೀರಕ ಅಥವಾ ಔದ್ಯೋಗಿಕ ಚಿಕಿತ್ಸೆ ಆಗಿರಬಹುದು ಹಾಗೂ ಮನೆಯಲ್ಲಿ ಅಥವಾ ಕಛೇರಿಗಳಲ್ಲಿಯೂ ಒದಗಿಸಬಹುದು.

ಈ ಸೇವೆಗಳು ಆರಂಭಿಕ ಹಂತದಲ್ಲಿಯೇ ಒದಗಿಸಿದಾಗ ಮಗುವಿನ ವಿಕಾಸಾತ್ಮಕ ವಿಳಂಬಗಳಿಗೆ ಸಹಾಯ ಮಾಡುವ ಮೂಲಕ ಮುಂದೆ ಯಾವ ಚಿಕಿತ್ಸೆಯೂ ಅಗತ್ಯವಿರ ಲಾರದೆಂಬ ಆಶಯವಿದೆ ಒಂದು ವೇಳೆ ಮಗು ಪ್ರಾಥಮಿಕ ಶಾಲಾ ವಯಸ್ಸನ್ನು ತಲುಪಿ, ಆಗಲೂ ಚಿಕಿತ್ಸೆ ಅಗತ್ಯವಿದ್ದರೆ, ವಿವಿಧ ರೀತಿಯ ವಿಶೇಷ ಅಗತ್ಯತೆಗಳಿಗೆ ಗಮನವೀಯುವ ಪರಿಹಾರಾತ್ಮಕ ಶಾಲೆಗಳಿಗೆ ಇಂತಹ ಅನೇಕ ಶಾಲೆಗಳಲ್ಲಿ ಪರಿಹಾರಾತ್ಮಕ ಪಠ್ಯಕ್ರಮದ ಭಾಗವಾಗಿ ಮಗುವಿನ ದಿನಚರಿಯಲ್ಲಿ ಚಿಕಿತ್ಸೆಗಳನ್ನು ಅಳವಡಿಸಲಾಗುತ್ತದೆ.

ಆರಂಭಿಕ ಮಧ್ಯವರ್ತನೆ ಏಕೆ ಮುಖ್ಯವಾಗಿದೆ?

ಆರಂಭಿಕ ಮಧ್ಯವರ್ತನೆ ಏಕೆ ಮುಖ್ಯವೆಂಬುದಕ್ಕೆ ಮೂರು ಮುಖ್ಯ ಕಾರಣಗಳಿವೆ ಹಾಗೂ ಇದು ಆದಷ್ಟು ಬೇಗ ಪ್ರಾರಂಭವಾಗಬೇಕಾಗಿದೆ.

ಅದು ಮಗುವಿನ ವಿಕಾಸಕ್ಕೆ ಬೆಂಬಲ ನೀಡುತ್ತದೆ, ಅದು ಕೇವಲ ಮಗುವಿಗೆ ಮಾತ್ರವಲ್ಲದೇ ಕುಟುಂಬಕ್ಕೂ ಬೆಂಬಲ ವ್ಯವಸ್ಥೆಯಾಗಿದೆ, ಹಾಗೆ ಅಂತಿಮವಾಗಿ ಅದು ಮಗುವಿಗೆ ಸಮಂಜಸದ ಕ್ರಿಯಾಶೀಲ ಸದಸ್ಯನಾಗಲು ಅಗತ್ಯವಾದ ಸಾಮರ್ಥ್ಯಗಳನ್ನು ಒದಗಿಸುತ್ತದೆ. ಮಧ್ಯವರ್ತನಾ ಪ್ರಕ್ರಿಯೆಉಲು ಈ ಕೆಳಗಿನ ತಂಡ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ.

ಒಂದು ಮಧ್ಯವರ್ತನಾ ಯೋಜನೆಯನ್ನು ವಿನ್ಯಾಸಗೊಳಿಸುವುದು

- ಪೋಷಕರೊಂದಿಗೆ ಸಮಾಲೋಚನೆ ಮತ್ತು ಭಾಗೀದಾರಿಕೆ ಸೂಕ್ತ ಮಧ್ಯಮದ ಸೃಷ್ಟಿ ಮತ್ತು / ಅಥವಾ ಗುರುತಿಸಿಕೊಳ್ಳುವುದು ಮಾರುಕಟ್ಟೆಯಲ್ಲಿರುವ ಮತ್ತು ಸ್ಥಳೀಯವಾಗಿ ರೂಪಿಸಿದ)

- ಇತರ ಸೂಕ್ತವಾದ ಸಹಾಯಕ ತಂತ್ರಜ್ಞಾನವನ್ನು ರೂಪಿಸುವುದು ಮತ್ತು ಅಥವಾ ಗುರುತಿಸುವುದು (ಉದಾ, ಒತ್ತುಗುಂಡಿ ಆಟಿಕೆಗಳು)
- ಕನಿಷ್ಠ ನಾಲ್ಕು ವಾರಗಳ ಕಾಲ ದೈನಂದಿನ ಕ್ರಮವಾಗಿ ಯೋಜನೆಯ ಅನುಷ್ಠಾನ
- ವಿದ್ಯಾರ್ಥಿಯ ಕಲಿಕಾಫಲಗಳ ಮೌಲ್ಯಮಾಪನ ಮಾಡುವುದು, ಮತ್ತು
- ಸಹಾಯಕ ತಂತ್ರಜ್ಞಾನ ಬೆಂಬಲಗಳಿಗಾಗಿ ಮುಂದಿನ ಹಂತಗಳನ್ನು ಸಲಹೆ ಮಾಡುವುದು.

ಮಧ್ಯವರ್ತನೆಗಳು ಶಾಲಾ ಆಧಾರಿತ ಮಧ್ಯವರ್ತನೆಗಳಾಗಿರಬಹುದು ಅಥವಾ ಶಾಲೆಯಲ್ಲ ಇಮಕ್ಕಳ ಸಫಲತೆ ಸಾಧ್ಯವಾಗಲು ಧನಾತ್ಮಕ ವರ್ತನಾತ್ಮಕ ಬೆಂಬಲದ ವ್ಯವಸ್ಥೆಯೊಂದಿಗೆ ಸಂಯೋಜಿಸಲ್ಪಟ್ಟ ಮನೆ ಆಧಾರಿತ ಮರ್ಧಯವರ್ತನೆಗಳಾಗಿರಬಹುದು. ಈ ಕಾರ್ಯಕ್ರಮದ ಧೀರ್ಘಕಾಲಿಕ ಪ್ರತಿಫಲುವು, ಕಿಂಡರ್ ಗಾರ್ಟನ್ ಪುರ್ವ ಪ್ರಾಥಮಿಕ ಪೂರ್ವದಿಂದ ಕಿಂಡರ್‌ಗಾರ್ಟನ್ ಪೂರೈಕೆಯವರೆಗಿನ ನ್ಯೂನತೆಯುಳ್ಳ ಮಕ್ಕಳ ಅಥವಾ ನಿದಿಷ್ಟ ಕಲಿಕಾ ನ್ಯೂನತೆಗಳಿಂದ ಹೆಚ್ಚಿನ ಅಪಾಯವಿರುವ ಚಿಕ್ಕಮಕ್ಕಳ ಜ್ಞಾನಾತ್ಮಕ, ಭಾಷಾ, ಸಾಮಾಜಿಕ ಮತ್ತು ಸಂವೇದನಾತ್ಮಕ ಅವಶ್ಯಕತೆಗಳನ್ನು ಸುಧಾರಿಸಲು ಪರಿಣಾಮಕಾರಿಯಾಗಬಲ್ಲ ಸಾಧನಗಳ ಮತ್ತು ತಂತ್ರಗಳ (ಉದಾ, ಮೌಲ್ಯಾಂಕನ ಸಾಧನಗಳು, ಶಾಲಾ ಪೂರ್ವಕದಂತಹ ಪಠ್ಯಕ್ರಮ ಕ್ರಮ ಬದ್ಧ ದಾ ಖಲೆಯೇ ಆಗಿದೆ.

ಪ್ರತಿ ಮಗುವಿನ ಕಲಿಕಾ ಅವಶ್ಯಕತೆಯು ಅವರ ನ್ಯೂನತೆ, ಮತ್ತು ಸಾಮರ್ಥ್ಯಗಳಿಗನುಗುಣವಾಗಿ ವೈಯಕ್ತಿಕವ ಆಗಿ ಭಿನ್ನವಾಗಿರುತ್ತದೆ ವೈಯಕ್ತಿಕ ಶಿಕ್ಷಣ ಯೋಜನೆಯನ್ನು ಬಳಸಬಹುದು ಚಟುವಟಿಕೆಗಳು ಸರಳದಿಂದ ಸಂಕೀರ್ಣದ ಕಡೆ ಸಾಗಬೇಕು ಪ್ರತಿ ಮಗುವಿಗೂ ಪಠ್ಯಕ್ರಮ ಯೋಜಿಸುವಲ್ಲಿ ಶಿಕ್ಷಕರು ಮುಖ್ಯ ಪಾತ್ರ ವಹಿಸುತ್ತಾರೆ ಮಗುವಿನ ಅಗತ್ಯಗಳ ಆಧಾರದ ಮೇಲೆ ಪರಿಪೂರ್ಣ ಪಠ್ಯಕ್ರಮವನ್ನು ಯೋಜಿಸಲು ವೀಕ್ಷಣೆಯೊಂದೇ ಮಾರ್ಗವಾಗಿದೆ.

### 8.4 ನ್ಯೂನತೆಯ ಕಾಯ್ದೆ ಮತ್ತು ನೀತಿಗಳು

1995ರ ನ್ಯೂನತೆಯುಳ್ಳ ವ್ಯಕ್ತಿಗಳ ಕಾಯ್ದೆಯ ಅನುಷ್ಠಾನದಿಂದ ಗಳಿಸಿದ ಅನುಭವಗಳ ಬೆಳಕಿನಲ್ಲಿ, ಹಲವು ವರ್ಷಗಳಲ್ಲಿ ನ್ಯೂನತೆಯ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆಗಳು ಹಾಗೂ ವಿಶ್ವಸಂಸ್ಥೆಯ ನ್ಯೂನತೆಯುಳ್ಳ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಒಡಂಬಕೆಗಳ ಆಧಾರದ ಮೇಲೆ 1995 ಕಾಯ್ದೆಯನ್ನು ಹೊಸ ಕಾನೂನಿನಿಂದ ಬದಲಾಯಿಸಲು ಸಲಹೆ ಮಾಡಲಾಗಿದೆ ಎಂದು ಹೇಳಿಕೆ ನೀಡಲಾಯಿತು.

ಈ ಘಟಕದಲ್ಲಿ ನಾವು ಪ್ರಸಕ್ತ ಕಾಯ್ದೆಗಳನ್ನು ನೀತಿಗಳನ್ನೂ ಚರ್ಚಿಸೋಣ.

ನ್ಯೂನತೆಯುಳ್ಳ ವ್ಯಕ್ತಿಗಳ ಮಾನವ ಹಕ್ಕುಗಳಾವುವು?

ಸಮಾಜದ ಎಲ್ಲಾ ಸದಸ್ಯರಿಗೂ ಒಂದೇ ಮಾನವ ಹಕ್ಕುಗಳಿವೆ ಅವು ನಾಗರೀಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳನ್ನು ಒಳಗೊಂಡಿವೆ. ಈ ಹಕ್ಕುಗಳ ಉದಾಹರಣೆಗಳು ಕೆಳಕಂಡ ಅಂಶಗಳನ್ನೊಗೊಂಡಿದೆ:

- ಕಾನೂನಿನ ದೃಷ್ಟಿಯಲ್ಲಿ ಯಾವುದೇ ತಾರತಮ್ಯವಿಲ್ಲದೆ ಸಮಾನತೆ ವ್ಯಕ್ತಿಯ
- ಜೀವನ, ಸ್ವಾತಂತ್ರ್ಯ ಮತ್ತು ರಕ್ಷಣೆಯ ಹಕ್ಕು
- ಕಾನೂನಿನ ಮುಂದೆ ಮತ್ತು ಕಾನೂನಾತ್ಮಕ ಸಾಮರ್ಥ್ಯದಲ್ಲಿ ಸಮಾನ ಗುರುತಿಸುವಿಕೆ
- ಚಿತ್ರ ಹಿಂಸೆಯಿಂದ ಬಿಡುಗಡೆ
- ಶೋಷಣೆ, ಹಿಂಸೆ ಮತ್ತು ದುರ್ಬಳಕೆಗಳಿಂದ ಮುಕ್ತಿ ಶಾರೀರಿಕ ಮತ್ತು ಮಾನಸಿಕ ಸಮಗ್ರತೆಯನ್ನು ಗೌರವಿಸುವ ಹಕ್ಕು
- ಚಲನೆ ಮತ್ತು ರಾಷ್ಟ್ರೀಯತೆ ಸ್ವಾತಂತ್ರ
- ಸಮುದಾಯದಲ್ಲಿ ಜೀವಿಸುವ ಬಾಳುವ ಹಕ್ಕು

- ಅಭಿವ್ಯಕ್ತಿ ಮತ್ತು ಅಭಿಪ್ರಾಯದ ಹಕ್ಕು ಖಾಸಗೀತನಕ್ಕೆ ಗೌರವ
- ಮನೆ ಹಾಗೂ ಕುಟುಂಬಕ್ಕೆ ಗೌರವ
- ಶಿಕ್ಷಣದ ಹಕ್ಕು ಆರೋಗ್ಯದ ಹಕ್ಕು ಉದ್ಯೋಗ (ದುಡಿಮೆಯ) ಹಕ್ಕು
- ಸಮರ್ಪಕ ಜೀವನ ಮಟ್ಟದ ಹಕ್ಕು
- ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ಹಕ್ಕು
- ಸಾಂಸ್ಕೃತಿಕ ಜೀವನದಲ್ಲಿ ಭಾಗವಹಿಸುವ ಹಕ್ಕು

ನ್ಯೂನತೆಯುಳ್ಳ ಎಲ್ಲಾ ವ್ಯಕ್ತಿಗಳೂ ಅವರ ಹಕ್ಕುಗಳನ್ನೇ ಅನುಭವಿಸಲು ಎಲ್ಲಾ ತಾರತಮ್ಯಗಳಿಂದ ಮುಕ್ತರಾಗಿದ್ದಾರೆ ಇದು ನ್ಯೂನತೆಯ ಆಧಾರದ ಮೇಲೆ ಯಾವುದೇ ತಾರತಮ್ಯ ಇಲ್ಲದಿರುವುದ ಮಾತ್ರ ವಲ್ಲದೇ ಜನಾಂಗ, ಬಣ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ಮತ್ತಿತ್ತರ ಅಭಿಪ್ರಾಯ, ರಷ್ಟ್ರೀಯ ಅಥವಾ ಸಾಮಾಜಿಕ ಮೂಲ, ಆಸ್ತಿ, ಜನನ ಅಥವಾ ಇತರ ಸ್ಥಾನಮಾನಗಳೆಲ್ಲ ದೃಷ್ಟಿಯಿಂದಲೂ ತಾರತಮ್ಯ ಮಾಡುವಂತಿಲ್ಲ.

8.4.1 ನ್ಯೂನತೆಗಳುಳ್ಳ ವ್ಯಕ್ತಿಗಳ ಹಕ್ಕುಗಳನ್ನು ಕುರಿತ ಒಡಂಬಡಿಕೆ?

ನ್ಯೂನತೆಗಳುಳ್ಳ ವ್ಯಕ್ತಿಗಳ ಹಕ್ಕುಗಳ ಒಡಂಬಡಿಕೆಯು ನ್ಯೂನತೆಗಳುಳ್ಳ ವ್ಯಕ್ತಿಗಳ ಹಕ್ಕುಗಳನ್ನು ಗುರುತಿಸುವ ಹಾಗೂ ಒಡಂಬಡಿಕೆಗೆ ಸಹಿ ಹಾಕಿರುವ ರಾ ಷ್ಟ್ರಗಳು ಆ ಹಕ್ಕುಗಳನ್ನು ಪೋತ್ಸಾಹಿಸಿ, ರಕ್ಷಿಸಿ, ಖಾತ್ರಿ ಪಡಿಸಲು ಇರುವ ಬದ್ಧತೆಗಳನ್ನು ಗುರುತಿಉಸವ ಒಮದು ಅಂತರರಾ ಷ್ಟ್ರೀಯ ಒಪ್ಪಂದವಾಗಿದೆ. ಈ ಒಡಂಬಡಿಕೆಯು ಎರಡು ಅನುಷ್ಠಾನದ ಮೇಲುಸ್ತುವಾರಿ ಮಾಡಲು ಸ್ಥಾಪಿತವಾದ ನ್ಯೂನತೆಗಳುಳ್ಳ ವ್ಯಕ್ತಿಗಳ ಹಕ್ಕುಗಳ ಸಮಿತಿ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದ ವಿಚಾರಗಳನ್ನು ಪರಾಮರ್ಶಿಸಲು ಸ್ಥಾಪಿತವಾದ ರಾಷ್ಟ್ರ ಪಕ್ಷಗಳ ಸಮಾವೇಶ

ರಾಷ್ಟ್ರಗಳು ನಾಗರೀಕ ಸಮಾಜ ಸಂಸ್ಥೆಗಳು, ರಾಷ್ಟ್ರೀಯ ಮಾನವ ಹಕ್ಕುಗಳ ಸಂಸ್ಥೆಗಳು ಮತ್ತು ಅಂತರ ಸರ್ಕಾರಿ ಸಂಸ್ಥೆಗಳ ಭಾಗವಹಿಸುವಿಕೆಯೊಂದಿಗೆ ಒಡಂಬಡಿಕೆಯ ಮಾತುಕತೆ ನಡೆಸಿದ್ದವು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2006ರ ಡಿಸೆಂಬರ್ 13ರಂದು ಒಡಂಬಡಿಕೆಯನ್ನು ಅಳವಡಿಸಿಕೊಂಡಿತು ಹಾಗೂ ಅದು 2007ರ ಮಾರ್ಚ್ 30ರಂದು ಸಹಿಗಾಗಿ ತೆರೆಯಲ್ಪಟ್ಟಿತು ಒಡಂಬಡಿಕೆಯನ್ನು ಅಂಗೀಕರಿಸಿದ ರಾ ಷ್ಟ್ರಗಳು ಅದರಲ್ಲಿರುವ ಮಾನಕಗಳನ್ನು ಗೌರವಿಸಲು ಕಾನೂನಾತ್ಮಕವಾಗಿ ಬದ್ಧರಾಗಿರುತ್ತವೆ ಉಳಿದ ರಾಷ್ಟ್ರಗಳಿಗೆ, ಈ ಒಡಂಬಡಿಕೆಯ ಒಂದು ಅಂತರ ಉಷ್ಟ್ರೀಯ ಮಾನಕವಾಗಿದ್ದು ಅದನ್ನು ಗೌರವಿಸಲು ಅವುಗಳು ಶ್ರಮಿಸಬೇಕಾಗಿರುತ್ತದೆ.

ಪ್ರಸ್ತುತದಲ್ಲಿರುವ ಕಾಯ್ದೆಯು ತಿದ್ದುಪಡಿ ಪ್ರಕಿಯೆಯಲ್ಲಿದೆ ಈ ಅಧ್ಯಾಯದಲ್ಲಿ ಬಳಸಲಾಗಿರುವ ದಾಖಲೆಯು ತಿದುದಪಡಿಗೆ ಮುಂಚಿತವಾಗಿದ್ದ ಕಾಯದ್ದೆಯ ವಿವರವಾಗಿದೆ.

ದಕ್ಷಿಣ ಏಷ್ಯಾದ ಬಹುತೇಕ ದೇಶಗಳಿಗೆ ನ್ಯೂನತೆ ಒಂದು ರಾಜ್ಯ ಪಟ್ಟಿಯ ವಿಷಯವಾಗಿದ್ದು, ಸ್ಥಳೀಯ ಸರ್ಕಾರಗಳ ಮೇಲೆಯಲ್ಲಿನ ಬದ್ಧತೆಗಳನ್ನು ಕಾರ್ಯಗತಗೊಳಿಸುವ ಜವಾಬಾರಿ ಇರುತ್ತದೆ. ಉದಾಹರಣೆಗೆ ಭಾರತದಲ್ಲಿ ಭಾರತೀಯ ಸಂವಿಧಾನದ ಅಡಿಯಲ್ಲಿ ವಿಷಯಗಳನ್ನು ಕೇಂದ್ರ, ರಾಜ್ಯ ಮತ್ತು ಸಮವರ್ತಿ ಪಟ್ಟಿಗಳೆಂಬ ಮೂರು ಪಟ್ಟಿಗಳಲ್ಲಿ ವಿಭಾಗಿಸಲಾಗಿದೆ ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳಾದ ರಕ್ಷಣೆ, ವಿದೇಶಾಮಗ ವ್ಯವಹಾರಗಳು, ಮುಂತಾದವು ಕೇಂದ್ರ ಸರ್ಕಾರದ ಜವಾಬ್ದಾರಿಗಳಾಗಿವೆ ಸಮವರ್ತಿ ಪಟ್ಟಿಯಲ್ಲಿ ಶಿಕ್ಷಣ ಆರೋಗ್ಯ ಮುಂತಾದ ವಿಷಯಗಳಿಗೆ ನ್ಯೂನತೆಯು ರಾಜ್ಯಪಟ್ಟಿಯಲ್ಲಿರುವ ವಿಷಯವಾಗಿದೆ ಹೀಗೆಂದರೆ ಅನುಷ್ಠಾನದ ಜವಾಬ್ದಾರಿಯು ಮುಖ್ಯವಾಗಿ ರಾಜ್ಯಮಟ್ಟದಲ್ಲಿ ರಾಜ್ಯ ಅಥವಾ ಪ್ರಾಂತ್ಯಗಳ ವಿಚಾರಗಳನ್ನು ಸಂಬೋಧಿಸಲು ಗ್ರಾಮ ಪಂಚಾಯತ್ ರಾಜ್ ಸಂಸ್ಥೆಗಳು ಅಥವಾ ಸ್ಥಳೀಯ ಸರ್ಕಾರಗಳು ಜವಾಬ್ದಾರಿ ಹೊಂದಿವೆ.

ನಮಗೆಲ್ಲ ತಿಳಿದಿರುವಂತೆ ಭಾರತದಲ್ಲಿ ನ್ಯೂನತೆಯ ಕಾಯ್ದೆಯನ್ನು ಅಂಗೀಕರಿಸಲಾಗಿದ್ದು ಅದು ಮೇಲಿನ ಎಲ್ಲಾ ಅಂಶಗಳ ಮಿಶ್ರಣವಾಗಿದೆ ಅದು ನೀತಿಗಳು, ಯೋಜನೆಗಳು ಮತ್ತು ಶಾಸನಗಳನ್ನೆಲ್ಲ ಒಂದೇ ದಾಖಲೆಯಲ್ಲಿ ನಮೂದಿಸಿದೆ.

**8.4.2 1995ರ ನ್ಯೂನತೆಯುಳ್ಳ ವ್ಯಕ್ತಿಗಳ ಕಾಯ್ದೆ:**

ಕಾಯ್ದೆಯಲ್ಲಿ ಬಳಸಲಾಗಿರುವ ಪದಗಳ ಕಾನೂನುಬದ್ಧ ವ್ಯಾಖ್ಯೆಗಳನ್ನು ನೀಡಲಾಗಿದೆ. ನ್ಯೂನತೆ ಎಂದರೆ:

- ಕುರುಡತನ – ದೃಷ್ಟಿಯೇ ಇಲ್ಲದಿರುವುದು
- ದೃಷ್ಟಿದೋಷ ನ್ಯೂನದೃಷ್ಟಿ ಒಂದು ಕಾರ್ಯವನ್ನು ಸೂಕ್ತವಾದ ಸಾಧನದ ಸಹಾಯದಿಂದ ಮಾಡಬಲ್ಲ ವ್ಯಕ್ತಿ.
- ವಾಸಿಮಾಡಲ್ಪಟ್ಟ ಕುಷ್ಠ ನಿವಾರಿಸಲ್ಪಟ್ಟಿಗೆ ಆದರೆ ಕೈಗಳು ಅಥವಾ ಪಾದಗಳಲ್ಲಿ ಸಂವೇದನೆ ಇರುವುದಿಲ್ಲ ಹಾಗೂ ಕಣ್ಣು ಮತ್ತು ಕಣ್ಣಿವೆಗಳಲ್ಲಿ ಸಂವೇದನೆಯ ನಾಶ ಹಾಗೂ ಸ್ನಾಯುಗಳ ಪಕ್ಷವಾತ ಪಾಶ್ವವಾಯು
- ಶ್ರವಣ ನ್ಯೂನತೆ ಸಂಭಾಷಣೆಯ ತರಂಗಗಳ ವ್ಯಾಪ್ತಿಯಲ್ಲಿ ಡೆಸಿಬಲ್ ಅಥವಾ ಹೆಚ್ಚು ಹಾನಿಯಾಗಿರುವುದು
- ಚಲನಾತ್ಮಕ ನ್ಯೂನತೆ – ಕೈಕಾಲುಗಳ ಮೇಲೆ ಗಣನೀಯ ಮಿತಿಗಳಿಗೆ ಕಾರಣವಾಗುವ ಕೀಲುಗಳ ಅಥವಾ ಸ್ನಾಯುಗಳ ನ್ಯೂನತೆ ಹಾಗೂ ಮೆದುಳಿನ ಪಾರ್ಶ್ವವಾಯು.
- ಮಾನಸಿಕ ಕಾಯಿದೆ – ಬುದ್ಧಿ ಮಾಂದ್ಯತೆಯನ್ನು ಹೊರತುಪಡಿಸಿದ ಯಾವುದೇ ಂಥಿಣಶೀಖ ಔಈಖಳಥೇ
- ಬುದ್ಧಿಮಾಂದ್ಯತೆ ವ್ಯಕ್ತಿಯಲ್ಲಿ ತಡೆಯಲ್ಪಟ್ಟ ಅಥವಾ ಅಪೂರ್ಣ ವಿಕಾಸವಿರುವ ಮನಸ್ಸಿನ ಸ್ಥಿತಿ.

ನ್ಯೂನತೆಯುಳ್ಳ ವ್ಯಕ್ತಿಯನ್ನು ಅವನು/ಅವಳು ಶೇ 40% ರಷ್ಟು ನ್ಯೂನತೆಯಿಂದ ನರಳುತ್ತಿದ್ದಾರೆಂಬುದಾಗಿ ಅರ್ಹ ವೈದ್ಯಕೀಯ ಅಧಿಕಾರಿಯಿಂದ ಪ್ರಮಾಣೀಕರಿಸುವುದು ಅಗತ್ಯ.

ನ್ಯೂನತೆಗಳನ್ನು ತಡೆಗಟ್ಟುವುದು ಮತ್ತು ಆರಂಭಿಕ ಹಂತದ ಪತ್ತೆ ಹಚ್ಚುವಿಕೆ.

ಸೂಕ್ತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಆರ್ಥಿಕ ಸಾಮರ್ಥ್ಯ ಹಾಗೂ ವಿಕಾಸಗಳ ಮಿತಿಯೊಳಗೆ, ನ್ಯೂನತೆಗಳ ಉಂಟಾಗದಂತೆ ತಡೆಯಲು, ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

ಎ) ನ್ಯೂನತೆಗಳು ಉಂಟಾಗಲು ಕಾರಣಕ್ಕೆ ಸಂಬಂಧಿಸಿದಂತೆ ಸರ್ವೇಕ್ಷಣೆಗಳು, ವಿಚಾರಣೆಗಳು, ಮತ್ತು ಸಂಶೋಧನೆಯನ್ನು ಕೈಗೊಳ್ಳುವುದು ಅಥವಾ ಕೈಗೊಳ್ಳುವಂತೆ ಮಾಡುವುದು:

ಬಿ) ನ್ಯೂನತೆಗಳನ್ನು ತಡೆಗಟ್ಟುವ ವಿವಿಧ ವಿಧಾನಗಳನ್ನು ಪ್ರೋತ್ಸಾಹಿಸುವುದು:

ಸಿ) ಹಾನಿ/ಅಪಾಯ ಸಂಭವಿಸಬಹುದಾದ ಮಕ್ಕಳನ್ನು ಗುರುತಿಸುವ ಉದ್ದೇಶದಿಂದ ಕನಿಷ್ಠ ವರ್ಷಕ್ಕೊಮ್ಮೆಯಾದರೂ ಎಲ್ಲ ಮಕ್ಕಳ ತಪಾಸಣೆ ನಡೆಸುವುದು.

ಡಿ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿರುವ ಸಿಬ್ಬಂದಿ ವರ್ಗಕ್ಕೆ ತರಬೇತಿ ಅನುಕೂಲತೆಗ ಳನ್ನು ಒದಗಿಸುವುದು

ಇ) ಜಾಗೃತಿ ಮೂಡಿಸುವ ಪ್ರಚಾರಗಳನ್ನು ಪ್ರಾಯೋಜಿಸುವುದು ಅಥವಾ ಪ್ರಾಯೋಜಿಸುವಂತೆ ಮಾಡುವುದು ಹಾಗೂ ಸಾಮಾನ್ಯ ನೈರ್ಮಲ್ಯ, ಆರೋಗ್ಯ ಮತ್ತು ಸ್ವಚ್ಛತೆಗಳನ್ನು ಕುರಿತು ಮಾಹಿತಿ ಪ್ರಚಾರ ಮಾಡುವುದು ಅಥವಾ ಮಾಡುವಂತೆ ಸಹಕರಿಸುವುದು.

ಎಫ್) ಜನನ ಪೂರ್ವ, ಪ್ರಸವೋತ್ತರ ಹಾಗೂ ಜನನಾನಂತರ ತಾಯಿ ಮತ್ತು ಮಗುವಿನ ಆರೈಕೆ (ಲಕ್ಷ್ಯ)ಗೆ ಕ್ರಮ ಕೈಗೊಳ್ಳುವುದು.

ಜಿ) ಪೂರ್ವ ಪ್ರಾಥಮಿಕ ಶಾಲೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಗ್ರಾಮ ಮಟ್ಟದ ಕಾರ್ಯಕರ್ತರು ಮತ್ತು ಅಂಗನವಾಡಿ ಕಾರ್ಯಕರ್ತರ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ನೀಡಿ

ಎಚ್) ನ್ಯೂನತೆಗಳಿಗೆ ಕಾರಣಗಳು ಮತ್ತು ಅಳವಡಿಸಬೇಕಾದ ಕ್ರಮ ಬಗ್ಗೆ ದೂರ ದ ರ್ಶನ, ರೇಡಿಯೋ ಮತ್ತು ಇತರ ಸಮೂಹ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಉಂಟುಮಾಡುವುದು

ಶಿಕ್ಷಣ

ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು ಪ್ರತಿ ಮಗುವೂ 18 ವರ್ಷ ವಯಸ್ಸಿನವರೆಗೆ ಉಚಿತ ಮತ್ತು ತಕ್ಕಷ್ಟು ಶಿಕ್ಷಣದ ಅವಕಾಶ ಪಡೆಯುವಂತೆ ಖಾತ್ರಿ ಪಡಿಸಬೇಕು.

ಉದ್ಯೋಗ

ಸರ್ಕಾರವು ನ್ಯೂನತೆಯುಳ್ಳ ವ್ಯಕ್ತಿಗಳಿಗೆ ಮೀಸಲಾಗಿಡಬಹುದಾದ ಹುದ್ದೆಗಳನ್ನು ಗುರುತಿಸಬೇಕು. ಈ ಮೀಸಲಾತಿಗಳು ಶೇ.3 ಕ್ಕಿಂತ ಕಡಿಮೆ ಇರಬಾರದು, ಇದರಲ್ಲಿ ಶೇ.1 ರಷ್ಟನ್ನು ಈ ಕೆಳಗಿನ ಪ್ರತಿ ನ್ಯೂನತೆಗಳಿಗಾಗಿ ಮೀಸಲಿಡ ಬೇಕು.

1. ಅಂಧತ್ವ ಅಥವಾ ದೃಷ್ಟಿ ನ್ಯೂನತೆ
2. ಶ್ರವಣ ಮಾಂಧ್ಯತೆ
3. ಚಲನಾತ್ಮಕ ನ್ಯೂನತೆ ಅಥವಾ ಮೆದುಳಿನ ಪಾರ್ಶ್ವವಾಯು

ಸಕಾರಾತ್ಮಕ ಕ್ರಮ

ಸರ್ಕಾರವು ನ್ಯೂನತೆಗಳುಳ್ಳ ವ್ಯಕ್ತಿಗಳಿಗೆ ಉಪಕರಣಗಳನ್ನೂ ವಸ್ತುಗಳನ್ನು ಒದಗಿಸಬೇಕು ಮತ್ತು ಇಂತಹ ವ್ಯಕ್ತಿಗಳಿಗೆ ಮನೆ, ವ್ಯವಹಾರ, ವಿಶೇಷ ಮನರಂಜನಾ ಕೇಂದ್ರಗಳು, ಸಂಶೋಧನಾ ಕೇಂದ್ರಗಳು ಮತ್ತು ನ್ಯೂನತೆಯುಳ್ಳ ವಾಣಿಜ್ಯೋದ್ಯಮಿಗಳು ಕಾರ್ಖಾನೆ ನಿರ್ಮಿಸಲು ರಿಯಾಯ್ತಿ ದರದಲ್ಲಿ ಹಂಚಿಕೆ ಮಾಡಲು ಭೂಮಿ ಒದಗಿಸಬೇಕು.

ತಾರತಮ್ಯ ಮಾಡದಿರುವುದು.

ಸರ್ಕಾರಿ ಸಾರಿಗೆಯು ನ್ಯೂನತೆಗಳುಳ್ಳ ವ್ಯಕ್ತಿಗಳಿಗೆ ಗಾಲಿ ಕುರ್ಚಿ ಬಳಸವವರೂ ಸೇರಿ ಸುಲಭವಾಗಿ ಅವಕಾಶ ಪಡೆಯುವಂತೆ ತನ್ನ ಸೌಲಭ್ಯಗಳನ್ನು ಹೊಂದಾಣಿಕೆ ಮಾಡಲು ಕ್ರಮ ಕೈಗೊಳ್ಳಬೇಕು.

ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ತಮ್ಮ ಸಾಮರ್ಥ್ಯದ ವ್ಯಾಪ್ತಿಯಲ್ಲಿ ಕೆಂಪು ದೀಪುಗಳ ಜೊತೆ ಶ್ರವ್ಯ ಸಂಕೇತಗಳನ್ನು, ಗಾಲಿ ಕುರ್ಚಿ ಬಳಸುವವರಿಗೆ ಅನುಕೂಲವಾಗುವಂತೆ ರಸ್ತೆ ದಾಟುವ ನಿರ್ಮಾಣಗಳನ್ನು ವಿನ್ಯಾಸಗೊಳಿಸಿ ಅಂಧರಿಗಾಗಿ ಝೀಬ್ರಾಕ್ರಾಸಿಂಗ್‌ನಲ್ಲಿ ಕೆತ್ತಲ್ಪಟ್ಟ ವ್ಯವಸ್ಥೆಯನ್ನು ಒದಗಿಸಬೇಕು. ನ್ಯೂನತೆಗಳುಳ್ಳ ವ್ಯಕ್ತಿಗಳಿಗಾಗಿ ಸೂಕ್ತ ಸ್ಥಳಗಳಲ್ಲಿ ಎಚ್ಚರಿಕೆಯ ಸಂಕೇತಗಳನ್ನು ಒದಗಿಸಬೇಕು. ಕಟ್ಟಡಗಳು ಮತ್ತು ಶೌಚಾಲಯಗಳನ್ನು ನಿರ್ಮಿಸುವಾಗ ಗಾಲಿ ಕುರ್ಚಿಯಲ್ಲಿ ಬರುವವರಿಗೆ ಅನುಕೂಲವಾಗುವಂತೆ ಇಳಿ ಜಾರುಗಳನ್ನು ಮತ್ತಿತರ ಅನುಕೂಲಗಳನ್ನು ಒದಗಿಸಬೇಕು ಸೇವೆಯಲ್ಲಿರುವಾಗ ನ್ಯೂನತೆಗೊಳಗಾದರೆಂದು ಯಾವುದೇ ಕಾರ್ಮಿಕರನ್ನು ಉದ್ಯೋಗದಾತರು ವಜಾ ಮಾಡುವಂತಿಲ್ಲ. ಯಾವುದೇ ಉದ್ಯೋಗದಾತರು ನ್ಯೂನತೆಯ ಆಧಾರದ ಮೇಲೆ ಒಬ್ಬ ಉದ್ಯೋಗಿಗೆ ಮುಂಬಡ್ತಿ ನಿರಾಕರಿಸುವಂತಿಲ್ಲ ಆದರೆ ಕೆಲಸದ ವಿಧದ ಆಧಾರದ ಮೇಲೆ ಅಪಾಯವಾಗಿ ತಪ್ಪಿಸಲು ಅವಕಾಶ ಒದಗಿಸಬೇಕು.

ಸಂಶೋಧನೆ ಮತ್ತು ಮಾನವ ಶಕ್ತಿ ಬೆಳವಣಿಗೆ

ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆಗಳು ನ್ಯೂನತೆಯನ್ನು ತಡೆಗಟ್ಟಲು, ನ್ಯೂನತೆಯುಳ್ಳವರಿಗೆ ಪುನರ್ವಸತಿ ಕಲ್ಪಿಸಲು, ಸಹಾಯಕ ಸಾಧನಗಳನ್ನು ರೂಪಿಸಲು, ಊನಶಕ್ತರಿಗಾಗಿ ಉದ್ಯೋಗಗಳನ್ನು ಗುರುತಿಸುವುದು ಮತ್ತು ಕಾರ್ಖಾನೆ ಹಾಗೂ ಕಛೇರಿಗಳಲ್ಲಿ ನ್ಯೂನತಾ ಪೂರ್ವ ಸಂರಚನಾ ವೈಶಿಷ್ಟ್ಯಗಳನ್ನು ರೂಪಿಸುವುದಕ್ಕಾಗಿ ಸಂಶೋಧನೆಯನ್ನು ಪ್ರೋತ್ಸಾಹಿಸಿ ಪ್ರಾಯೋಜಿಸಬೇಕು.

ತೀವ್ರರೂಪದ ನ್ಯೂನತೆಗಳಿರುವವರಿಗಾಗಿ ಸಂಸ್ಥೆಗಳು:

ಒಂದು ಅಥವಾ ಹೆಚ್ಚು ನ್ಯೂನತೆಗಳನ್ನು ಶೇ 80 ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹೊಂದಿರುವವರನ್ನು ತೀವ್ರರೂಪದ ನ್ಯೂನತೆಯುಳ್ಳ ವ್ಯಕ್ತಿಗಳೆಂದು ಪರಿಗಣಿಸಲಾಗುತ್ತದೆ. ಇಂತಹವರಿಗಾಗಿ ಸರ್ಕಾರವು ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸಬೇಕು. ಸರ್ಕಾರಿ ಮಾನದಂಡಗಳನ್ನು ಪೂರೈಸುವ ಖಾಸಗಿ ಸಂಸ್ಥೆಗಳಿದ್ದರೆ ಅವುಗಳನ್ನು ತೀವ್ರರೂಪದ ನ್ಯೂನತೆಗಳುಳ್ಳವರಿಗೆ ಯೋಗ್ಯವಾದ ಸಂಸ್ಥೆಗಳೆಂದು ಮಾನ್ಯ ಮಾಡಬೇಕು.

ನ್ಯೂನತೆಗಳುಳ್ಳ ವ್ಯಕ್ತಿಗಳಿಗಾಗಿ ಮುಖ್ಯ ಆಯುಕ್ತರು ಮತ್ತು ಆಯುಕ್ತರುಗಳು.

ಕೇಂದ್ರ ಸರ್ಕಾರವು ಈ ಕಾಯ್ದೆಯನ್ನು ಅನುಷ್ಠಾನಗೊಳಿಸುವುದಕ್ಕಾಗಿ ಒಬ್ಬ ಮುಖ್ಯ ಆಯುಕ್ತರನ್ನು ನೇಮಿಸಿಬೇಕು ಮುಖ್ಯ ಆಯುಕ್ತರು ಉಳಿದ ಆಯುಕ್ತರುಗಳೊಂದಿಗೆ ಕೆಲಸಗಳನ್ನು ಸಮನ್ವಯಗೊಳಿಸಿ ನ್ಯೂನತೆಯುಳ್ಳ ವ್ಯಕ್ತಿಗಳಿಗಾಗಿ ಕೇಂದ್ರ ಸರ್ಕಾರ ನೀಡಿದ ಅನುದಾನದ ಬಳಕೆಯ ಮೇಲುಸ್ತುವಾರಿ ಮಾಡಿ ನ್ಯೂನತೆಯುಳ್ಳ ವ್ಯಕ್ತಿಗಳಿಗೆ ನೀಡಲ್ಪಟ್ಟ ಹಕ್ಕುಗಳು ಮತ್ತು ಸೌಲಭ್ಯಗಳ ಸಂರಕ್ಷಣೆಯನ್ನು ಖಾತ್ರಿ ಸರಿಪಡಿಸಿ ಹಾಗೂ ಈ ಕಾಯ್ದೆಯ ಅನುಷ್ಠಾನದ ವಾರ್ಷಿಕ ವರದಿಯನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಬೇಕು.

### 8.4.3 2011ರ' ನ್ಯೂನತೆಯುಳ್ಳ ವ್ಯಕ್ತಿಗಳ ಹಕ್ಕುಗಳ ಮಸೂದೆ

ಪ್ರಸ್ತಾಪಿಸಲ್ಪಟ್ಟಿರುವ ಈ ಮಸೂದೆಯು ನ್ಯೂನತೆಗಳುಳ್ಳ ವ್ಯಕ್ತಿಗಳ ಸಮಾನತೆಯನ್ನು ಮಾನ್ಯ ಮಾಡುತ್ತದೆ ಮತ್ತು ಇದನ್ನ ಎನ್‌ಎಎಲ್‌ಎಸ್‌ಎಆರ್ ಕಾನೂನು ವಿಶ್ವವಿದ್ಯಾಲಯದ, ನ್ಯೂನತೆಗಳ ಅಧ್ಯಯನ ಕೇಂದ್ರವು ಸಿದ್ಧಪಡಿಸಿದೆ. 1995 ರ ನ್ಯೂನತೆಗಳುಳ್ಳ ವ್ಯಕ್ತಿಗಳ ಕಾಯ್ದೆಯು ದೋಷ ಆಧಾರಿತ ನ್ಯೂನತೆಯ ಸಮಗ್ರ ವ್ಯಾಖೆಯನ್ನು ಒದಗಿಸಿದೆ. ಪರಿಣಾಮವಾಗಿ ಕಾಯ್ದೆಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿಲ್ಲದ ದೋಷಗಳಿರುವ ವ್ಯಕ್ತಿಗಳಿಗೆ ಕಾಯ್ದೆಯಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿಲ್ಲದ ದೋಷಗಳೀರುವ ವ್ಯಕ್ತಿಗಳಿಗೆ ಕಾಯ್ದೆಯಲ್ಲಿ ಮಾನ್ಯ ಮಾಡಲಾದ ಹಕ್ಕುಗಳು ಮತ್ತು ಅರ್ಹತೆಗಳನ್ನು ನಿರಾಕರಿಸಲಾಗುತ್ತಿದೆ.

ಪ್ರಸ್ತಾಪಿತ ಶಾಸನದ ಪ್ರಮುಖ ವೈಶಿಷ್ಟ್ಯಗಳು ಹೀಗಿವೆ.

- ನ್ಯೂನತೆಗಳುಳ್ಳ ಎಲ್ಲಾ ವ್ಯಕ್ತಿಗಳಿಗೂ ವೈಶಿಷ್ಟ್ಯಗಳಿಗೂ ಸಮಾನತೆ ಮತ್ತು ತಾರತಮ್ಯವಿಲ್ಲದಿರುವಿಕೆಯನ್ನು ಭರವಸೆ ನೀಡುತ್ತದೆ (2011 ರ ನ್ಯೂನತೆಗಳುಳ್ಳ ವ್ಯಕ್ತಿಗಳ ಹಕ್ಕುಗಳ ಮಸೂದೆ)
- ನ್ಯೂನತೆಗಳುಳ್ಳ ಎಲ್ಲ ವ್ಯಕ್ತಿಗಳ ಕಾನೂನು ಸಾಮರ್ಥ್ಯವನ್ನು ಮಾನ್ಯ ಮಾಡಿ ಇಂತಹ ಕಾನೂನು ಸಾಮರ್ಥ್ಯವನ್ನು ಬಳಕೆ ಮಡಲು ಬೇಕಾದಲ್ಲಿ ಬೆಂಬಲ ನೀಡುವ ಪ್ರಾವಧಾನವಿದೆ.
- ನ್ಯೂನತೆಗಳುಳ್ಳ ಮಹಿಳೆಯರು ಎದುರಿಸುವ ಬಹುಮುಖ ಹಾಗು ತೀವ್ರವಾದ ತಾರತಮ್ಯವನ್ನು ಗುರುತಿಸಿದೆ ಮತ್ತು ಹಕ್ಕುಗಳಲ್ಲಿ ಹಾಗೂ ಕಾರ್ಯಕ್ರಮಾತ್ಮಕ ಮಧ್ಯವರ್ತನೆಗಳಲ್ಲಿ ಲಿಂಗತ್ವ ಆಧಾರಿತ ತಿಳುವಳಿಕೆಯನ್ನು ಅಳವಡಿಸಿದೆ.
- ನ್ಯೂನತೆಯುಳ್ಳ ಮಕ್ಕಳ ವಿಶೇಷ ದುರ್ಬಲತೆಗಳನ್ನು ಗುರುತಿಸುವಿಕೆ ಮತ್ತು ಇತರ ಮಕ್ಕಳಂತೆಯೇ ಇವರೊಂದಿಗೂ ಸಮಾನವಾಗಿ ವ್ಯವಹರಿಸುವುದನ್ನು ಖಚಿತಪಡಿಸುವುದು,
- ಹಿರಿವಯಸ್ಸಿನ, ತಮ್ಮ ಮನೆಗಳಿಗೆ ಸೀಮಿತಗೊಂಡಿರುವ ನ್ಯೂನತೆಗಳುಳ್ಳ ವ್ಯಕ್ತಿಗಳಿಗೆ ಸ್ವತಃ ಮುಂದಾಗಿ ಮಧ್ಯವರ್ತನೆಗಳನ್ನೇ ಕೈಗೊಳ್ಳುವುದನ್ನು ಆದೇಶಿಸುತ್ತದೆ.
- ನ್ಯೂನತೆಗಳುಳ್ಳ ವ್ಯಕ್ತಿಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ನ್ಯೂನತೆಯ ನೀತಿ ಹಾಗೂ ಕಾನೂನುನ್ನು ರೂಪಿಸಲು ಸಹಾಯಕವಾಗುವ ರಾಷ್ಟ್ರೀಯ ಮತ್ತು ರಾಜ್ಯ ನ್ಯೂನತೆಯ ಹಕ್ಕುಗಳ ಪ್ರಾಧಿಕಾರಗಳನ್ನು ಸ್ಥಾಪಿಸುವುದು, ನ್ಯೂನತೆಗಳುಳ್ಳ ವ್ಯಕ್ತಿಗಳ ಬಗ್ಗೆ ರೂಢಿಯಲ್ಲಿರುವ ಸಂರಚನಾತ್ಮಕ ತಾರತಮ್ಯವನ್ನುಕೆಡವುವುದು ಮತ್ತು ಈಕಾಯ್ದೆಯಲ್ಲಿ ಭರವಸೆ ನೀಡಲಾಗಿರುವ ಎಲ್ಲಾ ಹಕ್ಕುಗಳ ರಕ್ಷಣೆ ಪ್ರೋತ್ಸಾಹ ಮತ್ತು ಆನಂದಗಳಗಾಗಿ ಈ ಕಾಯ್ದೆಯಡಿ ಜಾರಿಗೊಳಿಸಲಾಗಿರುವ ನಿಯಮಗಳ ಪಾಲನೆಯನ್ನು ಕಡ್ಡಾಯಗೊಳಿಸುವುದು
- ತಪ್ಪು ಕಾರ್ಯಗಳು ಮತ್ತು ಲೋಪಗಳ ವಿರುದ್ಧ ನಾಗರೀಕ ಮತ್ತು ಅಪರಾಧ ಅನ್ವಯ ನಿರ್ಬಂಧಗಳನ್ನು ನಿರ್ಧಿಷ್ಟಪಡಿಸುವುದು.

**8.5 ಸಾರಾಂಶಗೊಳಿಸೋಣ**

ಅನೇಕರಿಗೆ ತಿಳಿದಿರುವಂತೆ ಪ್ರತಿ ಮಗುವ ಹೇರಳವಾದ ಅವಶ್ಯಕತೆಗಳೊಂದಿಗೆ ಒಂದು ಕುಟುಂಬವನ್ನು ಪ್ರವೇಶಿಸುತ್ತದೆ. ಪ್ರೀತಿ ಮತ್ತು ಆರೈಕೆ, ಪೋಷನೆ ಆಹಾರ, ಉಡುಪು ಮತ್ತು ಶಿಕ್ಷಣಗಳನ್ನೊಳಗೊಂಡಂತೆ ಮಗುವಿನ ಹಲವು ಅಗತ್ಯಗಳಿರುತ್ತವೆ.

ವಿಶೇಷ ಅವರ್ಶಯಕತೆಗಳುಳ್ಳ ಮಗುವು ಮೂಲತಃ ತನ್ನ ವಿಶಿಷ್ಟ ವೈದ್ಯಕೀ ಅಥವಾ ವಿಕಾಸಾತ್ಮಕ ಸಮಸ್ಯೆಗಳಿಂದಾಗಿ ತನ್ನ ಸಮ ವಯಸ್ಕರಿಗಿಂತ ಹೆಚ್ಚುವರಿಯಾದ ಅವಶ್ಯಕತೆಗಳಿರುತ್ತವೆ. ವಿಶೇಷ ಅವಶ್ಯಕತೆಗಳು ಸೌಮ್ಯದಿಂದ ತೀವ್ರದ ವರೆಗೆ ವ್ಯಾಪಿಸಿರಬಹುದು ಬಹುತೇಕ ವಿಶೇಷ ಅಗತ್ಯತೆಗಳು ಚಿಕಿತ್ಸೆ ಅಥವಾ ವಿಶೇಷ ಕಾರ್ಯಕ್ರಮಗಳು ಮತ್ತು ಸೇವೆಗಳಿಗೆ ಉತ್ತಮವಾಗಿ ಸ್ಪಂದಿಸುತ್ತಾರೆ.

ಮಗುವಿನ ಅಗತ್ಯತೆಗಳನ್ನು ಸಾಧಿಸುವುದರಲ್ಲಿ ಶಿಕ್ಷಕರು ಮಹತ್ವದ ಪಾತ್ರ ವಹಿಸುತ್ತಾರೆ. 1995 ರ ನ್ಯೂನತೆ (ಅಂಗವಿಕಲತೆಯ) ಕಾಯ್ದೆ ಮತ್ತು ಗಓಅಖಕಆ ಹಕ್ಕುಗಳು ಶಿಕ್ಷಕರ ಪೋಷರಕರಿಗೆ ಮತ್ತಿತರ ಭಾಗೀದರರಿಗೆ ವಿವರಿಸಲು ಬಹುಮುಖ್ಯ ಅಂಶಗಳಾಗಿವೆ. ವಿಶೇಷ ಅಗತ್ಯತೆಗಳುಳ್ಳ ಮಕ್ಕಳೊಂದಿಗೆ ವ್ಯವಹರಿಸುವಲ್ಲಿ ಶಿಕ್ಷಕರ ಪಾತ್ರ ನಿರ್ಣಾಯಕವಾಗಿರುತ್ತದೆ, ಆಕೆಯು ಪ್ರತಿ ನ್ಯೂನತೆಯ ಅರ್ಥಗಳನ್ನು ತಿಳಿಯಬೇಕು, ಮಗುವನ್ನು ಗುರುತಿಸಿ ಆ ಮಗು ನ್ಯೂನತೆಯ ಯಾವ ಗುಂಪಿಗೆ ಸೇರಿದೆ ಎಂಬುದಾಗಿ ವರ್ಗೀಕರಿಸಬೇಕು, ಅನಂತರ ಪರೀಕ್ಷಣಕ್ಕಾಗಿ ವೃತ್ತಿಪರರ ಬಳಿ ಕಳುಹಿಸಿ, ಪರೀಕ್ಷಣ ಮುಗಿದ ನಂತರ ತಜ್ಞರು ಪೋಷಕರೊಂದಿಗೆ ಸೇರಿ ಒಟ್ಟಾಗಿ ಮುಂದಿನ ಮಧ್ಯವರ್ತನೆಯನ್ನು ಯೋಜಿಸಬಹುದು.

**8.6 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು**

**ಪ್ರಗತಿ ಪರಿಶೀಲಿಸಿ 1**

1. ಕಾಯುತ್ತಿರುವ ಮಕ್ಕಳು
2. 20/200
3. ಭಾಷೆ
4. ದೃಷ್ಟಿದೋಷ

**ನಿಮ್ಮ ಪ್ರಗತಿ ಪರಿಶೀಲಿಸಿ – 2**

1. UNCRPD - Limited National Convention of persons with Disability
2. PWD Act : Persons with Disability Act
3. Central – Defence
4. Concurrent – Health
5. State – Disability

**8.7 ಪರಮರ್ಶನ ಗ್ರಂಥಗಳು**

RaoIndumathi : A Text book oninclusive Education (2003) CBR Network Bangalore

RaoIndumathi : ABC of CBR (2010), CBR Network, Bangalore

http://rehabcouncil.nic.in

http://trace.wise.edu

http://en.wikipedia.org

**ಅನುಬಂಧ–1**

**ಪೂರ್ವಭಾವಿ ಪರೀಕ್ಷೆಗೆ ಶಿಕ್ಷಕರು ಈ ಕೆಳಗಿನ ಪ್ರಶ್ನಾವಳಿಗಳನ್ನು ಬಳಸಬಹುದು.**

**ನಮೂನೆ 4 6 – (4 ವರ್ಷದ ವಯೋ ಗುಂಪಿನಲ್ಲಿ**

| ಗ್ರಾಮದ ಹೆಸರು | ಮನೆ ಸಂಖ್ಯೆ | ಮಕ್ಕಳ ಸಂಖ್ಯೆ | ಟಿಪ್ಪಣಿ |
|---|---|---|---|
| ಎ. ಮಗುವಿನ ಹೆಸರು<br>ಬಿ. ವಯಸ್ಸು<br>ಸಿ. ತಂದೆಯ ಹೆಸರು<br>ಡಿ. ತಾಯಿಯ ಹೆಸರು | | | |

ಕೆಳಗಿನ ಪ್ರಶ್ನೆಗಳಿಗೆ ಸರಿಯುತ್ತರಕ್ಕೆ (√) ಎಂದು ಗುರುತಿಸಿ

| | |
|---|---|
| 1. ಹೆರಿಗೆ ನಿಗದಿತ ದಿನಾಂಕಕ್ಕಿಂತ ಮೊದಲೆ ಆಯಿತೆ? | ಹೌದು ಇಲ್ಲ ಗೊತ್ತಿಲ್ಲ |
| 2. ಮಾತುಕಲಿಕೆ ವಿಳಂಬವಾಗಿದೆಯೆ | ಹೌದು ಇಲ್ಲ ಗೊತ್ತಿಲ್ಲ |
| 3. ಅವನ / ಅವಳ ವಯಸ್ಸಿನ ಇತರೆ ಮಕ್ಕಳಿಗೆ ಹೋಲಿಸಿದರೆ ಈ ಕೆಳಗಿನ ಅಂಶಗಳಲ್ಲಿ ವಿಳಂಬವಾಗಿದೆಯೆ? | |
| ಕುಳಿತುಕೊಳ್ಳುವುದು | ಹೌದು ಇಲ್ಲ ಗೊತ್ತಿಲ್ಲ |
| ನಿಲ್ಲುವುದು | ಹೌದು ಇಲ್ಲ ಗೊತ್ತಿಲ್ಲ |
| ನಡೆಯುವುದು | ಹೌದು ಇಲ್ಲ ಗೊತ್ತಿಲ್ಲ |
| ಮಾತನಾಡುವುದು | ಹೌದು ಇಲ್ಲ ಗೊತ್ತಿಲ್ಲ |
| 4. ಮಗು ಚೆನ್ನಾಗಿ ಓಡುತ್ತದೆಯೆ? | ಹೌದು ಇಲ್ಲ ಗೊತ್ತಿಲ್ಲ |
| 5. ಮಗು ಮಾತಿನ ಬದಲು ಸಂಜ್ಞೆಗಳನ್ನು ಬಳಸುವುದೆ | ಹೌದು ಇಲ್ಲ ಗೊತ್ತಿಲ್ಲ |
| 6. ಪಾಠಗಳನ್ನು ಓದಲು ಮತ್ತು ದೈನಂದಿನ ಚಟುವಟಿಕೆಗಳನ್ನು ಮಾಡಲು ಕಣ್ಣುಗಳನ್ನು ಬಳಸಲು ಕಷ್ಟವೆ? | ಹೌದು ಇಲ್ಲ ಗೊತ್ತಿಲ್ಲ<br>ಹೌದು ಇಲ್ಲ ಗೊತ್ತಿಲ್ಲ |
| 7. ಮಗುವಿನೊಂದಿಗೆ ಮಾತನಾಡುವಾಗ ಅವನನ್ನು / ಅವಳನ್ನು ಗ್ರಹಿಸುವುದು ಕಠಿಣವೇ | |
| 8. ಮಗುವಿಗೆ ಆಲಿಸುವುದರಲ್ಲಿ ಕಷ್ಟವಿದೆಯೆ | ಹೌದು ಇಲ್ಲ ಗೊತ್ತಿಲ್ಲ |
| 9. ಅವಳ / ಅವಣ ಸಮವಯಸ್ಕರಿಗೆ ಹೋಲಿಸಿದರೆ ಮಗುವಿಗೆ ಕಲಿಯಲು ಗ್ರಹಿಸಲು, ಸ್ಮರಿಸಲು ಮತ್ತಿತರ ಚಟುವಟಿಕೆಗಳು ಕಷ್ಟವೆ? | ಹೌದು ಇಲ್ಲ ಗೊತ್ತಿಲ್ಲ |
| 10. ಮಗು ಇತರರೊಂದಿಗೆ ಚೆನ್ನಾಗಿ ಬೆರೆಯುವುದೆ? | ಹೌದು ಇಲ್ಲ ಗೊತ್ತಿಲ್ಲ |
| 11. ಮಗುವಿನಲ್ಲಿ ಯಾವುದಾದರೂ ದೈಹಿಕ ನ್ಯೂನತೆ ಇದೆಯೆ | |
| 12. ನಿಮ್ಮ ಮಗುವಿನ ಮಾತನ್ನು ಅರ್ಥಮಾಡಿಕೊಳ್ಳುವುದು ಇತರರಿಗೆ ಕಷ್ಟವೆ | ಹೌದು ಇಲ್ಲ ಗೊತ್ತಿಲ್ಲ<br>ಹೌದು ಇಲ್ಲ ಗೊತ್ತಿಲ್ಲ |
| 13. ನಿಮ್ಮ ಮಗುವಿನ ಮಾತನ್ನು ಕುಟುಂಬದವರು ಹೊರತಾಗಿ ಹೊರಗಿನವರಿಗೆ ಗ್ರಹಿಸುವುದ ಕಷ್ಟವೆ | ಹೌದು ಇಲ್ಲ ಗೊತ್ತಿಲ್ಲ |
| 14. ಮಗು ಮಾತನಾಡುವುದೆ? ( ಈ ನಮೂನೆಯನ್ನು ತುಂಬವವರಿಗೆ) | ಹೌದು ಇಲ್ಲ ಗೊತ್ತಿಲ್ಲ |
| 15. ಅವರು ಮಾಹಿತಿ ಕೊಡಲು ನಿರಾಕರಿಸುವರೆ? | |
| 16. ನಿಮಗೆ ಮಾಹಿತಿ ಕೊಡುವುದು ವ್ಯರ್ಥ ಎಂದು ಕುಟುಂಬದ | ಹೌದು ಇಲ್ಲ ಗೊತ್ತಿಲ್ಲ |

| | |
|---|---|
| ಸದಸ್ಯರು ಭಾವಿಸುವರೆ? | ಹೌದು ಇಲ್ಲ ಗೊತ್ತಿಲ್ಲ<br><br>ಹೌದು ಇಲ್ಲ ಗೊತ್ತಿಲ್ಲ<br>ಹೌದು ಇಲ್ಲ ಗೊತ್ತಿಲ್ಲ |

ನೆನಪಿಡಿ: ಸಂಕ್ಷಿಪ್ತ ದಾಖಲೆಗಳಲ್ಲಿ ಕೇವಲ ಒಂದು (√) ಇದ್ದರೂ ಸಹ ವಿವರವಾದ ಪರೀಕ್ಷಾ ನಮೂನೆಯನ್ನು ತುಂಬಲೇಬೇಕು.

ಮಕ್ಕಳ ದೋಷಗಳನ್ನು ಗುರುತಿಸಲು ವಿವರವಾದ ನಮೂನೆ.

**6–14** ವರ್ಷ ವಯೋಮಿತಿಯ ಗುಂಪು

ಗ್ರಾಮದ ಹೆಸರು : ಮನೆ ಸಂಖ್ಯೆ : ಮಕ್ಕಳ ಸಂಖ್ಯೆ:

ಎ) ಮಗುವಿನ ಹೆಸರು

ಬಿ) ವಯಸ್ಸು

ಸಿ) ತಂದೆಯ ಹೆಸರು

ಡಿ) ತಾಯಿಯ ಹೆಸರು

| | |
|---|---|
| ಕಷ್ಟವಿದೆಯೇ? | |
| 2. ಮಗು ಬೆಂಬಲವಿಲ್ಲದೆ ಕುಳಿತುಕೊಳ್ಳುವುದೇ? | ಹೌದು ಇಲ್ಲ ಗೊತ್ತಿಲ್ಲ |
| 3. ಮಗು ದಿನನಿತ್ಯದ ಚಟುವಟಿಕೆಗಳಾದ ಸ್ನಾನ, ಆಹಾರ ಸೇವನೆ ಮುಂತಾವದುವನ್ನು ತಾನೇ ಮಾಡಿಕೊಳ್ಳುವುದೆ | ಹೌದು ಇಲ್ಲ ಗೊತ್ತಿಲ್ಲ |
| 4. ಮಗು ಮಾತುಗಳನ್ನು ಸೂಚನೆಗಳನ್ನು ಗ್ರಹಿಸುವುದೆ | ಹೌದು ಇಲ್ಲ ಗೊತ್ತಿಲ್ಲ |
| 5. ನೋಡುವುದರಲ್ಲಿ ಸಮಸ್ಯೆ ಇದೆಯೆ? | |
| 6. ಮಗುವಿಗೆ 10 ಅಡಿ ದೂರದಿಂದ ಬೆರಳುಗಳನ್ನು ಎಣಿಸಲು ಸಾಧ್ಯವೆ? | ಎಣಿಸಲು ಎಣಿಸಲು ಗೊತ್ತಿಲ್ಲ<br>ಸಾಧ್ಯ ಸಾಧ್ಯವಿಲ್ಲ |
| 7. ಮಗು 5 ಅಡಿ ದೂರದಿಂದ ಬೆರಳುಗಳನ್ನು ಎಣಿಸಬಲ್ಲದೆ? | ಸಾಧ್ಯ ಸಾಧ್ಯವಿಲ್ಲ ಗೊತ್ತಿಲ್ಲ |
| 8. ಮಗ್ಗಿಪುಸ್ತಕದಲ್ಲಿ ಅಂಕೆಗಳನ್ನು ಗುರುತಿಸುವುದೆ? | ಗುರುತಿಸುವುದ ಗುರುತಿಸಲಾರದು ಗೊತ್ತಿಲ್ಲ |
| 9. ಕೇಳುವುದಕ್ಕೆ ಸಮಸ್ಯೆ ಇದೆಯೇ | ಹೌದು ಇಲ್ಲ ಗೊತ್ತಿಲ್ಲ |
| 10. 10 ಅಡಿ ದೂರದಿಂದ ಹಿಂದಿನಿಂದ ತನ್ನ ಹೆಸರು ಕರೆದರೆ ಮಗು ಸ್ಪಂದಿಸುವುದೆ? | ಹೌದು ಇಲ್ಲ ಗೊತ್ತಿಲ್ಲ |
| 11. 5ಅಡಿ ದೂರದಿಂದ ಹಿಂದಿನಿಂದ ತನ್ನ ಹೆಸರು ಕರೆದರೆ ಮಗು ಉತ್ತರಿಸುವುದೆ? | ಹೌದು ಇಲ್ಲ ಗೊತ್ತಿಲ್ಲ |
| 12. ಮಗು ಸ್ಪಷ್ಟವಾಗಿ ಮಾತನಾಡುವುದೆ? | ಹೌದು ಇಲ್ಲ ಗೊತ್ತಿಲ್ಲ |
| 13. ಇತರರಿಗೆ ಮಗುವಿನ ಮಾತನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೆ? | |
| 14. ಮಗುವಿಗೆ ಅಪಸ್ಮಾರವಿದೆಯೆ ಹೌದಾದರೆ ಅಪಸ್ಮಾರದ ದಾಳಿ<br>ಎ) ನಿತ್ಯವೂ ಆಗುವುದೆ?<br>ಬಿ) ವಾರಕ್ಕೊಮ್ಮೆ<br>ಸಿ) ತಿಂಗಳಿಗೊಮ್ಮೆ<br>ಡಿ) ಆರು ತಿಂಗಳಿಗೊಮ್ಮೆ<br>ಇ) ಮಗು ಔಷಧಿ ಸೇವಿಸುತ್ತಿದೆಯೆ?<br>ಎಫ್) ಮಗು ವೈದ್ಯರಿಂದ ಪರೀಕ್ಷಿಸಲ್ಪಟ್ಟಿದೆಯೆ? | ಹೌದು ಇಲ್ಲ ಗೊತ್ತಿಲ್ಲ |
| 15. ಸಣ್ಣ ಪುಟ್ಟ ಕೆಲಸಗಳನ್ನು ಮಾಡುವಾಗ ಚೆಲ್ಲುವುದು, ವಸ್ತುಗಳನ್ನು ಬೀಳಿಸುವುದು ಮಾಡುತ್ತದೆಯೆ? | ಹೌದು ಇಲ್ಲ ಗೊತ್ತಿಲ್ಲ |
| 16. ಮೂಗಿನಲ್ಲಿ ಸುರಿಯುತ್ತಿರುವಾಗ ಮಗು ಸುಮ್ಮನಿರುತ್ತದೆಯೆ? | ಹೌದು ಇಲ್ಲ ಗೊತ್ತಿಲ್ಲ |
| 17. ಸಮವಯಸ್ಕ ಮಕ್ಕಳಿಗೆ ಹೋಲಿಸಿದರೆ ಮಗು ಕಡಿಮೆ ಬುದ್ಧಿವಂತವೆನಿಸುವುದೆ | ಹೌದು ಇಲ್ಲ ಗೊತ್ತಿಲ್ಲ |
| 18. ಮಗುತನ್ನ ಚಟುವಟಿಕೆಗಳಲ್ಲಿ ಯಾವಾಗಲೂ ಚುರುಕಿಲ್ಲದಂತೆ ತೋರುವುದೆ? | ಹೌದು ಇಲ್ಲ ಗೊತ್ತಿಲ್ಲ |
| 19. ತನ್ನ ವಯಸ್ಸಿನ ಮಕ್ಕಳಿಗೆ ಹೋಲಿಸಿದರೆ ಮಗುವಿಗೆ ತನ್ನ ಕಾರ್ಯದ ಮೇಲೆ ಏಕಾಗ್ರತೆ ತೋರಲು ಸಮಸ್ಯೆಯೆ? | ಹೌದು ಇಲ್ಲ ಗೊತ್ತಿಲ್ಲ<br>ಹೌದು ಇಲ್ಲ ಗೊತ್ತಿಲ್ಲ |
| 20. ತನ್ನ ವಯಸ್ಸಿನ ಇತರರಿಗೆ ಹೋಲಿಸಿದರೆ ಮಗು ತುಂಟತನ ಮಾಡುವುದೆ? | |
| 21. ಮಗು ತನ್ನ ವಯಸ್ಸಿನವರಿಗೆ ಬದಲಾಗಿ ಚಿಕ್ಕ ವಯಸ್ಸಿನವರೊಂದಿಗೆ ಬೆರೆಯಲು ಇಚ್ಛಿಸುವುದೆ? | ಹೌದು ಇಲ್ಲ ಗೊತ್ತಿಲ್ಲ |
| 22. ಮಗುವಿಗೆ ಬೆಂಕಿ, ನೀರು ಇತ್ಯಾದಿಗಳ ಅಪಾಯ ತಿಳಿದಿದೆಯೆ? | ಹೌದು ಇಲ್ಲ ಗೊತ್ತಿಲ್ಲ |
| 23. ಮಗುವಿಗೆ ತನ್ನ ಹೆಸರು ಹೇಳಲು ಗೊತ್ತೆ? | ಹೌದು ಇಲ್ಲ ಗೊತ್ತಿಲ್ಲ |
| 24. ಮಗುವಿಗೆ ಕಣ್ಣಿನಿಂದ ಸೋರುವ ಸಮಸ್ಯೆ ಇದೆಯೇ? | |
| 25. ಮಗು ತನ್ನ ಕಣ್ಣುಗಳನ್ನು ಸದಾ ಉಜ್ಜುತ್ತಿರುತ್ತದಯೆ? | ಹೌದು ಇಲ್ಲ ಗೊತ್ತಿಲ್ಲ |
| 26. ಓದು, ಬರಹ ಮತ್ತು ನೋಡುವುದರಲ್ಲಿ ತೀವ್ರರೂಪದ ದೃಷ್ಟಿ ಸಮಸ್ಯೆ ಇದೆಯೆ? | ಹೌದು ಇಲ್ಲ ಗೊತ್ತಿಲ್ಲ |
| 27. ಮಗು ಇತರರ ಸಹಾಯವಿಲ್ಲದೆ ತಾನೇ ನಡೆಯುವುದೆ | ಹೌದು ಇಲ್ಲ ಗೊತ್ತಿಲ್ಲ |
| 28. ಶಾಲೆಯಲ್ಲಿ ಹೊಂದಿಕೊಳ್ಳುವಾಯಿತು ಮಾಡಲು ಸಮಸ್ಯೆ ಇದೆಯೆ? | ಹೌದು ಇಲ್ಲ ಗೊತ್ತಿಲ್ಲ |
| 29. ಇತರರಿಗೆ ಹೋಲಿಸಿದರೆ ಓದಿನಲ್ಲಿ / ಆಟದಲ್ಲಿ ಪ್ರಗತಿ ಕಡಿಮೆ ಇದೆಯೇ? | ಹೌದು ಇಲ್ಲ ಗೊತ್ತಿಲ್ಲ |

ಕೆಳಗಿನ ಪ್ರಶ್ನೆಗಳಿಗೆ ಸರಿಯುತ್ತರಕ್ಕೆ (√) ಚಿಹ್ನೆ ನಮೂದಿಸಿ

**8.8 ಘಟಕಾಂತ್ಯದ ಅಭ್ಯಾಸಗಳು**

* 1995ರ ಪಿ.ಡಬ್ಲ್ಯೂ.ಡಿ. ಕಾಯ್ದೆಯಿಂದ ಮುಖ್ಯಾಂಶಗಳನ್ನು ಪಟ್ಟಿ ಮಾಡಿ

* ಎಲ್ಲಾ ದೋಷಗಳನ್ನು ಸಂಭಾವ್ಯ ಕಾರಣಗಳನ್ನು ಪಟ್ಟಿ ಮಾಡಿ

# ಪತ್ಯಭಾಗ 9

# ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ ಶಿಕ್ಷಣ

ವಿನ್ಯಾಸ:


| | |
|---|---|
| 9.0 | ಪ್ರಸ್ತಾವನೆ – ಪರಿಚಯ |
| 9.1 | ಕಲಿಕಾ ಧ್ಯೆಯೋದ್ದೇಶಗಳು |
| 9.2 | ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ ಶೈಕ್ಷಣಿಕ ಸವಾಲುಗಳು |
| 9.2.1 | ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಕಲಿಕಾ ಗುಣಲಕ್ಷಣ |
| 9.2.2 | ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ ಅವಶ್ಯಕತೆಗಳು ಮತ್ತು ಶಿಕ್ಷಣ ಪದ್ಧತಿ |
| 9.3 | ಪಠ್ಯಾವಸ್ತು ಹೊಂದಾಣಿಕೆ. |
| 9.3.1 | ಪಠ್ಯಾವಸ್ತುವಿನ ಹೊಂದಾಣಿಕೆಯ ಅವಶ್ಯಕತೆ. |
| 9.3.2 | ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ ಅವಶ್ಯಕತೆ ಪೂರೈಸಲು, ಪಠ್ಯಕ್ರಮದ ಹೊಂದಾಣಿಕೆ. |
| 9.3.3 | ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ ಮೌಲ್ಯ ಮಾಪನಕ್ಕಾಗಿ, ಮೌಲ್ಯ ಮಾಪನದ ಪದ್ಧತಿಯ ಹೊಂದಾಣಿಕೆ. |
| 9.4 | ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ, ಕಲಿಕಾ ಅವಶ್ಯಕತೆಗಳನ್ನು ಪೂರೈಸಲು ಅನುಕೂಲತೆಗಳು |
| 9.4.1 | ಶಾಲೆ, ಸಮೂಹ, ವಿಭಾಗ, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿನ ಅನುಕೂಲಕೆಗಳು |
| 9.4.2 | ದಿವ್ಯಾಂಗ ಮಕ್ಕಳ ಒಳಗೊಂಡಂತೆ ಶಿಕ್ಷಣ |
| 9.5 | ಒಳಗೊಂಡಂತೆ ಇರುವ ತರಗತಿಗಳು |
| 9.5.1 | ತರಗತಿಯ ಹೊಂದಾಣಿಕೆ ಮತ್ತು ನಿರ್ವಹಣೆ |
| 9.5.2 | ಸೂಕ್ತವಾದ, ಭೋಧನಾ-ಕಲಿಕಾ ಸಾಮಗ್ರಿಗಳು (ಟಿಎಲ್ಎಂ) ಮತ್ತು ಮಾಹಿತಿ, ಸಂವಹನ ಮತ್ತು ತಾಂತ್ರಿಕತೆಯ ಉಪಯೋಗ |
| 9.6 | ಗೃಹ ಆಧಾರಿತ ಶಿಕ್ಷಣ |
| 9.6.1 | ಪರಿಕಲ್ಪನೆ |
| 9.62 | ಗೃಹ ಅಧಾರಿತ ಶಿಕ್ಷಣಕ್ಕಾಗಿ ಪ್ರಕ್ರಿಕೆಗಳು |
| 9.7 | ಕ್ರೂಢೀಕರಿಸೋಣ |
| 9.8 | ನಿಮ್ಮ ಪ್ರಗತಿ ಪರೀಕ್ಷೆಯ ಮಾದರಿ ಉತ್ತರಗಳು |
| 9.9 | ಹೆಚ್ಚಿನ ಓದಿಗೆ ಸಲಹೆಗಳು |
| 9.10 | ಪಠ್ಯಾಂತ ಅಭ್ಯಾಸ ಪ್ರಶ್ನೆಗಳು |


## 9.0 ಪ್ರಸ್ತಾವನೆ, ಪರಿಚಯ

ಶಿಕ್ಷಕರಾಗಿ, ನೀವು ನಿಮ್ಮ ತರಗತಿಗಳಲ್ಲಿ ವಿವಿಧ ಸಾಮರ್ಥ್ಯವುಳ್ಳ ಮಕ್ಕಳಿಗೆ ಭೋಧಿಸುತ್ತೀರಿ. ಕೆಲವು ವಿಶೇಷ ಅವಶ್ಯಕತೆಯುಳ್ಳ ಮಕ್ಕಳಿಗೂ ಕಲಿಸುತ್ತಿರಬಹುದು. ಕೆಲವು ಮಕ್ಕಳು, ಹುಟ್ಟಿನಿಂದಲೋ ಅಥವಾ ಪೋಲಿಯೋನಿಂದಲೋ ಅಥವಾ ಅಪಘಾತದಿಂದಲೋ, ತಮ್ಮ ಅಂಗಗಳಲ್ಲಿ ವಿಕಲತೆಯನ್ನು ಹೊಂದಿರಬಹುದು. ಈ ವಿಕಲತೆಗಳು ಬಾಹ್ಯ ಗೋಚವಾದವು. ಕೆಲವರು, ಅಂಧರೂ ಅಥವಾ ದೃಷ್ಟಿಸಂಬಂಧ ದೋಷವುಳ್ಳವರೂ, ಮತ್ತು ಕೆಲವರು ಶ್ರವಣ ಸಂಬಂಧಿ ವಿಕಲತೆ ಹೊಂದಿರಬಹುದು ಕೆಲವು ಮಕ್ಕಳು, ಬಾಹ್ಯಕ್ಕೆ ಕಾಣದ ವಿಕಲತೆ, ಅಂದರೆ ಬುದ್ಧಿಮಾಂದ್ಯ ಮತ್ತು ಕಲಿಕೆಗೆ ಸಂಬಂಧಿಸಿದಂತೆ ವಿಶೇಷ ವಿಕಲತೆಗಳನ್ನು ಹೊಂದಿರಬಹುದು. ನಿಮಗೆ ತಿಳಿದಿರುವಂತೆ ನಮ್ಮ ದೇಶದಲ್ಲಿ ಶಿಕ್ಷಣವು, ಎಲ್ಲಾ ಮಕ್ಕಳ, ಮೂಲಭೂತ ಹಕ್ಕು, ಅದೂ ಅಲ್ಲದೆ, ನಮ್ಮ ದೇಶದಲ್ಲಿ ದಿವ್ಯಾಂಗರ ಹಕ್ಕುಗಳನ್ನು ಪರಿರಕ್ಷಿಸುವ ಮತ್ತು ಸಮಾನ ಅವಕಾಶ ಒದಗಿಸುವ ಹಾಗೂ ಪೂರ್ಣ ಭಾಗವಹಿಸುವ, ಕಾಯಿದೆ (ಪಿ.ಡಿ. ಕಾಯಿದೆ 1995) ಜಾರಿಯಲ್ಲಿದೆ, ಈ ಕಾಯಿದೆಯನ್ನು ಇತ್ತೀಚಿಗೆ ಪರಿಷ್ಕರಿಸಲಾಗಿದೆ. ಕಾಯಿದೆಯು, ಶಿಕ್ಷಣ ಹಕ್ಕಿನ ಮೇಲೆ ಒತ್ತು ಕೊಡಲಾಗಿದೆ. ಸರ್ವ ಶಿಕ್ಷ ಅಭಿಮಾನದಡಿ, ಸೂಚಿಸಿರುವಂತೆ, ಎಲ್ಲಾ ರೀತಿಯ ವಿಕಲಾಂಗ (ದಿವ್ಯಾಂಗ) ಮಕ್ಕಳಿಗೆ ಸೂಕ್ತವಾದ ಶಿಕ್ಷಣ ಪಡೆಯಬೇಕು. ಈ ಪಠ್ಯಭಾಗದಲ್ಲಿ, ಈ ರೀತಿಯ ದಿವ್ಯಾಂಗ ಮಕ್ಕಳ ಕಲಿಕೆಯ ಗುಣಲಕ್ಷಣಗಳನ್ನು, ಪಠ್ಯಕ್ರಮ ಹೊಂದಾಣಿಕೆ, ಭೋಧನಾ ಕಲಿಕಾ ಸಾಮಗ್ರಿ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಪಾತ್ರ ಹಾಗೂ ವಿಶೇಷ ಅವಶ್ಯಕತೆಯುಳ್ಳ ಮಕ್ಕಳನ್ನು, ಶಿಕ್ಷಣ ಪ್ರವಾಹದಲ್ಲಿ ಒಳಪಡಿಸುವ ವಿವಿಧ ಪ್ರಾವಧಾನಗಳನ್ನು ಗಮನಿಸೋಣ. ಇಷ್ಟೆಲ್ಲಾ ಪ್ರಾವಧಾನಗಳಿದ್ದರೂ, ಅತಿತೀಕ್ಷ್ಣ

ವಿಕಲತೆಯನ್ನು ಹೊಂದಿರುವ ಮಕ್ಕಳು, ಶಾಲೆಗೆ ಹೋಗುವಂತಿರದೆ ಇರಬಹುದು. ಶಿಕ್ಷಣವು ಅವರ ಹಕ್ಕಾಗಿರುವುದರಿಂದ, ಶಿಕ್ಷಣವು ಅವರ ಮನೆ ಬಾಗಿಲಿಗೆ ತಲುಪುವುದು ಸೂಕ್ತವಾಗಿದೆ. ಹೀಗಾಗಿ, ಗೃಹ ಆಧಾರಿತ ಶಿಕ್ಷಣಕ್ಕೆ ಮಾಡಲಾಗಿರುವ, ವ್ಯವಸ್ಥೆಗಳನ್ನು ಸಹ, ಪಠ್ಯಭಾಗದಲ್ಲಿ ಚರ್ಚಿಸೋಣ.

## 9.1 ಕಲಿಕಾ ಧ್ಯೈಯೋದ್ದೇಶಗಳು:

ಈ ಪಠ್ಯಭಾವನ್ನು ಅಧ್ಯಯಿಸದ ಮೇಲೆ ನೀವು.

- ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಕಲಿಕಾ ಗುಣಲಕ್ಷಣಗಳನ್ನು ತಿಳಿಸಬಲ್ಲಿರಿ.
- ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ವ್ಯವಸ್ಥೆ ಹಾಗೂ ಇದರ ಸೂಚ್ಯಪರಿಣಾಮಗಳನ್ನು ಚರ್ಚಿಸಬಲ್ಲಿರಿ.
- ವಿಶೇಷ ಅವಶ್ಯಕತೆಯುಳ್ಳ ಮಕ್ಕಳ, ಅವಶ್ಯಕತೆಗಳನ್ನು ಪೂರೈಸಲು, ಪಠ್ಯಕ್ರಮದ ಹೊಂದಾಣಿಕೆ ಮಾಡುವ ಕೌಶಲ್ಯವನ್ನು ಪ್ರದರ್ಶಿಸಬಲ್ಲಿರಿ.
- ಶಾಲೆ, ಸಮೂಹ, ವಿಭಾಗ, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಲಭ್ಯವಿರುವ ಅನುಕೂಲತೆಗಳ ಬಗ್ಗೆ ತಿಳಿಸಬಲ್ಲಿರಿ.
- ವಿಶೇಷ ಅಗತ್ಯತೆಗಳುಳ್ಳ ಮಕ್ಕಳಿರುವ ತರಗತಿಯ ನಿರ್ವಹಣೆಗಾಗಿ ಬೇಕಾದ ಸೂಕ್ತವಾದ ಬೋಧನಾ – ಕಲಿಕಾ ಸಾಮಗ್ರಿಗಳನ್ನು ತಯಾರಿಸಬಲ್ಲಿರಿ ಮತ್ತು / ಅಥವಾ ಉಪಯೋಗಿಸಬಲ್ಲಿರಿ.
- ಗೃಹ ಆಧಾರಿತ ಶಿಕ್ಷಣ / ಬೋಧನಾಯ ಅರಿವನ್ನು ತೋರಬಲ್ಲಿರಿ.

## 9.2 ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶೈಕ್ಷಣಿಕ ಸವಾಲುಗಳು:

ಶಿಕ್ಷಕರಾಗಿ ನೀವು, ಸುಮಾರು 35 ವಿದ್ಯಾರ್ಥಿಗಳಿರುವ ತರಗತಿಯಲ್ಲಿ, ಸಾಕಷ್ಟು ಸುಲಭವಾಗಿ, ಬೋಧನಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಬಲ್ಲಿರಿ, ಏಕೆಂದರೆ, ಸಾಮಾನ್ಯವಾಗಿ, ಎಲ್ಲಾ ವಿದ್ಯಾರ್ಥಿಗಳ ಸಾಮರ್ಥ್ಯಮಟ್ಟ, ಒಂದು ಮಟ್ಟದ ಮಿತಿಗಳಲ್ಲಿ ಇರುತ್ತದೆ. ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳು ನಿಮ್ಮ ತರಗತಿಯಲ್ಲಿದ್ದಾಗ, ಅವರ ಕೆಲವು ವಿಶೇಷ ಅಗತ್ಯತೆಗಳನ್ನು ಗಮನಕ್ಕೆ ತೆಗೆದುಕೊಂಡು ವ್ಯವಹರಿಸಬೇಕಾಗುತ್ತದೆ. ಈ ರೀತಿಯ ಅಗತ್ಯತೆಗಳು, ಮಕ್ಕಳಿಂದ, ಮಕ್ಕಳಿಗೆ ಅವರವರ ನ್ಯೂನತೆ (ವಿಕಲತೆ)ಯನ್ನು ಅನುಸರಿಸಿ ಬದಲಾಗುತ್ತವೆ. ಉದಾಹರಣೆಗೆ ದೃಷ್ಟಿ ವಿಕಲತೆಯುಳ್ಳ ಮಕ್ಕಳು, ಕಪ್ಪು ಹಲಗೆಗೆ ಹತ್ತಿರವಾಗಬೇಕಾಗಬಹುದು. ಅವರಿಗೆ ಸಾಕಷ್ಟು ಬೆಳಕಿನ ಅಗತ್ಯತೆ ಇರುವುದು. ಹಾಗೆಯೇ ಶ್ರವಣದೋಷವಿರುವ ಮಕ್ಕಳ ಜೊತೆ ವ್ಯವಹರಿಸುವಾಗ, ಶಿಕ್ಷಕರು, ಸ್ಪಷ್ಟವಾಗಿ, ಏರುಧ್ವನಿಯಲ್ಲಿ ಮಾತನಾಡಬೇಕಾಗಬಹುದು. ಇದರಿಂದ, ಶಿಕ್ಷಕರ ತುಟಿಗಳ ಚಾಲನೆಯನ್ನು ಅನುಸರಿಸಿ, ಮಕ್ಕಳು ಅರಿತುಕೊಳ್ಳುವರು. ಅಂಧ ಮಕ್ಕಳಿಗೆ, ಮಾತಿನ ಮೂಲಕ ಸೂಚನೆ ಕೊಡಬೇಕಾಗಬಹುದು. ಹಾಗೆಯೇ, ಶಿಕ್ಷಕರು ದೃಶ್ಯ ವಸ್ತುಗಳನ್ನು ಉಪಯೋಗಿಸುವಾಗ, ವಾಕ್ ಸೂಚನೆಯ ಜೊತೆಗೆ, ಸ್ಪರ್ಶಿಸಿ ವಸ್ತುವನ್ನು ಅರಿಯಲು ಸಹಾಯಕವಾಗಬೇಕಾಗುವುದು. ಬುದ್ಧಿಮಾಂದ್ಯವುಳ್ಳ ಮಕ್ಕಳಿಗೆ ಸ್ಥೂಲವಸ್ತುಗಳು ಮತ್ತು ಪುನರುಚ್ಛರಿತಸೂಚನೆಗಳು, ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಬೇಕಾಗುವುದು, ಅಂಗಾಂಗ ಚಲನೆಯ ನ್ಯೂನತೆ ಇರುವ ಮಕ್ಕಳಿಗೆ, ಶಾರೀರಿಕವಾಗಿ ಸಹಾಯ, ಸಹಕಾರ ಬೇಕಾಗುವುದು. ತರಗತಿಯಲ್ಲಿನ ಈ ರೀತಿಯ ಪ್ರತಿಯೊಬ್ಬ ಮಕ್ಕಳ, ವೈಯುಕ್ತಿಕ, ಅಗತ್ಯತೆಗಳನ್ನು, ಗುರುತಿಸುವುದು ಹೇಗೆ ಎಂಬುದನ್ನು, ಈಗ ನೋಡೋಣ.

### 9.2.1. ವಿಶೇಷ ಅಗತ್ಯತೆಗಳುಳ್ಳ ಮಕ್ಕಳ ಕಲಿಕಾ ಗುಣಲಕ್ಷಣಗಳು

ಎಲ್ಲಾ ಮಕ್ಕಳೂ ಶಕ್ತಿ (ಬಲ)ಗಳಲ್ಲಾಗಲಿ ಮತ್ತು ಅವರ ಅಗತ್ಯತೆಗಳಲ್ಲಾಗಲಿ ಏಕರೂಪತೆ ಹೊಂದಿರುವುದಿಲ್ಲ, ಅವು ವಿವಿಧವಾಗಿರುತ್ತದೆ. ಈ ಅರಿವು ಇನ್ನೊಬ್ಬರಿಗೆ ಸಹಾಯ ಮಾಡಲು ಹಾಗೂ ಒಳಗೊಂಡ ತರಗತಿಯಲ್ಲಿ ಸಹಾಯ ಪಡೆಯಲು ಒಂದು ಪ್ರಮುಖ ಹೆಜ್ಜೆಯಾಗಿರುತ್ತದೆ. ಈ ರೀತಿಯ ಅರಿವು ವಯಸ್ಕ ಜೀವನಕ್ಕೆ ಅತ್ಯವಶ್ಯವಾದ ಕೌಶಲ್ಯವಾಗಿದ್ದು, ಮಾನವ ಜೀವಿಗಳು, ಪರಸ್ಪರ ಅವಲಂಬಿತರಾಗಿದ್ದರೂ, ಸ್ವತಂತ್ರವಾದವರಾಗಿರುತ್ತಾರೆ. ಜೀವನದ ಮೊದಲ ದಿನಗಳಲ್ಲೇ, ಈ ವಿಷಯದ ಅರಿವು, ಮೌಲ್ಯಗಳನ್ನು ಉತ್ತೇಜಿಸುವುದರ ಮೂಲಕ, ಉತ್ತಮ ನಾಗರೀಕರನ್ನು ತಯಾರು ಮಾಡುವುದು ಇದರಿಂದ, ಸಕರಾತ್ಮಕ ಅಂತರ್ ಅವಲಂಬನೆಗೆ ದಾರಿ ಮಾಡಿಕೊಡುತ್ತದೆ.

ಚಲನಾ ವಿಕಲತೆಯನ್ನು ಹೊಂದಿರುವ (ತಮ್ಮ ಕೈ, ಕಾಲು, ಪಾದ) ಮಕ್ಕಳು, ಇತರ ಸಾಮಾನ್ಯ ಮಕ್ಕಳಂತೆಯೇ ತರಗತಿಯಲ್ಲಿ ಕಲಿಯುವರು. ಮಕ್ಕಳ ಕೈಯಲ್ಲಿ ವಿಕಲತೆ ಇದ್ದಾಗ, ಅವರು ಬರೆಯುವಲ್ಲಿ ಕಷ್ಟವಾಗುತ್ತದೆ ಮತ್ತು ವಸ್ತುಗಳನ್ನು ಹಿಡಿತದಲ್ಲಿ ತೆಗೆದುಕೊಳ್ಳುವುದು ಕಷ್ಟವಾಗುವುದು. ಕಾಲುಗಳು ಊನವಾಗಿದ್ದರೆ, ನಡೆಯುವುದು ಕಷ್ಟವಾಗುವುದು ಈ ರೀತಿಯ ಮಕ್ಕಳಿಗೆ ಸೂಕ್ತವಾದ ಸಹಾಯಕ ಪರಿಕರಗಳಿಂದ ಪರಿಹಾರ ಒದಗಿಸಬೇಕು.

ಶ್ರವಣ ದೋಷವಿರುವ ಮಕ್ಕಳು, ಬಹುತೇಕವಾಗಿ, ತಮ್ಮ ದೃಷ್ಟಿ ಮೂಲಕ, ಅಂಗ ಚಾಲನಾ ವಿನ್ಯಾಸದ ಮೂಲಕ ಕಲಿಯಲು ಪ್ರಯತ್ನಿಸುತ್ತಾರೆ. ತರಗತಿಯಲ್ಲಿ, ಶ್ರವಣ ದೋಷವಿರುವ ವಿದ್ಯಾರ್ಥಿಗಳು ಇತರೆ ಮಕ್ಕಳಂತೆ ಇರುತ್ತಾರೆ. ಕೇವಲ, ಶ್ರವಣ ಶಕ್ತಿಯ ಕೊರತೆ ಇದೆ. ಈ ಮಕ್ಕಳು ಮಾತನಾಡುವುದಿಲ್ಲ. ಏಕೆಂದರೆ, ಇವರು ಕೇಳಲಾರರು, ಈ ಮಕ್ಕಳಿಗೆ

ಸಹಾಯ ಮಾಡಲು, ಅವರನ್ನು ನೋಡುತ್ತಾ, ತುಟಿಗಳ ಚಾಲನೆಯ ಮೂಲಕ, ತರಗತಿಯಲ್ಲಿ ಸಹಾಯ ಮಾಡಬಹುದು. ಇದಲ್ಲದೆ, ಕಪ್ಪು ಹಲಗೆಯಲ್ಲಿ ಬರೆದು, ಚಿತ್ರಪಟಗಳನ್ನು ಮತ್ತು ಇತರೆ ದೃಶ್ಯ ಸಾಮಗ್ರಿಗಳನ್ನು ಬಳಸಿ ಅವರು ಕಲಿಯಲು ಅನುಕೂಲ ಮಾಡಿಕೊಡಬಹುದು. ಈ ರೀತಿಯ ಮಕ್ಕಳು, ಸದಾ ಶ್ರವಣ ಸಹಾಯಕ ಯಂತ್ರವನ್ನು ಬಳಸಲು, ಪ್ರೋತ್ಸಾಹಿಸಬೇಕು. ಈರೀತಿಯ ಶ್ರವಣ ಸಹಾಯಕ ಯಂತ್ರ, ಮಕ್ಕಳಲ್ಲಿ ಇಲ್ಲದಿದ್ದರೆ, ಈ ರೀತಿಯ ಯಂತ್ರಗಳನ್ನು ಕೊಡುವ ಸಂಘ ಸಂಸ್ಥೆಗಳಿಂದ ತಪಾಸಣೆ ಮಾಡಿಸಿ, ಉಚಿತವಾಗಿ ಕೊಡಿಸುವ ವ್ಯವಸ್ಥೆ ಮಾಡಿಸಬಹುದು. ಈ ರೀತಿಯ ವ್ಯವಸ್ಥೆ (ಪ್ರಾವಧಾನ) ಸರ್ಕಾರದಿಂದಿದೆ. ಈ ಶ್ರವಣ ದೋಷವಿರುವ, ಪ್ರತಿ ಮಕ್ಕಳು, ಸೂಕ್ತ ಶ್ರವಣ ತಪಾಸಣೆಯ ನಂತರ ಅವಶ್ಯವಿರುವ ಸಹಾಯವನ್ನು ಒದಗಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆ.

ಕಾನೂನುರೀತ್ಯ, ಅಂಧತ್ವ ಮತ್ತು ದೃಷ್ಟಿಮಾಂದ್ಯಗಳು, ದೃಷ್ಟಿ ದೋಷಗಳಾಗಿವೆ. ಪೂರ್ಣ ಅಂಧತ್ವ ಹೊಂದಿರುವ ಮಕ್ಕಳು, ಕೇಳುವುದರಿಂದ ಮತ್ತು ಸ್ಪರ್ಶ ಮತ್ತು ಅತೀಂದ್ರಿಯಂದಿ ಕಲಿಯುವರು. ಈ ಮಕ್ಕಳು, ಇತರ ಮಕ್ಕಳಿಗಿಂತ, ತಮ್ಮ ಘ್ರಾಣೇಂದ್ರಿಯದ ಮೂಲಕ ಉಪಯೋಗ ಪಡೆಯುವರು. ಉದಾಹರಣೆಗೆ, ನೀವು ತರಗತಿಗೆ ಪ್ರವೇಶಿಸಿದಾಗ, ನೀವು ಮಾತನಾಡುವ ಮೊದಲೇ, ನೀವು ಬಂದಿರುವುದನ್ನು ಅರಿಯಬಲ್ಲರು. ಇದು, ನೀವು ಪ್ರತಿನಿತ್ಯ ಉಪಯೋಗಿಸುವ ಸುಗಂಧ ದ್ರವ್ಯದ ಸುಗಂಧದಿಂದ, ದೃಷ್ಟಿಮಾಂದ್ಯ ಇರುವ ಮಕ್ಕಳು ತಮಗಾಗಿ ನಿಗದಿತವಾದ, ವಿಶೇಷ ಕನ್ನಡಕ ಧರಿಸಿ, ತಮಗಿರುವ ಕಡಿಮೆ ದೃಷ್ಟಿಯಿಂದಲೇ ಓದಬಲ್ಲವರಾಗುತ್ತಾರೆ, ಇಂಥವರಿಗೆ ವೈರುದ್ಯವಿರುವ ಹಿನ್ನೆಲೆಯಲ್ಲಿ, ದೊಡ್ಡ ಅಕ್ಷರಗಳ ಮುದ್ರಣ ಬೇಕಾಗುತ್ತದೆ. ತರಗತಿಯಲ್ಲಿನ, ಮಕ್ಕಳ ಅವಶ್ಯಕತೆಗಳನ್ನು, ಅಗತ್ಯತೆಗಳನ್ನು ಗುಣಮಾಪನ ಮಾಡಿ, ಅದಕ್ಕೆ ಸೂಕ್ತವಾದ ವ್ಯವಸ್ಥೆಯ, ಮಕ್ಕಳನ್ನು ಒಳಗೂಡಿಸಬಹುದಾದೆ.

ನಿರ್ಧಿಷ್ಠ ಕಲಿಕಾ ವಿಕಲತೆ (ಎಸ್‌ಎಲ್‌ಡಿ) ಎಂಬುದು, ಮಕ್ಕಳು ಶಾಲಾ ವಿಷಯಗಳಲ್ಲಿ, ಅವರ ಪ್ರದರ್ಶನವು ಕಳಪೆಯಾಗಿರುವ ಪರಿಸ್ಥಿತಿ, ಇಲ್ಲಿ ಮಕ್ಕಳು ಯಾವುದೇ ರೀತಿಯ ಭೌದ್ಧಿಕ ಅಥವಾ ಬೇರೆ ಯಾವುದೇ ರೀತಿಯ ವಿಕಲತೆ ಇರುವುದಿಲ್ಲ. ಆದರೂ ಅವರ ಪ್ರದರ್ಶನವು ಸಮರ್ಪಕವಾಗಿರುವುದಿಲ್ಲ. ನಿರ್ಧಿಷ್ಠ ಕಲಿಕಾ ವಿಕಲತೆ ಉಳ್ಳ ಮಕ್ಕಳು, ಮಾಹಿತಿಯನ್ನು ಸಂಸ್ಕರಿಸುವುದರಲ್ಲಿ ಕಷ್ಟಪಡುತ್ತಾರೆ, ಏಕೆಂದರೆ, ಅವರಲ್ಲಿನ ನರಮಂಡಲನ ಪರಿಸ್ಥಿತಿಯಿಂದಾಗಿ, ವಾಚನದಲ್ಲಿ, ಲೇಖನದಲ್ಲಿ, ಗಣಿತ ಸಂಬಂಧಿ ಲೆಕ್ಕಾಚಾರದಲ್ಲಿ ಕಷ್ಟಪಡುತ್ತಾರೆ. ಕೆಲ ಮಕ್ಕಳಿಗೆ, ಗಮನವಿಡುವ, ನೆನಪಿಗೆ ಸಂಬಂಧಿಸಿದ, ತರ್ಕಬದ್ಧ ರೀತಿಯಲ್ಲಿ ಕಾರಣಕೊಡುವ ಮತ್ತು ಸಂಯೋಜನೆಗೊಳಿಸುವುದರಲ್ಲಿ ಸಮಸ್ಯೆ ಉದುರಿಸುತ್ತಾರೆ. ಅವರ, ಈ ರಿತಿಯ ಸಮಸ್ಯೆಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸಿ, ಗುಣಮಾಪನ ಮಾಡಿ, ಸೂಕ್ತ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ, ಅವರ ಸಮಸ್ಯೆಗಳು ಬಹುತೇಕ ಪರಿಹಾರವಾಗುವುವು.

ಅಭಿವೃದ್ಧಿಯಲ್ಲಿನ ವಿಕಲತೆಗಳುಳ್ಳ ಮಕ್ಕಳು, ಅಂದರೆ ಭೌದ್ಧಿಕ ವಿಕಲ,ತೆ (ಬುದ್ಧಿಮಾಂದ್ಯ), ಆಟಿಸಲ, ವಿವಿಧ ವಿಕಲತೆಯ ಕಾರಣವಾಗಿ, ಮಿದುಳು ಸಂಬಂಧಿತ ಸಮಸ್ಯೆ, ಮುಂತಾದವುಗಳಿಂದ ಬಳಲುವ ಮಕ್ಕಳು, ವಿಶಿಷ್ಟ ಕಲಿಕಾ ಗುಣಲಕ್ಷಣಗಳನ್ನು ಹೊಂದಿರುತ್ತಾರೆ, ಭೌದ್ಧಿಕ ವಿಕಲತೆಯುಳ್ಳ ಮಕ್ಕಳು, ಕಲಿಯುವುದರಲ್ಲಿ ಬಹಳ ನಿಧಾನವಾಗಿ ಕಲಿಯುವುದರಿಂದ, ಭೋಧಿಸಿದ್ದನ್ನು, ಬಹಳ ಸೀಮಿತವಾಗಿ(ಸ್ವಲ್ಪ) ಗ್ರಹಿಸುತ್ತಾರೆ. ಇವರು ಅಮೂರ್ತವಾದ ಪರಿಕಲ್ಪನೆಗಳನ್ನು ಕಲಿಯುವುದರಲ್ಲಿ ಬಹಳ ಕಷ್ಟಪಡುತ್ತಾರೆ. ಮಿದುಳಿಗೆ ಸಂಬಂಧಿಸಿದ ವಿಕಲತೆಯುಳ್ಳವರು, ಕಲಿತದ್ದನ್ನು ಸರಿಯಾದ ರೀತಿಯಲ್ಲಿ ಸಂಯೋಜನೆಗೊಳಿಸುವುದರಲ್ಲಿ, ಚಲನಶೀಲತೆಯಲ್ಲಿ ಮತ್ತು ಮಾತನಾಡುವುದರಲ್ಲಿ ಕಷ್ಟಪಡುತ್ತಾರೆ. ಇವರಿಗೆ, ಭೌದ್ಧಿಕ ವಿಕಲತೆ ಇದ್ದರೆ, ಅದರ ಗುಣಲಕ್ಷಣಗಳನ್ನು ಪ್ರದರ್ಶಿಸುತ್ತಾರೆ. “ಆಟಿಸಂ” ನಿಂದ ಬಳಲುತ್ತಿರುವ ಮಕ್ಕಳು ಸಾಮಾಜಿಕ ಸಂಬಂಧ ಮತ್ತು ಇತರರೊಡನೆ ಬೆರೆತು ವ್ಯವಹರಿಸುವುದರಲ್ಲಿ ಕಷ್ಟಪಡುತ್ತಾರೆ. ಇವರಿಗೆ ಕೆಲವೇ ನಿರ್ಬಂಧಿತ ಆಸಕ್ತಿಗಳಿದ್ದು, ಅವರಿಗೆ ಕಲಿಸಲು, ಬಹಳ ಮುತುವರ್ಜಿ ಮತ್ತು ಅರಿವು ಬೇಕಾಗುವುದು. ಇದರಲ್ಲಿ ಕೆಲವರಿಗೆ ಭೌದ್ಧಿಕ ವಿಕಲತೆ (ಬುದ್ಧಿ ಮಾಂದ್ಯತೆ) ಇದ್ದರೆ, ಅವರಿಗೆ ಕಲಿಸುವುದು ಕಠಿಣ ಸವಾಲಾಗುತ್ತದೆ. ವಿವಿಧ ವಿಕತೆ ಎಂದರೆ, ಒಂದಕ್ಕಿಂತ ಹೆಚ್ಚು ವಿಕಲತೆಗಳಿರುವುದು ಎಂದರ್ಥ, ಈ ಸಂದರ್ಭದಲ್ಲಿ ಪ್ರತ್ಯೇಕ ಮಗುವಿಗೆ ಬೇಕಾದ, ಅಗತ್ಯತೆಗೆ ತಕ್ಕುದಾದ, ಯೋಜಿತ ಶಿಕ್ಷಣ ಕಾರ್ಯಕ್ರಮ ಬೇಕಾಗುವುದು.

### 9.2.2 ಶಿಕ್ಷಣ ವ್ಯವಸ್ಥೆ ಮತ್ತು ವಿಶೇಷ ಅಗತ್ಯತೆಯುಳ್ಳ ಮಕ್ಕಳ ಅಗತ್ಯತೆಗಳು

ಶಿಕ್ಷಕರಾಗಿ, ನಿಮಗೆ, ನಮ್ಮಲ್ಲಿರುವ, ಶಿಕ್ಷಣ ಪದ್ಧತಿಗಳ ಅರಿವಿದೆ. ನೀವು ಕೇಂದ್ರ ಶಿಕ್ಷಣ ಮಂಡಳಿ ಅಥವಾ ಆಯಾ ರಾಜ್ಯ ಶಿಕ್ಷಣ ಮಂಡಳಿಗಳಿಗೆ ಹೊಂದಿಕೊಂಡಿರುವ, ಶಾಲೆಗಳಲ್ಲಿ ಕಾರ್ಯ ಮಾಡುತ್ತಿರಬಹುದು. ಯಾವುದೇ ಶಿಕ್ಷಣ ಮಂಡಳಿಯಾಗಲಿ, ಎಲ್ಲಾ ಮಕ್ಕಳು, 10ನೇಯ ತರಗತಿಯವರೆಗೆ, ಕೆಲವು ನಿಗದಿತ, ವಿಷಯಗಳನ್ನು ಕಲಿಯಲೇಬೇಕು. ಸಾಮಾನ್ಯವಾಗಿ, ಮಕ್ಕಳು ಮೂರು ಭಾಷೆಗಳನ್ನು ಕಲಿಯುತ್ತಿದ್ದು, ಅದರಲಿ ಒಂದು ಭಾಷೆಯು ಭೋಧನಾ ಮಾಧ್ಯಮವಗಿರುತ್ತದೆ. ಶಾಲೆಯಲ್ಲಿ, ರೂಪುಗೊಳ್ಳುವ ಮೌಲ್ಯಮಾಪನ (ಗುಣಮಾಪನ) ಮತ್ತು ಸಂಕಲಿತ ಮೌಲ್ಯ ಮಾಪನ (ಗುಣಮಾಪನ) ಎಂಬ, ಎರಡು ರೀತಿಯ ಮೌಲ್ಯ ಮಾಪನಗಳಿವೆ. ರೂಪುಗೊಳ್ಳುವ ಮೌಲ್ಯ ಮಾಪನವನ್ನು ಪ್ರತಿ ಮುರು ತಿಂಗಳಿಗೊಮ್ಮೆ ಮಾಡುತ್ತೇವೆ. ಇವುಗಳ ಜೊತೆವಿ, ತರಗತಿಯಲ್ಲಿ ನಡೆಸುವ ಪರೀಕ್ಷೆಗಳೂ ಇರುತ್ತವೆ. ಸಂಕಲಿತ ಮೌಲ್ಯ ಮಾಪನವು, ವರ್ಷಾಂತ್ಯದಲ್ಲಿರುವುದು. ಮುಂಚಿನ (ಹಿಂದಿನ) ವರ್ಷಗಳಲ್ಲಿ, ಈ ಮೇಲಿನ ಮೌಲ್ಯ ಮಾಪನಗಳು, ಮಕ್ಕಳು ತೇರ್ಗಡೆಗೆ, ಬಹಳ ಮಹತ್ವದ್ದಾಗಿದ್ದವು, ಈಗಲಾದರೂ ನಿಮಗೆ ತಿಳಿಯುವಂತೆ, “ತಂತಾನೆ ತೇರ್ಗಡೆ”. ಮತ್ತು ಯಾರನ್ನೂ “ನಪಾಸು” ಮಾಡದ ನಿರ್ಧಾರಿತ ನೀತಿ ಜಾರಿಯಲ್ಲಿದೆ. ಬಹುತೇಕ ಶಾಲೆಗಳಲ್ಲಿ, ಅದರಲ್ಲೂ, ಕೇ ಂದ್ರ ಮಾಧ್ಯಮಿಕ ಶಿಕ್ಷಣ

ಮಂಡಳಿಗೆ  ಒಳಪಟ್ಟ ಶಾಲೆಗಳಲ್ಲಿ, ಕ್ರಿಯಾ ಕಲಾಪ ಆಧಾರಿತ ಮತ್ತು ನಿರಂತರ, ವ್ಯಾಪಕ ಮೌಲ್ಯ ಮಾಪನ ಪದ್ಧತಿಯು ಜಾರಿಯಲ್ಲಿದೆ.

ಈ ರೀತಿಯ ಸನ್ನಿವೇಶದಲ್ಲಿ, ಸ್ವಲ್ಪವಾದ ಭೌದ್ಧಿಕ ವಿಕಲತೆ ಹೊಂದಿರುವ, ಮತ್ತು ನಿರ್ಧಿಷ್ಟ ಕಲಿಕಾ ವಿಕಲತೆ ಹೊಂದಿರುವ ಮಕ್ಕಳು ಗಮನದಿಂದ ದೂರವಾಗುತ್ತಾರೆ. ಉದಾಹರಣೆಗೆ, 8ನೇ ತರಗತಿಯಲ್ಲಿರುವ ಈ ಮಕ್ಕಳು, 2 ಅಥವಾ 3ನೇ ತರಗತಿಯ ಮಕ್ಕಳ ರೀತಿಯಲ್ಲಿ ಪ್ರದರ್ಶನ ತೋರಬಹುದು. ಈ ರೀತಿಯ ಮಕ್ಕಳನ್ನು ಮೊದಲ ಹಂತಗಳಲ್ಲೇ ಗುರುತಿಸಿ, ಅವರಿಗೆ ಬೇಕಾದ, ಸಹಾಯವನ್ನು ಒದಗಿಸುವುದು ಬಹಳ ಮುಖ್ಯ, ಇಲ್ಲವಾದರೆ, ಸಮಸ್ಯೆ ಬರಬರುತ್ತಾ ಉಲ್ಬಣಿಸಬಹುದು. ವಿಕಲತೆಯಿಂದಾಗಿ, ಸ್ವಾಭಿಮಾನದ ಕರೊತೆ, ಸಹಪಾಠಿಗಳ ತಿರಸ್ಕಾರ ಅಥವಾ ಶಿಕ್ಷಕರಿಂದ ಕಡೆಗಾಣಿಕೆ, ಇವುಗಳು ಮೊದಲ ಹಂತಗಳಲ್ಲೇ ಗುರುತಿಸಿ, ಅವರಿಗೆ ಬೇಕಾದ, ಸಹಾಯವನ್ನು ಒದಗಿಸುವುದು ಬಹಳಮುಖ್ಯ, ಇಲ್ಲವಾದರೆ, ಸಮಸ್ಯೆ ಬರಬರುತ್ತಾ ಉಲ್ಬಣಿಸಬಹುದು. ವಿಕಲತೆಯಿಂದಾಗಿ, ಸ್ವಾಭಿಮಾನದ ಕೊರತೆ, ಸಹಪಾಠಿಗಳ ತಿರಸ್ಕಾರ ಅಥವಾ ಶಿಕ್ಷಕರಿಂದ ಕಡೆಗಾಣಿಕೆ, ಇವುಗಳು ಮಕ್ಕಳ ಮನಸ್ಸಿನಲ್ಲಿ ಶಾಶ್ವತ ಕಲೆಯಾಗಿ ಉಳಿಯಬಹುದು. ಇದರಿಂದಾಗಿ ಆ ಮಕ್ಕಳ ವ್ಯಕ್ತಿತ್ವ ಶಾಶ್ವತವಾಗಿ ಘಾಸಿಗೊಳ್ಳಬಹುದು. ಶಿಕ್ಷಕರಾಗಿ ನಿಮ್ಮ ಪಾತ್ರ ಮಹತ್ತರವಾಗಿದೆ, ಈ ರೀತಿಯ ಮಕ್ಕಳನ್ನು ಗುರುತಿಸಿ, ಅವರ ಅಗತ್ಯತೆಯನ್ನು ಅರಿತು, ಅವರ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕರಾದಾಗ, ಮಕ್ಕಳ ಸಹಪಾಠಿಗಳೂ, ಈ ರೀತಿಯ ಮಕ್ಕಳನ್ನು ಆದರದಿಂದ ಕಂಡು ಅವರಿಗೆ ಸಹಾಯಕರಾಗುತ್ತಾರೆ.

ಅಂಥ ಮಕ್ಕಳಿಗೆ, __________ ಶ್ರವಣದೋಷವಿರುವವರಿಗೆ, ಶ್ರವಣ ಸಾಧನ, ಚಲಿಸುವ ವಿಕಲತೆ ಹೊಂದಿರುವರಿಗೆ, ಊರುಗೋಲು, ಕಂಕುಳ ಸಹಾಯಕ, ಚಕ್ರಕುರ್ಚಿ, ಕೃತಕ ಕಾಲು, ಕೈ, ಬರೆಯುವ ಸಾಧನಗಳು (ಪೆನ್, ಪೆನ್ಸಿಲ್ ಮತ್ತು ನೋಟ್‌ಬುಕ್) ಮುಂತಾದವುಗಳನ್ನು, ಅವರು ಎದುರಿಸುತ್ತಿರುವ ಸವಾಲು, ಸಮಸ್ಯೆಗಳನ್ನು ದೂರಮಾಡಬಹುದು.

ಮುಂದುವರೆದು, ಈ ರೀತಿಯ ವಿಶೇಷ ಅಗತ್ಯತೆ ಇರುವ ಮಕ್ಕಳಿಗಾಗಿ, ಕೇಂದ್ರ ಮತ್ತು ರಜ್ಯ ಸರ್ಕಾರಗಳು, ಒದಗಿಸುವ, ಸೌಲಭ್ಯ, ಸವಲತ್ತುಗಳನ್ನು, ಈ ಮಕ್ಕಳಿಗೆ ದೊರೆಯುವಂತೆ ಮಾಡಬೇಕು, ಉದಾಹರಣೆಗೆ, ಅಂಥ ವಿದ್ಯಾರ್ಥಿಗೆ, ಪರೀಕ್ಷೆಯಲ್ಲಿ "ಲೇಖಕ" ನನ್ನು ಒದಗಿಸಿದಾಗ, ಅಂಥ ವಿದ್ಯಾರ್ಥಿಯು ಹೇಳುವ ಉತ್ತರಗಳನ್ನು ಈ ಲೇಖಕ ಬರೆಯವನ್ನು.
ಈ ರೀತಿಯ ವಿಶೇ ಅಗತ್ಯತೆ ಇರುವ ಮಕ್ಕಳಿಗೆ, 30 ನಿಮಿಷಗಳ ಹೆಚ್ಚುವರಿ ಕಾಲಾವಕಾಶ ಒದಗಿಸಲಾಗುವುದು ಶ್ರವಣ ಕೊರತೆ ಇರುವ ಮಕ್ಕಳಿಗೆ, ಎರಡನೆ ಭಾಷೆಯ ಬದಲಿಗೆ, ಇನ್ನೊಂದು ವಿಷಯ ನೀಡುವುದು (ಪರ್ಯಾಯವಾಗಿ)

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ–1

1. ನಿಮ್ಮ ತರಗತಿಯಲ್ಲಿ, ನಿಮಗೆ ದೊರಕಬಹುದಾದ, ಆ ರೀತಿಯ ವಿಕಲತೆಗಳನ್ನು ಹೆಸರಿಸಿ.
2. ವಿಶೇಷ ಅಗತ್ಯತೆಯುಳ್ಳ ಮಕ್ಕಳ ಸಮಸ್ಯೆಗಳನ್ನು ಉಲ್ಬಣಗೊಳಿಸುವ, ನಮ್ಮ ಶಿಕ್ಷಣ ಪದ್ಧತಿ (ವ್ಯವಸ್ಥೆಯಲ್ಲಿನ ಸವಾಲುಗಳನ್ನು ತಿಳಿಸಿರಿ.

## 9.3 ಪಠ್ಯಾಕ್ರಮ ಹೊಂದಾಣಿಕೆಗಳು:

ಒಂದು ಉತ್ತಮ ಪಠ್ಯಕ್ರಮವು ಜ್ಞಾನವನ್ನು ಒದಗಿಸಬೇಕು, ಇದರೊ ಜೊತೆಗೆ, ವಿದ್ಯಾರ್ಥಿಗೆ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅರಿವು ಮೂಡುವಂತೆ, ಕೌಶಲ್ಯಗಳನ್ನೂ ಮತ್ತು ಮೌಲ್ಯಗಳನ್ನು ಒದಗಿಸಬೇಕು. ವಿಶೇಷ ಶಿಕ್ಷಣದ ಬಗ್ಗೆ ಮಾತನಾಡುವಾಗ, ಕೇವಲ, ಶಿಕ್ಷಣದ ಲಭ್ಯತೆಯ ಬಗ್ಗೆ ಮಾತ್ರವಲ್ಲದೆ, ಮುಂದುವರೆದು, ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಬಗ್ಗೆ ಗಮನವಿಡಬೇಕು. ಉತ್ತಮ ಗುಣಮಟ್ಟದ ಶಿಕ್ಷಣದ ಸಾಧನೆಗೆ, ಉತ್ತಮ ಪಠ್ಯಕ್ರಮ ಕೀಲಿಕೈ ಇದ್ದಂತೆ.

ಶಿಕ್ಷಣದಲ್ಲಿನ ಸುಧಾರಣೆ, ಕೇವಲ ಶಿಕ್ಷಕರ ಪಾಲಿನ ಜವಾಬ್ದಾರಿ ಮಾತ್ರವಲ್ಲ, ಆದರೆ, ಇದರಲ್ಲಿ, ನೀತಿ ನಿರ್ಧಾರಕರ ಮಾಧ್ಯಮಗಳ ಮತ್ತು ನಾಗರೀಕ ಪ್ರಜೆಗಳ ಪಾತ್ರವೂ ಇದೆ. ಪಠ್ಯಕ್ರಮವು, ಶಿಕ್ಷಣದ ಧ್ಯೆಯೋದ್ದೇಶಗಳನ್ನು, ಮೌಲ್ಯ ವ್ಯವಸ್ಥೆಯನ್ನು, ಸಮಾಜದ ನಂಬಿಕೆ, ಪರಂಪರೆಗಳನ್ನು ಬಿಂಬಿಸುವ ನಿರ್ಧಾರಗಳನ್ನು ಮಾಡಿ, ನಮ್ಮ ಭಾವಿ ಪ್ರಜೆಗಳನ್ನು ರೂಪಿಸುತ್ತದೆ. ಪ್ರತಿಯೊಂದು ಪಠ್ಯಕ್ರಮವೂ, ವಿದ್ಯಾರ್ಥಿಯಲ್ಲಿನ, ಅಂತಸತ್ವವನ್ನು ಪೂರ್ಣರೂಪದಲ್ಲಿ ಪ್ರಕಾಸಿಸುವಂತೆ ಮಾಡುವುದಲ್ಲದೆ, ಅವರನ್ನು ಸಮಾಜದ, ಫಲಕಾರಿ ಮತ್ತು ಯೋಗದಾನ ಮಾಡುವ ಪ್ರಜೆಗಳನ್ನಾಗಿಸುತ್ತದೆ, ವಿಕಲತೆಯುಳ್ಳ ಮಕ್ಕಳನ್ನು ಗಮನಿಸಿದಾಗ, ಅವರ ಸಾಮರ್ಥ್ಯ ಮತ್ತು ಅಗತ್ಯತೆಗಳು ವಿಭಿನ್ನವಾಗಿರುತ್ತದೆ. ಹೀಗಾಗಿ, ಪಠ್ಯಕ್ರಮದಲ್ಲಿ ಹೊಂದಾಣಿಕೆ ಮಾಡಿ, ಶಿಕ್ಷಣದ ಧ್ಯೇಯೋದ್ದೇಶಗಳನ್ನು ಕಲಿಕಾ ಫಲಕಗಳನ್ನು ರಾಜಿಮಾಡಿಕೊಳ್ಳದೆ, ವಿಷಯದ ವ್ಯವಹಾರ ನಡೆಸಬೇಕಾಗುತ್ತದೆ.

### 9.3.1. ಪಠ್ಯಕ್ರಮದ ಹೊಂದಾಣಿಕೆಯ ಅಗತ್ಯತೆಗಳು:

ಪಠ್ಯಕ್ರಮ ಅಭಿವೃದ್ಧಿ ಕಾರ್ಯವು ಒಂದು ಉದ್ದೇಶಪೂರ್ವಕ ಪ್ರಕ್ರಿಯೆಯಾಗಿದ್ದು, ನಿಶ್ಚಿತ ಕಲಿಕಾರ್ಥಗಳಿಗಾಗಿ, ಶೈಕ್ಷಣಿಕ ಧ್ಯೇಯೋದ್ದೇಶಗಳನ್ನು ಗುರುತಿಸಿ, ಒಬ್ಬ ವ್ಯಕ್ತಿ ಅಥವಾ ತಂಡವು ಕೈಗೊಳ್ಳುವ ಎಸಗುವ ಕಾರ್ಯ. ಸೂಕ್ತ ಪಠ್ಯ ವಸ್ತುಗಳನ್ನು ಅಭಿವೃದ್ಧಿಗೊಳಿಸಿ, ಅದರ ಕಾರ್ಯಾನ್ವಯವನ್ನು, ಕಲಿಕಾರ್ಥಗಳ ಜೊತೆ ಮಾಡಿ, ಪಠ್ಯಕ್ರಮದ ಪರಿಣಾಮ ಮತ್ತು

ಪರಿಣಾಮ ಕಾರಿತ್ವವನ್ನು ಮೌಲ್ಯ ಮಾಪನಮಾಡಿ, ಕಂಡುಕೊಂಡ ಫಲಿತದ ಆಧಾರದ ಮೇಲೆ ಪಠ್ಯಕ್ರಮದಲ್ಲಿ ಸುಧಾರಣೆ ಮಾಡುವುದು ಉದ್ದೇಶವಾಗಿರುವುದು : ಎ ಡಿಕ್ಷನರಿ ಆಫ್ ಎಜುಕೇಷನ್ (1981) (ಮೂಲ : http://www ಲೈಬ್ರರಿ, Ualbata, ea/subject /education)

ಮೇಲಿನ ನಿರ್ವಚನೆಯಲ್ಲಿನ ಮುಖ್ಯ ಅಂಶ (ಬಿಂದು)ಗಳು.

- ಕಲಿಕಾರ್ಥ ಸಮೂಹ
- ಪಠ್ಯಕ್ರಮ ಅಭಿವೃದ್ಧಿಪಡಿಸುವವರು
- ಸೂಕ್ತ ಪಠ್ಯಕ್ರಮದೆಡೆಗೆ ಗುರಿ
- ಕಾರ್ಯಾನ್ವಯ
- ಮೌಲ್ಯ ಮಾಪನ
- ಪಠ್ಯಕ್ರಮದ ಸುಧಾರಣೆ

ಮೇಲಿನ ಅಂಶಗಳು ಪ್ರತಿಬಿಂಬಿಸುವ ವಿಚಾರವೆಂದರೆ, ಪಠ್ಯಕ್ರಮ ಅಭಿವೃದ್ಧಿಯು ಒಂದು ನಿರಂತರ ನಡೆಯುವ ಪ್ರಕ್ರಿಯೆಯಾಗಿದ್ದು, ಬದಲಾಗುವ ಸನ್ನಿವೇಶ, ಕಾಲಘಟ್ಟಕ್ಕೆತಕ್ಕಂತೆ, ಪಠ್ಯಕ್ರಮದ ಪರಿಣಾಮ ಮತ್ತು ಪರಿಣಾಮಕಾರಿತ್ವದ ಆಧಾರದ ಮೇಲೆ, ಮಾಡುವ ಸುಧಾರಣಾ ಕ್ರಮವಾಗಿದೆ.

ಮಕ್ಕಳಿಗೆ, "ಅತ್ಯುತ್ತಮ"ವಾದದ್ದನ್ನು ನೀಡುವ ಗುರಿಯುನ ್ನು ಹೊಂದಿ, ಪಠ್ಯಕ್ರಮದ ಅಭಿವೃದ್ಧಿಯಲ್ಲಿ ಮಾರ್ಪಾಡಾಗುತ್ತದೆ.

ಮಕ್ಕಳಿಗೆ, ತಮಗೆ ಅರ್ಥವಾಗದ್ದನ್ನು ಕಲಿಯುವುದರಲ್ಲಿ ಸೀಮಿತ ಆಸಕ್ತಿ ಇರುವುದು. ಈ ರೀತಿ ಪಠ್ಯವಸ್ತುವನ್ನು ಮಕ್ಕಳು ಅಸಂಬದ್ಧ ಪಠ್ಯವಸ್ತುವಾದುದು ಎಂದುಕೊಳ್ಳುತ್ತಾರೆ. ಇದರಿಂದ, ಮಕ್ಕಳಲ್ಲಿ ಕಲಿಕೆಯ ಪ್ರೇರಣೆ ಕಡಿಮೆಯಾಗುತ್ತದೆ ಮತ್ತು ಮಕ್ಕಳ ಬೇಸರ ಅಥವಾ ಜಿಗುಪ್ಸೆಯಿಂದ ಅವರ ನಡವಳಿಕೆಗಳು ಸವಾಲಾಗಿ ಪರಿಣಮಿಸುತ್ತವೆ.

ಶಿಕ್ಷಕರು, ಪಠ್ಯವಸ್ತು ಬೋಧನೆಯನ್ನು ಆಸಕ್ತಕರವಾಗಿಯೂ ಹೆಚ್ಚು ಅರ್ಥವತ್ತಾಗಿಯೂ ಮಾಡಿದಾಗ, ಮಕ್ಕಳ ಆಸಕ್ತಿಯೂ ಹೆಚ್ಚಾಗಿ ಜಿಗುಪ್ಸೆ ಕಡಿಮೆಯಾಗುತ್ತದೆ. ಹೀಗಾಗಲು, ಪಠ್ಯಕ್ರಮ ಮತ್ತು ಬೋಧನಾಕ್ರಮ ಮಾರ್ಪಾಡಾಗಬೇಕು. ಶಿಕ್ಷಕರಿಗೆ ಇರುವ ಇನ್ನೊಂದು ಸವಾಲೆಂದರೆ, ಬಹಳ ಜಿದ್ದು ವಿನ್ಯಾಸದ ಪರೀಕ್ಷೆಗೆ, ಎಲ್ಲಾ ಮಕ್ಕಳನ್ನು ತಯಾರು ಮಾಡುವುದಾಗಿದೆ. ಶಾಲೆಯಲ್ಲಿನ, ಮಕ್ಕಳು, ವಿಕಲತೆಯುಳ್ಳ ಮಕ್ಕಳನ್ನೂ ಒಳಗೊಂಡಂತೆ, ಯಶಸ್ಸು ಸಂಧಿಸಲು ಪಠ್ಯಕ್ರಮ ಹೊಂದಾಣಿಕೆ ಮತ್ತು ಮೌಲ್ಯ ಮಾಪನ ವ್ಯವಸ್ಥೆಯನ್ನು ಹೊಂದಿಸುವುದು ಅತ್ಯಗತ್ಯವಾಗಿದೆ.

9.3.2. ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳ, ಅಗತ್ಯತೆಗಳನ್ನು ಪೂರೈಸಲು, ಪಠ್ಯಕ್ರಮ ಹೊಂದಾಣಿಕೆ.

ಪಠ್ಯವಸ್ತು ಹೊಂದಾಣಿಕೆ: ಹೊಂದಾಣಿಕೆಯು ಒಳಪಡಿಸುವಿಕೆ ಮತ್ತು ಮಾರ್ಪಾಡು ಮಾಡುವಿಕೆಯನ್ನು ಒಳಗೊಂಡಿದೆ.

ಒಳಪಡಿಸುವಿಕೆ (ಅಕಾಮೊಡೇಷನ್) ಎಂದರೆ, ಕಲಿಕೆ ಮತ್ತು ಬೋಧನೆ ಪ್ರಕ್ರಿಯೆಗಳಿಗೆ ಬೇಕಾಗುವ ಎಲ್ಲಾ ಸಾಮಗ್ರಿ ಮತ್ತು ಫಲಕ ಸಾಮಗ್ರಿಗಳಲ್ಲಾಗುವ ಬದಲಾವಣೆ ಇರುವುದಿಲ್ಲ. ಇಲ್ಲಿ ಕಲಿಕಾ ಬೋಧನಾ ಸಾಮಗ್ರಿ, ಬೋಧನಾ ರೀತಿ ಬದಲಾಗಬಹುದು. ಉದಾಹರಣೆಗೆ, ಮಾಡಿಕಲಿಯುವುದು, ದೃಶ್ಯ ಸುರುಳಿ, ಮಾತನಾಡುವ ಪುಸ್ತಕ, ಬ್ರೈಲ್‌ಲಿಪಿ, ಇತ್ಯಾದಿ, ಇತರರ ಸಾಮಾನ್ಯ ಮಕ್ಕಳು, ಪರಂಪರಾಗತ ರೀತಿಯಲ್ಲಿ, ಬೋಧನೆಯಿಂದ ಕಲಿಯುತ್ತಾರೆ.

"ಮಾರ್ಪಾಡು" ಎಂದರೆ, ಪಠ್ಯವಸ್ತುವಿನಲ್ಲಿ ಬದಲಾವಣೆಗೆ ಅಥವಾ ಮಾನಕದ ಬದಲಾವಣೆ ಉದಾಹರಣೆಗೆ, ಪಠ್ಯವಸ್ತುವಿನಲ್ಲಿ ಬದಲಾವಣೆ ಮಾಡಿ, ಕಡಿಮೆ ಪಠ್ಯಭಾಗವನ್ನು ಕಲಿಯಲು ಬಳಸುವುದು ಅಥವಾ ಮೌಲ್ಯ ಮಾಪನದ ವಿನ್ಯಾಸವನ್ನು ಬದಲಾಯಿಸುವುದು. ಶ್ರವಣನ್ಯೂನತೆಯುಳ್ಳ ಮಕ್ಕಳಿಗೆ, ಭಾಷೆಯ ಬದಲಾಗಿ, ಒಂದು ಕಾರ್ಯನಿರ್ವಹಣೆ, ಕಾರ್ಯಾನುಭವದ ವಿಷಯ ಕೊಡುವುದು.

ಪಠ್ಯಕ್ರಮ ಹೊಂದಾಣಿಕೆ – ಬಿಡುವಿಕೆ (ಒಮಿಷನ್), ಪಲ್ಲಟ, ವಿಸ್ತರಣೆ:

ಪಠ್ಯವಸ್ತು ಹೊಂದಾಣಿಕೆಯಲ್ಲಿ, ಒಳಪಡಿಸಿಕೊಳ್ಳುವಿಕೆ ಮತ್ತು ಮಾರ್ಪಡಿಸುವಿಕೆಗಳನ್ನು ಚರ್ಚಿಸಿದ್ದೇವೆ. ಇದರಲ್ಲಿ ಇರುವ ಬೇರೆ ಬೇರೆ ಉಪಹಂತಗಳಾದ, ಮಾರ್ಪಾಡು, ಪಲ್ಲಟ ಮತ್ತು ಬಿಡುವಿಕೆ (ಕಡಿಮೆಗೊಳಿಸುವುದು)ಗಳನ್ನು ಅಗತ್ಯತೆಗೆ ತಕ್ಕಂತೆ ಮಾಡಲಾಗುವುದು. ಇವುಗಳನ್ನು ವಿವರವಾಗಿ ನೋಡೋಣ.

ಬಿಡುವಿಕೆ : ಬಿಡುವಿಕೆ ಎಂದರೆ, ಪಠ್ಯವಸ್ತುವಿನ ಕೆಲವು ಭಾಗಗಳನ್ನು ಕಡಿಮೆಗೊಳಿಸುವಿಕೆ ಎಂದರೆ, ಕೇಂದ್ರ ಹಾಗೂ ರಾಜ್ಯ ಶಿಕ್ಷಣ ಮಂಡಳಿಗಳು, ವಿಕಲತೆಯುಳ್ಳ ಮಕ್ಕಳಿಗಾಗಿ, ಕೆಲವು ರಿಯಾಯಿತಿ ತೋರಿದ್ದಾರೆ. ನಮಗೆ ತಿಳಿದಂತೆ, ನಮ್ಮ ದೇಶದಲ್ಲಿ ಮೂರು ಭಾಷೆಗಳ ತ್ರಿಭಾಷಾ ಸೂತ್ರ ಜಾರಿಯಲ್ಲಿದೆ. ಶಿಕ್ಷಣ ಮಾಧ್ಯಮ, ಎರಡನೇ ಭಾಷೆ ಮತ್ತು ಮೂರನೇ ಭಾಷೆ ಶ್ರವಣ ನ್ಯೂನತೆ ಇರುವ ಅಥವಾ ಇನ್ಯಾವುದೇ, ಕಲಿಕಾ ನ್ಯೂನತೆಯುಳ್ಳ ಮಕ್ಕಳಿಗೆ, ಮೂರು ಭಾಷೆಗಳನ್ನು ಕಲಿಯುವುದು ಕಷ್ಟಾಗುತ್ತದೆ. ಹೀಗಾಗಿ, ಶಿಕ್ಷಣ ಮಂಡಳಿಗಳು, ಈ ರೀತಿಯ ಮಕ್ಕಳಿಗೆ, ಮೂರನೇ ಭಾಷೆಯಿಂದ ವಿನಾಯಿತಿ ಕೊಟ್ಟಿದ್ದಾರೆ. ಅವರು ಮುರನೇ ಭಾಷೆ ಕಲಿಯುಬೇಕಾದ್ದಿಲ್ಲ.

ಪಠ್ಯಕ್ರಮದಲ್ಲಿ ಇರುವ ಕೆಲವು ಪಠ್ಯವಸ್ತುಗಳನ್ನು ಕೆಲವು ವಿಕಲತೆಯುಳ್ಳ ಮಕ್ಕಳಿಗೆ, ವಿನಾಯಿತಿ ಮಾಡಬಹುದು. ಅಂಧಮಕ್ಕಳಿಗೆ ಚಿತ್ರಕಲೆ, ಬಣ್ಣಗಳ ಪರಿಕಲ್ಪನೆ, ಹಾಗೆಯೇ ಶ್ರವಣ ದೋಷವುಳ್ಳವರಿಗೆ ಸಂಗೀತ, ಶಾರೀರಿಕ ವಿಕಲತೆಯುಳ್ಳವರಿಗೆ, ಶಾರೀರಿಕ ಶಿಕ್ಷಣದಿಂದ ವಿನಾಯಿತಿ, ಅದರ ಬದಲಿಗೆ ಫಿಸಿಯೋಥೆರಪಿ, ಕಾರ್ಯ ಅನುಭವ ಚಟುವಟಿಕೆ ಅಥವಾ ಸಂಗೀತ ಮುಂತಾದ ಸಹಪಠ್ಯವಸ್ತುಗಳನ್ನು ಅಭ್ಯಸಿಸಬಹುದು.

ವಿಸ್ತರಣೆ: ಪಠ್ಯಕ್ರಮವನ್ನು, ಪಠ್ಯವಸ್ತುವನ್ನು ವಿವರವಾಗಿಸುವುದರಿಂದ, ಮಕ್ಕಳು ಪರಿಕಲ್ಪನೆಗಳನ್ನು ಅರಿಯುವುದರಲ್ಲಿ ಸಹಾಯಕವಾಗುವುದು. ಬುದ್ಧಿಮಾಂದ್ಯವುಳ್ಳ ಮಕ್ಕಳಿಗೆ ಕ್ಷೇತ್ರಫಲದ ಪರಿಕಲ್ಪನೆಯುಳ್ಳ, ಹಣಕಾಸಿನ ಲೆಕ್ಕಾಚಾರವುಳ್ಳ ಗಣಿತ ಪಠ್ಯವಸ್ತುವನ್ನು ಬೋಧಿಸುವ ಪರಿಸ್ಥಿತಿಯನ್ನು ಪರಿಗಣಿಸೋಣ. ಉಳಿದ ಸಾಮಾನ್ಯ ಮಕ್ಕಳು, ಲೆಕ್ಕವನ್ನು ತಮ್ಮ ಲೇಖನಪುಸ್ತಕದಲ್ಲಿ ಮಾಡಬಲ್ಲವರಾದರೆ, ಬುದ್ಧಿ ಮಾಂದ್ಯವಿರುವ ಮಕ್ಕಳಿಗೆ ಸೂಕ್ತ ಉದಾಹರಣೆ, ಸ್ಥೂಲ ವಸ್ತುಗಳು ಮತ್ತು ನೈಜ ಹಣ ಮತ್ತು ವ್ಯವಹಾರದ ಅನುಭವವು ಪರಿಕಲ್ಪನೆಗಳ ಅರಿವಿಗೆ ಸಹಾಯಕವಾಗುವುವು. ಇಲ್ಲಿ ಶಿಕ್ಷಕರು ಪಠ್ಯವಸ್ತುವನ್ನು ನಿಜ ಜೀವನದ ಅನುಭವಗಳಿಂದ ವಿಸ್ತರಿಸುತ್ತಾರೆ ಮತ್ತು ಹಣದ ಪರಿಕಲ್ಪನೆಯುಳ್ಳ, ಲೆಕ್ಕಗಳನ್ನು ಹೊಂದಿರುವ, ಅಭ್ಯಾಸಗಳಿಂದ, ಅನುಸರಿಸಲಾಗುವುದು.

ಕಲಿಯಲು ಕಾಲದ ಅನುಕೂಲಕರ ಹೊಂದಾಣಿಕೆ:

ಹೊಂದಾಣಿಕೆಯ ಮತ್ತೊಂದು ಪ್ರಮುಖ ಅಂಶವೆಂದರೆ "ಕಾಲ". ಶಾಲೆಗಳಲ್ಲಿ, ಪಠ್ಯಕ್ರಮವನ್ನು, ಶೈಕ್ಷಣಿಕ ವರ್ಷ ಪೂರ್ತಿಗೆ, ಕಾರ್ಯಸೂಚಿ ತಯಾರು ಮಾಡಲಾಗುತ್ತದೆ. ಹಾಗೆಯೇ, ಪರೀಕ್ಷೆಗಳ ವೇಳಾ ಪಟ್ಟಿಗಳನ್ನು, ಸಾಕಷ್ಟು ಮುಂಚೆಯೇ ಅಂದರೆ, ಶೈಕ್ಷಣಿಕ ವರ್ಷದ ಮುಂಚೆಯೇ ತಯಾರಿಸಲಾಗುತ್ತದೆ ಹಾಗೂ ಈ ಯೋಜನೆಯನ್ನು ಚಾಚೂತಪ್ಪದೆ ಅನುಸರಿಸಲಾಗುತ್ತದೆ. ಎಲ್ಲಾ ರೀತಿಯ ಮಕ್ಕಳನ್ನು ಒಳಗೊಂಡಂತೆ ಇರುವ ತರಗತಿಯಲ್ಲಿನ ವಿವಿಧ ಚಟುವಟಿಕೆಗಳಿಗಾಗಿ, ಕಾಲದ ಹಂಚಿಕೆಯಲ್ಲಿ, ಮಾರ್ಪಾಡನ್ನು ಪರಿಗಣಿಸಬೇಕಾಗುವುದು. ಕೆಲವು ಬೌದ್ಧಿಕ ವಿಕಲತೆಯುಳ್ಳ ಮಕ್ಕಳು, ಅವರದರದಲ್ಲೆ ಕಲಿಯುವುದರಿಂದ, ಕಲಿಯಲು ಅವರಿಗೆ ಹೆಚ್ಚು ಸಮಯ ಬೇಕಾಗುವುದು. ಅದೇ ರೀತಿಯಲ್ಲಿ ದೃಷ್ಟಿ ನ್ಯೂನತೆಯುಳ್ಳ ಮತ್ತು ವಿವಿಧ ನ್ಯೂನತೆಯುಳ್ಳ ಮಕ್ಕಳಿಗೆ, ಪರೀಕ್ಷೆ ಬರೆಯಲು ಹೆಚ್ಚು ಸಮಯದ ಅಗತ್ಯತೆ ಇರುತ್ತದೆ. ಈಗಾಗಲೇ ತಿಳಿದಿರುವಂತೆ ಶಿಕ್ಷಣದ ಪರೀಕ್ಷಾ ಮಂಡಳಿಗಳು, 10 ಮತ್ತು 12ನೇ ತರಗತಿಯ ಪರೀಕ್ಷೆಗಳಲ್ಲಿ, ಈ ರಿತಿಯ ನ್ಯೂನತೆಯುಳ್ಳ ಮಕ್ಕಳಿಗೆ 30 ನಿಮಿಷಗಳ ಹೆಚ್ಚುವರಿ ಸಮಯ ನೀಡಲಾಗುತ್ತಿದೆ.

ಶಿಕ್ಷಣ ಸಾಮಗ್ರಿಗಳ ಹೊಂದಾಣಿಕೆ:

ನಿಮಗೆ ತಿಳಿದಿರುವಂತೆ, ಶಾಲೆಗಳಲ್ಲಿ ಅನೇಕ ರೀತಿಯ ಶಿಕ್ಷಣ ಸಾಮಗ್ರಿಗಳನ್ನು ಬಳಸಲಾಗುತ್ತದೆ. ಮುದ್ರಿತ ಸಾಮಗ್ರಿಗಳು, ಪಠ್ಯಪುಸ್ತಕಗಳು, ಇತರೆ ಟಿಪ್ಪಣಿ ಪುಸ್ತಕಗಳು ಪರೀಕ್ಷಾ ಸಾಮಗ್ರಿಗಳು, ಪ್ರಶ್ನೆ ಪತ್ರಿಕೆಗಳು, ಇತರೆ ಸಾಮಗ್ರಿಗಳಾದ, ಭೂಪಟಗಳು, ಚಿತ್ರಮಾಲೆಗಳು, ಭೂಗೋಳ, ವಿಜ್ಞಾನ ಸಂಬಂಧಿ ಚಾರ್ಟ್‌ಗಳು, ಪ್ರಯೋಗ ಶಾಲೆಯ ಪರಿಕರಗಳು, ಮಾದರಿಗಳು ಹಾಗೂ ದೃಶ್ಯ ಸುರಳಿಗಳು, ಶ್ರವಣ ಸುರಳಿಗಳು, ಅಡಕ ಮುದ್ರಿಕೆಗಳು, ಈ ರೀತಿಯ ಹಲವಾರು ಸಾಮಗ್ರಿಗಳು. ಮಕ್ಕಳಲ್ಲಿನ ವಿಕಲತೆಯ ವಿಧ, ಮತ್ತು ವಿಕಲತೆ, ನ್ಯೂನತೆಗಳ ಗಹನತೆಯನ್ನು ಅವಲಂಬಿಸಿ, ಹೊಂದಾಣಿಕೆಯ, ನಿರ್ಧಾರಗಳನ್ನು ತಗೆದುಕೊಳ್ಳಬೇಕಾಗುತ್ತದೆ. ಮಾನಕಗೊಳಿಸಿದ, ಪಠ್ಯಕ್ರಮವನ್ನು ಸೂಚಿಯಾಗಿರಿಸಿಕೊಂಡು, ಮಾನಕಗೊಳಿಸಿದ, ಪಠ್ಯಕ್ರಮವನ್ನು ಸೂಚಿಯಾಗಿರಿಸಿಕೊಂಡು, ಮಕ್ಕಳೇ ನ್ಯೂನತೆಯುಳ್ಳ, ಅಗತ್ಯತೆಗೆ ಅನುಗಣವಾಗಿ, ಪರ್ಯಾಯವೆಂದರೆ, ಒಂದು ಪಠ್ಯವಸ್ತುವಿನ ಬದಲಿಗೆ ಇನ್ನೊಂದನ್ನು ಸೇರಿಸುವುದೆಂದರ್ಥ, ಹೆಚ್ಚಿಸುವಿಕೆ ಎಂದರೆ, ಪಠ್ಯವಸ್ತುವಿನ ಉತ್ತಮ ಕಲಿಕೆಗಾಗಿ ಉಪಯೋಗಿಸುವ, ಸಾಮಗ್ರಿಗಳು ಮತ್ತು ಕಾರ್ಯತಂತ್ರಗಳು ಎಂದರ್ಥ, ಇವೆರಡೂ, ನ್ಯೂನತೆ ಇರುವ ಮಕ್ಕಳು ಗರಿಷ್ಠ ಮಟ್ಟಕ್ಕೆ ಕಲಿಕೆಯನ್ನು ಅನುವುಗೊಳಿಸುತ್ತವೆ.

### 9.3.3. ವಿಶೇಷ ಅಗತ್ಯತೆಗಳುಳ್ಳ ಮಕ್ಕಳಿಗಾಗಿ, ಮೌಲ್ಯ ಮಾಪನ ವಿಧಾನಗಳ ಹೊಂದಾಣಿಕೆ :

ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಪರೀಕ್ಷಾ ಮತ್ತು ಮೌಲ್ಯಮಾಪನಗಳು, ಮಕ್ಕಳಿಗೆ ಸೂಕ್ತವಾಗಿರುವಂತೆ ಹೊಂದಿಸಿಕೊಳ್ಳಬೇಕು. ಈ ಹೊಂದಾಣಿಕೆಯು, ಪರೀಕ್ಷಾ ಪ್ರಶ್ನೆ ಪತ್ರಕೆ ನಿರ್ಮಾಣ (ವಸ್ತುನಿಷ್ಠ/ ವ್ಯಕ್ತಿ ನಿಷ್ಠ), ಪರೀಕ್ಷಾ ನಿರ್ವಹಣೆ (ಅಗತ್ಯತೆಗೆ ತಕ್ಕಂತೆ ಹೆಚ್ಚುವರಿ ಕಾಲ), ಉತ್ತರಿಸುವ ರೀತಿ (ಮೌಖಿಕ/ಲಿಖಿತ) ಪರೀಕ್ಷೆ ಬರೆಯಲು ಲೇಖಕನ ಪ್ರಾವಧಾನ), ಪರೀಕ್ಷಾ ಸಮಯದಲ್ಲಿ ಆಸನ ವ್ಯವಸ್ಥೆ (ದೃಷ್ಟಿ ನ್ಯೂನತೆ ಇರುವವರಿಗೆ, ಹೆಚ್ಚಿನ ಬೆಳಕು ಇರುವ ವ್ಯವಸ್ಥೆ) ಶ್ರೇಣಿಕರಣ ಮುಂತಾದವು.

ಗುಣಮಾಪನವು, ಬೋಧನಾ ಕಲಿಕೆ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗ. ಮಕ್ಕಳು, ಪಠ್ಯಕ್ರಮದಲ್ಲಿ ಮಾಡುವ ಸಾಧನೆಯನ್ನು ಗುಣಮಾಪನ ಮಾಡುವುದರಿಂದ, ಗುಣಮಾಪನ ವಿಧಾನದಲ್ಲಿ ಬಹಳವಾದ, ವ್ಯತ್ಯಾಸವಿರುವುದಿಲ್ಲ. ಕಟ್ಟುನಿಟ್ಟಾದ ಪರೀಕ್ಷಾ ಸನ್ನಿವೇಶದಲ್ಲಿ, ಮಕ್ಕಲ ಸ್ವತಂತ್ರವಾದ ಸಾಧನೆಯನ್ನು, ಸಾಮಾನ್ಯವಾಗಿ ಮಾಪನ ಮಾಡಿದರೂ, ವಿಕಲತೆಯುಳ್ಳ ಮಕ್ಕಳ ವಸ್ತುನಿಷ್ಠ ಗುಣ ಮಾಪನವನ್ನು, ಬೋಧನಾ ಸನ್ನಿವೇಶ ಮತ್ತು ಸ್ವಾಭಾವಿಕ ಸನ್ನಿವೇಶದಲ್ಲಿ ನಡೆಸುವುದು ಅತ್ಯುತ್ತಮವಾದುದು. ಈ ರೀತಿಯ ಸ್ವಾಭಾವಿಕ ಸನ್ನಿವೇಶದಲ್ಲಿ ನಡೆಸಿದ ಗುಣಮಾಪನವು, ಶಿಕ್ಷಕರಿಗೆ ತಾವು ಹೊಂದಾಣಿಸಿಕೊಳ್ಳಬೇಕಾದ ರೀತಿಯ ಬಗ್ಗೆ ಮಾಹಿತಿ ಪಡೆದು, ಅದಕ್ಕೆ ತಕ್ಕಂತೆ ತೀರ್ಮಾನ ತೆಗೆದುಕೊಳ್ಳಲು ಸಹಾಯಕವಾಗುವುದು. ವಿಕಲತೆಯುಳ್ಳ ಮಕ್ಕಳ ಗುಣಮಾಪನವನ್ನು, ತರಗತಿಯ ಒಳಗೆ ಮತ್ತು ಹೊರಗಿನ ವಾತಾವರಣದಲ್ಲಿ, ವಿವಿಧ ರಿತಿಯಲ್ಲಿ, ನಿರಂತರವಾಗಿ ನಡೆಸುವುದರಿಂದ, ಈ ಮಕ್ಕಳ ಕಷ್ಟದ ಹಂತಗಳನ್ನು ನಿರ್ಧರಿಸಲು ಸಹಾಯಕವಾಗುತ್ತವೆ. ಔಪಚಾರಿಕ ಪರೀಕ್ಷೆಗಳು, ಗುಣಮಾನದ ಒಂದು ವಿಧವಾದರೆ, ನಿರ್ಧಾರಿತ ಮಾನದಂಡ ಆಧಾರಿತ, ಪರಿಸರ ಆಧಾರಿತ, ಪರಿವೀಕ್ಷಣೆ, ಹಿಂದಿನ ಘಟನೆಗಳ ದಾಖಲೆ, ಪೋಷಕರ ಅಭಿಪ್ರಾಯ ಮತ್ತು ಸ್ವತಃ ಮಾಡುವ ಮೌಲ್ಯ ಮಾಪನಗಳು, ಇವೆಲ್ಲವೂ ವಿಕಲತೆಯುಳ್ಳ ಮಕ್ಕಳ, ಕಷ್ಟದ ಹಂತಗಳನ್ನು ನಿರ್ಧರಿಸುವಲ್ಲಿ ನೆರವಾಗುತ್ತವೆ. ಮಕ್ಕಳು ನೀಡುವ ಪ್ರತಿಕ್ರಿಯೆ (ಸ್ಪಂದನೆ)ಯ ನಿತ್ಯತೆ, ಅನಿತ್ಯತೆಯಿಂದಲೂ, ಶಿಕ್ಷಕರಿಗೆ ಪ್ರಮುಖ ಸುಳಿವು ದೊರೆತು, ಹೊಂದಾಣಿಕೆಯ ನಿರ್ಧಾರ ತೆಗೆದುಕೊಳ್ಳುವಲ್ಲಿ, ಸಹಾಯಕವಾಗುತ್ತದೆ. ಪಠ್ಯಕ್ರಮ ಆಧಾರಿತ ಗುಣಮಾಪನ / ಮೌಲ್ಯ ಮಾಪನವು, ಮಕ್ಕಳ ಸ್ಥಳ ನಿರ್ಧಾರಕ್ಕೆ ನೆರವಾಗುವ, ಜನಪ್ರಿಯ ವಿಧಾನ ಹಾಗೂ ಪಠ್ಯಕ್ರಮ ಹೊಂದಾಣಿಕೆ, ವಿಕಲತೆಯುಳ್ಳ ಮಕ್ಕಳಿಗಾಗಿ ನೆರವಾಗುತ್ತದೆ.

## 9.4 ವಿಶೇಷ ಅಗತ್ಯತೆಯುಳ್ಳ ಮಕ್ಕಳ ಕಲಿಕಾ ಅಗತ್ಯತೆಗಳನ್ನು ಪೂರೈಸಲು ಅನುಕೂಲತೆಗಳು :

ಈ ಹಿಂದೆ ತಿಳಿಸಿರುವಂತೆ, ಸರ್ಕಾರವು, ವಿಶೇಷ ಅಗತ್ಯತೆಯುಳ್ಳ ಮಕ್ಕಳ ಕಿಲಾ ಅಗತ್ಯತೆ ಪೂರೈಸಲು, ವಿಶೆಷವಾದ ಮತ್ತು ಒಳಗೊಂಡಿರುವ ಶಾಲೆಗಳನ್ನೂ, ಗೃಹ ಆಧಾರಿತ ಶಿಕ್ಷಣ, ಪಠ್ಯಕ್ರಮದ ಮತ್ತು ಶಿಕ್ಷಣದ ಹೊಂದಾಣಿಕ, ಪರೀಕ್ಷಾ ಪ್ರಾವಧಾನ ಮತ್ತು ಮಿಗಿಲಾಗಿ, ಈ ಮಕ್ಕಳ ಶಿಕ್ಷಣಕ್ಕಾಗಿ, ಸವಾಲನ್ನು ಎದುರಿಸಬಲ್ಲ ಸೂಕ್ತ ಮಾನವ ಸಂಪನ್ಮೂಲವನ್ನು ಒದಗಿಸಿದೆ.

### 9.4.1. ಶಾಲೆಯಲ್ಲಿ, ಸಂಕಲನಮಟ್ಟದಲ್ಲಿ, ವಿಭಾಗ, ಜಿಲ್ಲಾ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ:

ವಿಶೇಷ ಅಗತ್ಯತೆ ಇರುವ ಮಕ್ಕಳನ್ನೂ ಒಳಗೊಂಡು, ಎಲ್ಲಾ ಮಕ್ಕಳ ಶಿಕ್ಷಣಕ್ಕಾಗಿ, ಸರ್ಕಾರದ, 11ನೇ ಪಂಚವಾರ್ಷಿಕ ಯೋಜನೆಯಲ್ಲಿನ ಧ್ಯೆಯೋದ್ದೇಶಗಳು ಹೀಗಿವೆ.

- 2003–04 ನೇ ವರ್ಷದಲ್ಲಿ ಇರುವ, ಪ್ರಾಥಮಿಕ ಶಾಲೆಯನ್ನು ತೊರೆಯುವ ಮಕ್ಕಳ ಶೇ. 52.2% ದರವನ್ನು 2011–14 ರ ಹೊತ್ತಿಗೆ ಶೇ. 20 ಕ್ಕೆ ಇಳಿಸುವುದು.
- ಪ್ರಾಥಮಿಕ ಶಾಲಾ ಹಂತದಲ್ಲಿ, ಕನಿಷ್ಠಮಟ್ಟದ ಶಿಕ್ಷಣ ಸಾಧನೆಯನ್ನು ಅಭಿವರಧ್ಧಿಪಡಿಸುವುದು ಮತ್ತು ಶಿಕ್ಷಣದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿ ಹಾಗೂ ಸಮಯಬದ್ಧ ನಿಗಾವಹಿಸುವುದು.
- 7 ವರ್ಷ ಮತ್ತು ಮೇಲ್ಪಟ್ಟ ವ್ಯಕ್ತಿಗಳ, ಸಾಕ್ಷರತಾ ದರವನ್ನು ಶೇ. 85 ಕ್ಕೆ ಹೆಚ್ಚಿಸುವುದು.
- ಸಾಕ್ಷರತೆಯಲ್ಲಿ, ಲಿಂಗಗಳಲ್ಲಿನ ಅಂತರವನ್ನು ಶೇ. 10 ರಷ್ಟು ತಗ್ಗಿಸುವುದು.
- ಉಚ್ಚ ಶಿಕ್ಷಣ ಪಡೆಯಲು ಹೋಗುವವರ ಸಂಖ್ಯೆಯನ್ನು ಯೋಜನೆಯ ಅಂತ್ಯ ಈಗಿರುವ ಶೇ. 10 ರಿಂದ ಶೇ. 15 ಕ್ಕೆ ಹೆಚ್ಚಿಸುವುದು.

ಈ ಮೇಲ್ಕಂಡ ಉದ್ದೇಶ ಸಾಧನೆಗಾಗಿ, ಶಾಲಾ, ಸಂಕುಲ, ವಿಭಾಗ, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರೀಯ ಹಂತಗಳಲ್ಲಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲಾಯಿತು. ಈಗ ನೀವು ಅಧ್ಯಯಿಸುತ್ತಿರುವ, ಎನ್.ಐ.ಓ.ಸಿ. ಅಡಿಯಲ್ಲಿ ಮಾಡುತ್ತಿರುವ ಈ ಪ್ರಯತ್ನವು, ನಮ್ಮ ಎಲ್ಲಾ ಶಿಕ್ಷಕರೂ, ವಿಕಲತೆಯುಳ್ಳ ಮಕ್ಕಳು ಒಳಗೊಂಡಂತೆ, ಎಲ್ಲಾ ಮಕ್ಕಳನ್ನು ಶಾಲಾ ಶಿಕ್ಷಣಕ್ಕೆ ಅಣಿಗೊಳ್ಳಲು ಅನುವು ಮಾಡುವುದಕ್ಕಾಗಿ ಇದೆ. ದೇಶದ ಎಲ್ಲಾ ಮಕ್ಕಳೂ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಮಾಡುವ, ಇನ್ನೊಂದು, ಕೇಂದ್ರ ಸರ್ಕಾರದಿಂದ ಪ್ರಾಯೋಜಿತ ಕಾರ್ಯಕ್ರಮ, ಸರ್ವ ಶಿಕ್ಷ ಅಭಿಯಾನ". ಈ ಯೋಜನೆಯನ್ನು ಪ್ರತಿರಾಜ್ಯವೂ ಕಾರ್ಯಾನ್ವಯ ಮಾಡುತ್ತಿವೆ. ಸರ್ವ ಶಿಕ್ಷಾ ಅಭಿಯಾನದ ಅಡಿ, ಬಹುದೊಡ್ಡ ಸಂಖ್ಯೆಯಲ್ಲಿ, ವಿಶೇಷ ಶಿಕ್ಷಕರನ್ನು ನೇಮಕ ಮಾಡಿ, ಅವರನ್ನು, ಪರಿಣಾಮಕಾರಿ, ಶಿಕ್ಷಕರಾಗಲು, ಪ್ರಶಿಕ್ಷಣ ನೀಡಲಾಗಿದೆ. "ಭಾರತೀಯ ಪುನರ್ವಸತಿ ಮಂಡಳಿ" (ಆರ್.ಸಿ.ಐ.) ಯು, ಗುಣಮಟ್ಟದ, ವೃತ್ತಿಪರ, ಮಾನವ ಸಂಸಾಧನವನ್ನು, ದೇಶಾದ್ಯಂತ, ಸಂಸ್ಥೆಗಳು ಈ ರೀತಿ ಪ್ರಶಿಕ್ಷಿತ ಶಿಕ್ಷಕರು ಸರ್ವ ಶಿಕ್ಷ ಅಭಿಯಾನದ ಮೂಲಕ, ಗ್ರಾಮಗಳಲ್ಲಿರುವ, ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶಾಲೆಗಳಲ್ಲಿ ನೇಮಕಗೊಳ್ಳುತ್ತಾರೆ ಮತ್ತು ಇವರ ಕಾರ್ಯವನ್ನು ವ್ಯವಸ್ಥಿಯವಾಗಿ ಎಲ್ಲಾ ಹಂತದಲ್ಲೂ ನಿಗಾವಹಿಸಲಾಗುತ್ತದೆ. ಕೆಲವು ರಾಜ್ಯಗಳಲ್ಲಿ, ವಿಭಾಗಮಟ್ಟದ, ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಈ ಕೇಂದ್ರಗಳಿಂದ, ವಿಭಾಗದಲ್ಲಿನ ಶಾಲೆಗಳಿಗೆ ಬೇಕಾದ, ವೃತ್ತಿಪರ ಸಹಾಯ, ನೆರವನ್ನು ನೀಡಲಾಗುತ್ತದೆ. ಕೇಂದ್ರಗಳಿಂದ,

ಸಂಪನ್ಮೂಲ ವ್ಯಕ್ತಿಗಳು, ನಿಗದಿತವಾಗಿ, ಶಾಲೆಗಳಿಗೆ ತೆರಳಿ, ಅಲ್ಲಿನ ಶಿಕ್ಷಕರ ಜೊತೆ ಸಂಯೋಜನೆಯಿಂದ, ಮಕ್ಕಳಿಗೆ ಬೋಧಿಸುತ್ತಾರೆ. ಈ ವ್ಯವಸ್ಥೆಯು, ದೇಶಾದ್ಯಂತ ಎಲ್ಲಾ ಮಕ್ಕಳಿಗೆ ಶಿಕ್ಷಣವು ತಲುಪವುದೆಂಬುದು ಆಶಯವಾಗಿದೆ.

**9.4.2. ವಿಕಲತೆಯುಳ್ಳ ಮಕ್ಕಳ ಒಳಗೊಂಡ ಶಿಕ್ಷಣ:**

ಗ್ರಾಮೀಣ ಹಾಗೂ ನಗರ ಪ್ರದೇಶದ ಅನೇಕ ಶಾಲೆಗಳಲ್ಲಿ ಮಂದ ವಿಕಲತೆಯುಳ್ಳ ಮಕ್ಕಳಿಗೆ ದಾಖಲಾತಿ ದೊರೆಯುತ್ತದೆ. ಆದರೆ, ಇತರ ಮಕ್ಕಳಂತೆ ಕಲಿಯುತ್ತಿಲ್ಲವೆಂಬ ಕಾರಣದಿಂದ, ಶಿಕ್ಷಕರ ತಿರಸ್ಕಾರದಿಂದಾಗಿ, ಶಾಲೆ ಬಿಡುವ ಪರಿಸ್ಥಿತಿಯುಂಟಾಗುತ್ತದೆ. ಸಾಮಾನ್ಯ ಶಾಲೆಗಳಲ್ಲಿರುವ ಶಿಕ್ಷಕರು, ಈ ರಿತಿಯ ಮಕ್ಕಳನ್ನು ಒಳಪಡಿಸಿಕೊಳ್ಳುವ ದಿಶೆಯಲ್ಲಿ, ಪ್ರಶಿಕ್ಷಿತರಲ್ಲದಿರುವುದರಿಂದಾಗಿ, ಈ ಶಿಕ್ಷಕರು, ಪೋಷಕರಿಗೆ, ತಮ್ಮ ಮಕ್ಕಳನ್ನು ವಿಶೇಷ ಸಹಾಯತೆಗಾಗಿ ಸಲಹೆ ಮಾಡುವರು. ಕೆಲವು ಸಮಯಗಳಲ್ಲಿ, ಈ ರಿತಿಯ ಮಕ್ಕಳು ಸಾಮಾನ್ಯ ಶಾಲೆಗಳಲ್ಲಿ ಉಳಿದರೂ, ಶೈಕ್ಷಿಕ ಪಠ್ಯಕ್ರಮದ ಹೊರೆಯಿಂದಾಗಿ ಪ್ರಾಥಮಿಕ ತರಗತಿಗಳಿಂದ ತಿರಸ್ಕರಿಸಲ್ಪಡುವರು. ಕೆಲವು ಸ್ಥಳಗಳಲ್ಲಿನ ಸಾಮಾನ್ಯ ಶಾಲೆಗಳಲ್ಲಿ, ತರಬೇತಿ ಪಡೆದ ಶಿಕ್ಷಕರುಗಳಿದ್ದು, ತಿರಸ್ಕರಿಸಲ್ಪಡುವ ಮಕ್ಕಳ ಸಂಖ್ಯೆ, ಸಾಪೇಕ್ಷವಾಗಿ ಕಡಿಮೆಯಾಗಿರುವುದು. ಈ ರೀತಿಯ ಶಾಲೆಗಳು, ಹೆಚ್ಚು ರೀತಿಯಲ್ಲಿ, ಖಾಸಗಿ ಶಾಲೆಗಳಾಗಿವೆ. ಸರ್ವ ಶಿಕ್ಷಣ ಅಭಿಯಾನದ ಇಂದಿನ ಪರಿಶ್ರಮದ ಫಲವಾಗಿ, ಸಕಾರಾತ್ಮಕ ಬದಲಾವಣೆ ಕಂಡುಬಂದಿದ್ದು, ವಿಶೇಷ ಅಗತ್ಯತೆಯುಳ್ಳ ಮಕ್ಕಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ, ಶಾಲೆಗಳಲ್ಲಿ ಸೇರುತ್ತಿದ್ದಾರೆ. ಉಲ್ಬಣಿಸಿರುವ/ಗಂಭೀರ ವಿಕಲತೆಯುಳ್ಳ ಮಕ್ಕಳಿಗೆ ಶುಶ್ರೂಷೆಯ ಮತ್ತು ವೈದ್ಯಕೀಯ ಸಹಾಯವು, ಪೂರ್ವ ವಯಸ್ಸಿನಲ್ಲಿಯೇ ಬೇಕಾಗುತ್ತದೆ. ಈ ರೀತಿಯ ಮಕ್ಕಳಿಗೆ, ಗೃಹ ಆಧಾರಿತ ಶಿಕ್ಷಣವು ಸೂಕ್ತವಾಗಿರುವುದು.

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 2

3. ಪಠ್ಯಕ್ರಮದಲ್ಲಿ ಹೊಂದಾಣಿಕೊಳ್ಳಬಹುದ ವಿಧಗಳನ್ನು ತಿಳಿಸಿರಿ (ವ್ಯಾಖ್ಯಾನಿಸಿರಿ)

   ________________________________________
   ________________________________________
   ________________________________________

4. ಒಳಗೊಂಡಂತೆ ಇರುವ ಶಿಕ್ಷಣ ವ್ಯವಸ್ಥೆಯಲ್ಲಿ, ವಿಶೇಷ ಅಗತ್ಯತೆಯುಳ್ಳ ಮಕ್ಕಳು ಎದುರಿಸುವ ಕಠಿಣತೆಗಳು ಯಾವುವು ?

   ________________________________________
   ________________________________________
   ________________________________________

**9.5 ಒಳಗೊಂಡ ಶಿಕ್ಷಣದಲ್ಲಿನ ತರಗತಿಯ ಕಕ್ಷೆಗಳು:**

ಸಾಮಾನ್ಯ ತರಗತಿಗಳಲ್ಲಿ, ವ್ಯವಸ್ಥಿತ ರೀತಿಯಲ್ಲಿ ಏರ್ಪಾಡು ಮಾಡಿದಾಗ, ಎಲ್ಲಾ ಮಕ್ಕಳನ್ನು ತರಗತಿಯಲ್ಲಿ ಒಳಪಡಿಸಬಹುದು. ಈ ರೀತಿಯ ಏರ್ಪಾಡುಗಳನ್ನು ಎಷ್ಟು ಶೀಘ್ರವಾಗಿ ಮಾಡಲಾಗುವುದು. ಫಲಿತವು ಉತ್ತಮಗೊಳ್ಳುವುದು. ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಪರಿಣಿತ ಸಂಪನ್ಮೂಲ ಶಿಕ್ಷಕರು ಮತ್ತು ಸಂಪನ್ಮೂಲ ಕೊಠಡಿಗಳಿರುವುದು, ಆದರ್ಶಪ್ರದವಾಗಿರುತ್ತದೆ. ಒಂದು ವೇಳೆ, ಸಂಪನ್ಮೂಲ ಕೊಠಡಿಯ ವ್ಯವಸ್ಥೆ ಅಸಾಧ್ಯವಾದರೆ, ಲಭ್ಯವಿರುವ ಸಂಪನ್ಮೂಲದೊಳಗೆ, ಈ ರಿತಿಯ ಮಕ್ಕಳನ್ನು ಸೇರಿಸಿಕೊಳ್ಳಬಹುದು. ಯಶಸ್ವಿ ಸೇರಿಸುವಿಕೆಗೆ, ಕೆಲವು ಪ್ರಮುಖ ಅಂಶಗಳನ್ನು ಪರಿಗಣಿಸಬೇಕು. ವಿಶೇಷ ಅಗತ್ಯತೆಯುಳ್ಳ ಮಕ್ಕಳ, ಇಂದಿನವರೆಗಿನ, ಪರಿಷ್ಕೃತ ಮಾಹಿತಿ ವಿವರ, ಮಕ್ಕಳ ಕಲಿಕೆಯ ಸಾಮರ್ಥ್ಯದ ಬಗ್ಗೆ ಶಿಕ್ಷಕರಿಗಿರುವ ಕಾಳಜಿ, ಪೋಷಕರ ಕಾಳಜಿ ಮತ್ತು ಶಿಕ್ಷಕರ ದಕ್ಷತೆ.

**9.5.1 ತರಗತಿಯ ಕೊಠಡಿಯ ಹೊಂದಾಣಿಕೆ ಮತ್ತು ನಿರ್ವಹಣೆ.**

ತರಗತಿಯ ಕೋಣೆಯ ಹೊಂದಾಣಿಕೆ ಮತ್ತು ನಿರ್ವಹಣೆಗಾಗಿ ಗಮನಿಸಬೇಕಾದ ಕೆಲವು ಅಂಶಗಳು.

- ಪೋಷಕರ, ಶಿಕ್ಷಕರ ಮತ್ತು ಸಂಪನ್ಮೂಲ ಶಿಕ್ಷಕರು ಮತ್ತು ಮಕ್ಕಳ ಅಗತ್ಯತೆಗನುಸಾರ, ಇತರೆ ವ್ಯಕ್ತಿಗಳ ನಡುವಣ ಸಮನ್ವಯತೆ.
- ವೈಯುಕ್ತಿಕ (ಮಕ್ಕಳ) ಅಗತ್ಯತೆ ಆಧಾರಿಕ ಬೋಧನೆ.
- ಸಣ್ಣ, ಸಣ್ಣ, ಗುಂಪುಗಳಲ್ಲಿ ಬೋಧನೆ.
- ಸಾಮಗ್ರಿಗಳ ಅಗತ್ಯತೆಗಳು
- ದಸ್ತಾವೇಜುಗಳ ವ್ಯವಸ್ಥೆಗಳು.

ಶಿಕ್ಷಕರಾಗಿ, ತರಗತಿಯಲ್ಲಿನ ಮಕ್ಕಳ, ನಿಮ್ಮ ಪಾಲಗೆ, ಒಂದು ಬಹುದೊಡ್ಡ ಮಾನವ ಸಂಪನ್ಮೂಲವಾಗಿದೆ. ಸಹಕಾರಿ ಮತ್ತು ಸಹಕಾರಿ ಕಲಿಕಾ ವಿಧಾನಗಳನ್ನು ಪರಿಣಾಕಾರಿಯಾಗಿಸಲು, ಮಕ್ಕಳನ್ನು ಉಪಯೋಗಿಸಿಕೊಳ್ಳಿರಿ.

ಕಾಗಸ್ (1994) ರ ಪ್ರಕಾರ, ಸಹಕಾರಿತ್ವದ ಕಲಿಕೆಯೆಂಬುದು, ವಿನ್ಯಾಸಗೊಳಿಸಿದ, ಸಹಪಾಠಿಗಳೊಡನೆ, ಕಲಿಯುವ, ಸಕಾರಾತ್ಮಕ ಮಾನವ ಸಂಬಂಧಗಳ ಮೇಲೆ ಒತ್ತು ನೀಡುವ ಶಿಕ್ಷಣ ವ್ಯವಸ್ಥೆಯಾಗಿದೆ.

ಸಮವಯಸ್ಕರ ಕಲಿಯುವಿಕೆಯ ತಂತ್ರವನ್ನು, ವಿವಿಧ ರೀತಿಯ ವಿಕಲತೆಯುಳ್ಳ ಮಕ್ಕಳ ಮತ್ತು ವಿವಿಧ ಹಂತಗಳಲ್ಲಿ ಬಳಸಬಹುದಾದ ಕಾರ್ಯತಂತ್ರವಾಗಿದೆ. ಆದರೂ, ಈ ದೆಶೆಯಲ್ಲಿ, ಎಲ್ಲಾ ಮಕ್ಕಳನ್ನೂ, ಸಹಕಾರಿ ಕಲಿಕೆಗೆ, ತರಬೇತಿಗೊಳಿಸುವುದು ಮತ್ತು ಅವರ ಪಾತ್ರವನ್ನು ಹೇಳುವುದು ಬಹಳ ಅವಶ್ಯಕವಾಗಿರುತ್ತದೆ. ವಿಕಲತೆಯುಳ್ಳ, ಅದರಲ್ಲೂ, ಬುದ್ಧಿ ಮಾಂದ್ಯ ಇರುವ ಮಕ್ಕಳ ಶಿಕ್ಷಣಕ್ಕಾಗಿ, ಪ್ರತ್ಯೇಕ ವ್ಯಕ್ತಿಗಾಗಿ ತಯಾರಿಸಿದ ಯೋಜನೆ ಅನುಸಾರವಾಗಿ, ಮುಂದುವರಿಯಬೇಕಾಗುವುದು. ತರಗತಿಯಲ್ಲಿರುವ ಮಕ್ಕಳ ರೂಪದಲ್ಲಿ ಶಿಕ್ಷಕರ ಬಳಿ ಹೇರಳವಾದ ಮಾನವ ಸಂಪನ್ಮೂಲವಿದೆ. ಚುರುಕಾಗಿರುವ ಶಿಕ್ಷಕರು, ಈ ಸಂಪನ್ಮೂಲವನ್ನು, ವಿಕಲತೆಯುಳ್ಳ ಮಕ್ಕಳ ಸಹಪಾಠಿ, ಶಿಕ್ಷಣಕ್ಕಾಗಿ ಪರಿಣಾಮಕಾರಿಯಾಗಿ ಬಳಸುವರು. ಇದರಿಂದಾಗಿ, ಶಿಕ್ಷಕರಿಗೆ ಕಾರ್ಯದ ಹೊರೆ ಕಡಿಮೆಯಾಗುವುದಲ್ಲದೆ, ಮಕ್ಕಳೂ ಸಹ (ವಿಕಲತೆಯುಳ್ಳವರೂ, ವಿಕಲತೆ ಇಲ್ಲದವರೂ) ಲಾಭಾನ್ವಿತರಾಗುತ್ತಾರೆ. ವಿಕಲತೆ ಇಲ್ಲದ ಮಕ್ಕಳಿಗೆ, ತಮ್ಮ ಸಹಪಾಠಿಗಳ ಬಗ್ಗೆ (ವಿಕಲತೆಯುಳ್ಳ) ಜವಾಬ್ದಾರಿಯ ಬಗ್ಗೆ ಮತ್ತು ವಿಕಲತೆಯುಳ್ಳ ಮಕ್ಕಳಲ್ಲಿ, ತಮ್ಮ ಸಹಾಯಕ್ಕೆ ಬಂದ ಮಕ್ಕಳ ಬಗ್ಗೆ ಕೃತಜ್ಞತಾಭಾವ ಬೆಳೆಯುತ್ತದೆ.

### 9.5.2 ಸೂಕ್ತವಾದ, ಬೋಧನಾ ಕಲಿಕಾ ಸಾಮಗ್ರಿ ಮತ್ತು ಮಾಹಿತಿ, ಸಂವಹನ ತಂತ್ರಜ್ಞಾನದ ಉಪಯೋಗ.

ವಿಕಲತೆಯುಳ್ಳ ಮಕ್ಕಳೊಡನೆ ಕಾರ್ಯವೆಸಗುವಾಗ, ಕಲಿಕಾ ಬೋಧನಾ ಸಾಮಗ್ರಿಗಳ, ಆಯ್ಕೆ ಮತ್ತು ಉಪಯೋಗಿಸುವಿಕೆಯು, ವಿಶೇಷ ಜಾಗರೂಕತೆಯಿಂದ ಮಾಡಿದಾಗ, ಮಕ್ಕಳು, ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಕಲಿಯಲು, ಮಕ್ಕಳಿಗೆ ಬೇಕಾದ, ಅನುಕೂಲಕರ ರೀತಿಯ ಸಹಾಯಕ ಪರಿಕರಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಬೋಧನಾ ಸಾಮಗ್ರಿಗಳ ಆಯ್ಕೆಯು, ಬೋಧನಾ ಪ್ರಕ್ರಿಯೆಯ ಒಂದು ಪ್ರಮುಖ ಅಂಗವಾಗಿದೆ. ಬೋಧನಾ – ಕಲಿಕಾ ಪ್ರಕ್ರಿಯೆ, ತಂತ್ರವನ್ನು ನಿರ್ಧರಿಸಿದ ನಂತರ, ಬೋಧನಾ ಸಾಮಗ್ರಿಗಳ, ಆಯ್ಕೆ, ಹೊಂದಿಸಿಕೊಳ್ಳುವಿಕೆ ಅಥವಾ ರಚನೆ ಮಾಡುವುದು ಅವಶ್ಯಕ.

ಬೋಧನಾ ಕಲಿಕಾ ಸಾಮಗ್ರಿಗಳ ಆಯ್ಕೆಯಲ್ಲಿ ಪರಿಗಣಿಸಬೇಕಾದ ಅಂಶಗಳು:

- ವಯಸ್ಸಿಗೆ ಸೂಕ್ತತೆ: ಉದಾಹರಣೆಗೆ 10 ವರ್ಷ ವಯಸ್ಸಿನ ಬುದ್ಧಿಮಾಂದ್ಯವುಳ್ಳ, ಕೇವಲ 5 ವರ್ಷದ ವಯಸ್ಸಿನ ಬುದ್ಧಿ ಸಾಮರ್ಥ್ಯವುಳ್ಳ ಮಕ್ಕಳಿಗೆ, ಅವರ ವಯಸ್ಸಿಗೆ ತಕ್ಕದಾದ (10ವರ್ಷ) ಸಾಮಗ್ರಿ ಕೊಡಬೇಕೆ ವಿನಹ, 5 ವರ್ಷದ ಮಕ್ಕಳಿಗೆ ಕೊಡುವ ಆಟಿಕೆಗಳನ್ನಲ್ಲ.
- ಸಕ್ರಿಯ ಭಾಗವಹಿಸುವಿಕೆ: ಮಕ್ಕಳು, ಸಾಮಗ್ರಿಗಳನ್ನು ಉಪಯೋಗಿಸುವಂತೆ ಇರಬೇಕು, ಆವಿಷ್ಕರಿಸಿ ಕಲಿಯುವಂತಿರಬೇಕು.
- ಸೃಜನಾತ್ಮಕ ಉಪಯೋಗ: ಸಾಮಗ್ರಿಗಳು, ಬಹೋಪಯೋಗಿಯಾಗಿರಬೇಕು.
- ಲಭ್ಯತೆ: ಮಕ್ಕಳು, ಮನೆಯಲ್ಲಿ, ವಿಸ್ತರಿತ ಕಲಿಕೆಗಾಗಿ, ಸಾಮಗ್ರಿ ಸುಲಭವಾಗಿ, ಸುಲಭದರದಲ್ಲಿ, ದೊರಕುವಂತಿರಬೇಕು.
- ಮಕ್ಕಳ ಹಂತಕ್ಕೆ ಸೂಕ್ತತೆ: ಮಕ್ಕಳು, ಅವರ ಹಂತಕ್ಕೆ ತಕ್ಕಂತೆ, ಸುಲಭವಾಗಿ ಕೆಲಸ ಮಾಡಬಲ್ಲಂತೆ ಇದ್ದರೆ, ಕಲಿಕೆಯ ಅರ್ಥಪೂರ್ಣವಾಗುತ್ತದೆ.
- ಪ್ರಶಿಕ್ಷಣದ ವರ್ಗಾವಣೆ: ಸಾಮಗ್ರಿಗಳ ಮುಖಾಂತರ ಕಲಿಕ ಪರಿಕಲ್ಪನೆಯನ್ನು, ಇತರ ಸಂದರ್ಭ ಮತ್ತು ಸನ್ನಿವೇಶದಲ್ಲಿ ಸಾಮಾನ್ಯಿಕರಿಸಲು, ಸುಲಭವಾಗಿರಬೇಕು.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ:

ಹಿಂದಿನ ತಲೆಮಾರಿಗೆ ಹೋಲಿಸಿದಾಗ, ಈ ಪೀಳಿಗೆಯ ಮಕ್ಕಳು, ತಂತ್ರಜ್ಞಾನದಲ್ಲಿ ಮುಂದಿದ್ದಾರೆ. ಯಾರೊಂದಿಗಾಗಲಿ, ಎಲ್ಲಿಯೇ ಆಗಲಿ, ಯಾವಾಗಲೇ ಆಗಲಿ, ಸಂವಹನವು, ತಂತ್ರಜ್ಞಾನ ಬೆಳವಣಿಗೆಯಿಂದ ಸುಲಭ ಸಾಧ್ಯವಾಗಿದೆ. ಒಂದು ಗುಂಡಿಯ ಒತ್ತುವಿಕೆಯಿಂದ, ಅನೇಕ ವಿಷಯಗಳನ್ನು ಸಾಧಿಸಬಹುದಾಗಿದೆ. ಈಚಿನ ದಿನಗಳಲ್ಲಿ, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣದಲ್ಲಿ, ತಂತ್ರಜ್ಞಾನದ ಉಪಯೋಗವೂ ಆಗುತ್ತದೆ. ಹಲವಾರು ಶಾಲೆಗಳಲ್ಲಿ, ಗಣಕಯಂತ್ರ ಪ್ರಯೋಗ ಶಾಲೆಗಳಿದ್ದು, ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಹೊಂದಿಕೊಳ್ಳುವಂತೆ, ಅಳವಡಿಸಲಾಗಿದೆ. ಅಂಥ ಮಕ್ಕಳಿಗಾಗಿ,

ಮಾತನಾಡುವ ಪುಸ್ತಕಗಳು ಹಾಗೂ ಗಣಕಯಂತ್ರಗಳು, ವಿಕಲ ಮಕ್ಕಳಿಗಾಗಿ, ವಿಶೇಷ ಗಾಲಿ ಕುರ್ಚಿಗಳು, ಇತ್ಯಾದಿ ಶೈಕ್ಷಣಿಕ ಕಲಿಕೆಗಾಗಿ ಅನೇಕ, ಅಡಕ ಮುದ್ರಿಕೆಗಳು, ಮೃದು ಸಾಧನಗಳು ಹೊರಬರುತ್ತಿವೆ.

## 9.6 ಗೃಹ ಆಧಾರಿತ ಶಿಕ್ಷಣ:

ಈ ಹಿಂದೆ ಹೇಳಿರುವಂತೆ, ಅತಿಹೆಚ್ಚಿನ ವಿವಿಧ ವಿಕಲತೆ ಹೊಂದಿರುವ ಮಕ್ಕಳು, ಶಾಲೆಗೆ ಬರಲು ಬಹಳ ಕಷ್ಟವಾಗುತ್ತದೆ. ಶಿಕ್ಷಣವು, ಒಂದು ಮೂಲಭೂತ ಹಕ್ಕಾಗಿರುವುದರಿಂದ ದೇಶದ ಪ್ರತಿ ಮಗುವೂ ಶಿಕ್ಷಣ ಪಡೆಯಲು, ಈ ರೀತಿಯ ಮಕ್ಕಳಿಗೂ ಸೂಕ್ತ ರೀತಿಯ ಶಿಕ್ಷಣವು ತಲುಪಬೇಕು, ಹೀಗಾಗಿ ಈ ಮಕ್ಕಳ ಮನೆಯಲ್ಲಿ ಶಿಕ್ಷಣ ಪಡೆಯುತ್ತಾರೆ.

### 9.6.1 ಪರಿಕಲ್ಪನೆ:

ಶಿಕ್ಷನದ ಸೌಲಭ್ಯಗಳು ಹೆಚ್ಚುತ್ತಿದ್ದರೂ, ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶಿಕ್ಷಣವು ಅನೇಕ ಸವಾಲುಗಳನ್ನು ಎಸೆಗುತ್ತಿವೆ. ಕೆಲವು ಮಕ್ಕಳ ವಿಕಲತೆಗಳು ಬಹಳ ವಿಷಯವಾಗಿದ್ದು ಮತ್ತು ಸಂಕೀರ್ಣ ಪರಿಸ್ಥಿತಿಯಿದ್ದು, ಮಕ್ಕಳು, ಕಲಿಯಲು ಶಾಲೆಯನ್ನು ತಲುಪಲಾರರು. ದೂರದ ಗ್ರಾಮೀಣ ಪ್ರದೇಶದ, ಗುಡ್ಡಗಾಡಿನ ಮತ್ತು ಅರಣ್ಯ ಪ್ರದೇಶದ ಜನಜಾತೀಯ ಮಕ್ಕಳು, ಶಾಲೆಯನ್ನು ತಲುಪುವುದು ಬಹುಕಷ್ಟವಾಗಿರುತ್ತದೆ. ಕೆಲವು ಸುಂದರ ಪ್ರದೇಶಗಳ್ಳಲಿ, ಈ ವಿಶೇಷ ಅಗತ್ಯತೆ ಇರುವ ಮಕ್ಕಳಿಗೆ, ಶಾಲೆಗಳು ಬಹಳ ದೂರದಲ್ಲಿದ್ದು ಕಷ್ಟವಾಗಿರಬಹುದು. ಈ ಪರಿಸ್ಥಿತಿಯಲ್ಲಿ, ಈ ಮಕ್ಕಳನ್ನು ಶಿಕ್ಷಣವು ತಲುಪಬೇಕು. ಈ ಮಕ್ಕಳನ್ನು ಶಿಕ್ಷಣವು ತಲುಪಬೇಕು. ಈ ಮಕ್ಕಳ ಪರಿವಾರದವರನ್ನು, ಈ ನಿಟ್ಟಿನಲ್ಲಿ ತರಬೇತುಗೊಳಿಸುವುದು ಒಂದು ಮಾರ್ಗವಾಗಿದೆ. ಹೀಗಾಗಿ, ಶಾಲೆಗೆ ಬರಲಾಗದ, ತಲುಪಲಾಗದ, ಮಕ್ಕಳ ಶಿಕ್ಷಣಕ್ಕೆ ಗೃಹ ಆಧಾರಿತ ಶಿಕ್ಷಣವು ಒಂದು ಪರಿಹಾರವಾಗಿದೆ.

9.6.2. ಗೃಹ ಆಧಾರಿತ ಶಿಕ್ಷಣಕ್ಕಾಗಿ ಪ್ರಕ್ರಿಯೆಗಳು ಈ ಪ್ರಕ್ರಿಯೆಯಲ್ಲಿ ಒಬ್ಬ ವಿಶೇಷ ಶಿಕ್ಷಕರು (ಇವರನ್ನು ಯೋಜಿತ ಶಿಕ್ಷಕ ಎನ್ನುವರು), ಮಕ್ಕಳ ಮನೆಗೆ ಭೇಟಿಕೊಟ್ಟು, ಮಕ್ಕಳೊಡನೆ, ತಾನಿರುವ ಪರಿಸರದ ಬಗ್ಗೆ ತಿಳಿಹೇಳುವರು. ಪೋಷಕರು, ಶಿಕ್ಷಕರು ಕೂಡಿ, ಶಿಕ್ಷಕರ ಭೇಟಿಯ ಸಮಯ, ಇತರೆ ವಿಷಯಗಳನ್ನು ನಿರ್ಧರಿಸುವರು. ಎಲ್ಲಾ ವಿಷಯಗಳ ಗುಣಮಾಪನದ ನಂತರ, ಗುರಿ, ಉದ್ದೇಶಗಳ ಅನುರೂಪವಾಗಿ ಶಿಕ್ಷಣದ ಯೋಜನೆಯನ್ನು ಅಭಿವೃದ್ಧಿಪಡಿಸಲಾಗುವುದು. ಆನಂತರ ಪ್ರತ್ಯಕ್ಷಿಕೆಯ ಮೂಲಕ, ಬೋಧನೆಯ ತಂತ್ರಗಳನ್ನು, ಪರಿವಾರದ ಸದಸ್ಯರಿಗೆ ತಿಳಿಸಲಾಗುವುದು. ಈ ಸದಸ್ಯರು ಶಿಕ್ಷಣದ ಜವಾಬ್ದಾರಿವಹಿಸಿಕೊಳ್ಳುವರು. ಶಿಕ್ಷಕರು (ವಿಶೇಷ ಶಿಕ್ಷಕರು), ಮಕ್ಕಳ ಪ್ರಗತಿಯ ಬಗ್ಗೆ, ವಿವರವಾದ ಮಾಹಿತಿಯನ್ನು ದಾಖಲೆಗಳನ್ನು ದಾಖಲಿಸುವರು. ಕೆಲವು ಮಕ್ಕಳಿಗೆ, ವಾಕ್ ಚಿಕಿತ್ಸೆ, ಅಂಗಚಲನಾ ಅಂಶಗಳು, ಮುಂತಾದ ಚಿಕಿತ್ಸೆಗಳು ಬೇಕಾಗಬಹುದು. ಇವೆಲ್ಲವನ್ನೂ ಯೋಜಿತ ಶಿಕ್ಷಕರು ಸಮನ್ವಯಿಸುತ್ತಾರೆ. ಮಕ್ಕಳು ಪ್ರಗತಿ ತೋರುತ್ತಿರುವಂತೆ, ಮುಂದಿನ ಕಾರ್ಯಕ್ರಮಗಳನ್ನು ಯೋಜಿಸಲಾಗುವುದು.

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ – 3

5. ಕಲಿಕಾ–ಬೋಧನಾ ಸಾಮಗ್ರಿಗಳನ್ನು ಆಯ್ಕೆ ಮಾಡುವಾಗ ಪರಿಗಣಿಸಬೇಕಾದ ಅಂಶಗಳಾವುವು?
6. ಗೃಹ ಆಧಾರಿತ ಶಿಕ್ಷಣವು ಯಾರಿಗೆ ಸೂಕ್ತವಾದುದು?

## 9.7 ಕ್ರೂಢೀಕರಿಸೋಣ:

ಈ ಪಠ್ಯ ಭಾಗದಲ್ಲಿ ನಾವು, ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶೈಕ್ಷಣಿಕ ಅವಶ್ಯಕತೆಗಳು ಮತ್ತು ಅದರಲ್ಲಿನ ಸವಾಲುಗಳ ಬಗ್ಗೆ ಚರ್ಚಿಸಿದೆವು. ಅದರಲ್ಲೂ ವಿಕಲತೆಯುಳ್ಳ ಮಕ್ಕಳ ಬಗ್ಗೆ ಚರ್ಚಿಸಿದೆವು. ವಿಕಲತೆಯುಳ್ಳ ಮಕ್ಕಳ ಅವಶ್ಯಕತೆಗಳು ಅವರ ವಿಕಲತೆಯ ವಿಧ ಮತ್ತು ಗಂಭೀರತೆಯ ಆಧಾರದ ಮೇಲೆ ನಿರ್ಧಾರಿತವಾಗುತ್ತವೆ. ದೃಷ್ಟಿ ವಿಕಲತೆ, ಶ್ರವಣ ನ್ಯೂನತೆ, ಅಂಗಚಲನಾ ನ್ಯೂನತೆ, ಬುದ್ಧಿಮಾಂದ್ಯ ಅಥವಾ ವಿಶೇಷ ಕಲಿಕಾ ನ್ಯೂನತೆಗಳು, ಇತ್ಯಾದಿಗಳನ್ನು ಅಗತ್ಯತೆಗಳಿಗನುಸಾರವಾಗಿ, ಶಿಕ್ಷಕರು ಹೊಂದಾಣಿಕೆ ಮಾಡಿ ಎಲ್ಲಾ ಮಕ್ಕಳನ್ನು ಒಳಗೊಂಡಂತೆ, ತರಗತಿ ನಡೆಸಬೇಕು. ಎಲ್ಲಾ ವಿಕಲತೆಯುಳ್ಳ ಮಕ್ಕಳನ್ನು ಶಿಕ್ಷಣದಲ್ಲಿ ಸೇರಿಸಲು, ರಾಷ್ಟ್ರೀಯ, ರಾಜ್ಯ, ಜಿಲ್ಲಾ, ವಿಭಾಗ ಮತ್ತು ಶಾಲಾ ಹಂತಗಳಲ್ಲಿ ಶೈಕ್ಷಣಿಕ ವ್ಯವಸ್ಥೆ ಮಾಡಲಾಗಿದೆ.

ನಮ್ಮ ದೇಶದಲ್ಲಿ, ಪಠ್ಯಕ್ರಮದ ಹತೋಟಿಯು, ಕೇಂದ್ರ ಮತ್ತು ರಾಜ್ಯ ಶಿಕ್ಷಣ ಮಂಡಳಿ ಗಳಲ್ಲಿದೆ. ಅನುತ್ತೀರ್ಣಗೊಳಿಸದೆ ಇರುವ ನೀತಿಯ ಕಾರಣದಿಂದಾಗಿ, ಮಕ್ಕಳು ತಮ್ಮ ಹಂತದಲ್ಲಿ ಇರಬೇಕಾದ ದಕ್ಷತೆಯನ್ನು ಖಚಿತಪಡಿಸಿಕೊಳ್ಳದೆಯೆ, ಮುಂದಿನ ಹಂತಕ್ಕೆ ತೇರ್ಗಡೆ ಹೊಂದುತ್ತಿದ್ದಾರೆ. ಈ ವಿಷಯವು, ವಿಶೇಷ ಅಗತ್ಯತೆಯುಳ್ಳ ಮಕ್ಕಳ ವಿಷಯದಲ್ಲೂ ಸತ್ಯವಾಗಿದೆ. ಈ ವಿಷಯ ಅಗತ್ಯತೆಯುಳ್ಳ ಮಕ್ಕಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ, ಶಿಕ್ಷಕರು, ಪಠ್ಯಕ್ರಮ, ಬೋಧನಾ ವಿಧಾನಗಳು, ಸೂಕ್ತ ಬೋಧನಾ ಕಲಿಕಾ ಸಾಮಗ್ರಿಗಳ ಉಪಯೋಗ ಹಾಗೂ ಗುಣಮಾಪನ/ ಮವಲ್ಯ ಮಾಪನ

ವಿಧಾನಗಳನ್ನು ವಿಶೇಷ ವಿಕಲತೆಯುಳ್ಳ ಮಕ್ಕಳಿಗಾಗಿ, ಸರ್ಕಾರವು ಮಾಡಿರುವ ಪ್ರಾವಧಾನಗಳನ್ನು ಗಮನದಲ್ಲಿರಿಸಿಕೊಂಡು, ಅನುಸರಿಸಬೇಕು. ಹೊಂದಾಣಿಕೆಯಲ್ಲಿ, ಕೆಲವು ಸೇರ್ಪಡೆ, ಕೆಲವು ಬಿಡುವಿಕೆ, ಕೆಲವು ಮಾರ್ಪಾಡುಗಳು ಮತ್ತು ಪಠ್ಯಕ್ರಮದ ವಿಸ್ತರಣೆಗಳನ್ನು ಮಕ್ಕಳ ಅಗತ್ಯತೆಯ ಆಧಾರದ ಮೇಲೆ ಮಾಡಿಕೊಳ್ಳಬೇಕು. ಶಿಕ್ಷಕರು, "ಸಮವಯಸ್ಕರಿಂದ ಕಲಿಯುವಿಕೆ" ವಿಧಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಮಕ್ಕಳಿಗೆ ಸಹಾಯಕರಾಗಬೇಕು.

ವಿಕಲತೆಯಿಂದ ಶಾಲೆಗೆ ತಲುಪಲಾಗದ, ಬರಲಾಗದ ಅಥವಾ ಸುದೂರ ಕ್ಷೇತ್ರಗಳಲ್ಲಿ ವಾಸಿಸುವ ಮಕ್ಕಳಿಗಾಗಿ, ಗೃಹ ಆಧಾರಿತ ಶಿಕ್ಷಣ ಒದಗಿಸಬೇಕು. ಈ ವ್ಯವಸ್ಥೆಯಲ್ಲಿ ಶಿಕ್ಷಕರು ಮಕ್ಕಳ ಮನೆಗೆ ತೆರಳಿ, ಅವರಿಗೆ ಸೂಕ್ತ ಶಿಕ್ಷಣ ಒದಗಿಸಬೇಕು.

## 9.8 ನಿಮ್ಮ ಪ್ರಗತಿ ಪರೀಕ್ಷೆಯ ಮಾದರಿ ಉತ್ತರಗಳು:

1. ಅಂಧತ್ವ, ದೃಷ್ಟಿ ಮಾಂದ್ಯ, ಶ್ರವಣದೋಷ, ಅಂಗಚಾಲನಾ ವಿಕಲತೆಗಳು, ಬೌದ್ಧಿಕ ವಿಕಲತೆ, ಅಭಿವೃದ್ಧಿ ವಿಕಲತೆಗಳು, ಆಟಿಸಂ ಮತ್ತು ಸೆಂಟ್ರಲ್‌ಪ್ಲಾಸಿ, ವಿಶಿಷ್ಟ ಕಲಿಕಾ ನ್ಯೂನತೆ (ಯಾವುದಾದರೂ ನಾಲ್ಕು)
2. ಅನುತ್ತೀರ್ಣತೆ ಇಲ್ಲದಿರುವ ನೀತಿ, ತ್ರಿಭಾಷಾ ನೀತಿ, ತರಗತಿಯಲ್ಲಿನ ಹೆಚ್ಚುಮಂದಿ ಮಕ್ಕಳು (ನಿಮ್ಮ ಅನುಭವದಿಮದ ಹೆಚ್ಚು ವಿಷಯ ಸೇರಿಸಿ)
3. ವಸತಿ, ಮಾರ್ಪಾಡು, ಬಿಡುವಿಕೆ, ಸ್ಥಳಪಲ್ಲಟ, ವಿಸ್ತರಣೆ.
4. ಮಕ್ಕಳು, ಶಾಲೆಗೆ ಸೇರಿದ ನಂತರ, ಕಲಿಯುವುದರಲ್ಲಿ ಹಿಂದುಳಿದಿದ್ದಾರೆ ಅಥವಾ ಬೇರೆಯ ಮಕ್ಕಳಂತೆ ಕಲಿಯುವುದಿಲ್ಲಾ, ಎಂಬ ಕಾರಣಗಳಿಂದಾಗಿ ಶಾಲೆಯನ್ನು ಬಿಡುತ್ತಾರೆ ಅಥವಾ ಶಿಕ್ಷಕರಿಂದ ತಿರಸ್ಕಾರಕ್ಕೆ ಗುರಿಯಾಗುತ್ತಾರೆ. ಸಾಮಾನ್ಯ ಶಾಲೆಗಳಲ್ಲಿ ಯಲ್ಲಿನ ಶಿಕ್ಷಕರು, ವಿಕಲತೆಯುಳ್ಳ ಮಕ್ಕಳನ್ನು ಒಳಗೊಂಡಂತೆ, ಶಿಕ್ಷಣ ನೀಡಲು, ತರಬೇತಿ ಪಡೆದಿರುವುದಿಲ್ಲ, ಇದರಿಂದಾಗಿ, ಈ ಶಿಕ್ಷಕರು ವಿಕಲತೆಯುಳ್ಳ ಮಕ್ಕಳನ್ನು, ವಿಶೇಷ ಸಹಾಯಕ್ಕಾಗಿ, ಕಳುಹಿಸುವಂತೆ ಪೋಷಕರಿಗೆ ತಿಳಿಸುತ್ತಾರೆ. ಮಕ್ಕಳು, ಸಾಮಾನ್ಯ ಶಾಲೆಯಲ್ಲಿ ಉಳಿಯುತ್ತಾರೆ, ಆದರೆ, ಪಠ್ಯಕ್ರಮದ ಹೆಚ್ಚಳದಿಂದಾಗಿ, ಪ್ರಾಥಮಿಕ ತರಗತಿಗಳಿಂದ ತಿರಸ್ಕೃತರಾಗುವರು.
5. ವಯಸ್ಸಿಗೆ ತಕ್ಕದಾದ, ಸಕ್ರಿಯ ಭಾಗವಹಿಸುವಿಕೆ, ಸೃಜನಾತ್ಮಕ ಉಪಯೋಗ, ಲಭ್ಯತೆ, ಹಂತಕ್ಕೆ ತಕ್ಕುದಾದ, ಪ್ರಶಿಕ್ಷಣದ ವರ್ಗಾವಣೆ.
6. ಗಂಭೀರ / ವಿವಿಧ ವಿಕಲತೆಯುಳ್ಳ ಮಕ್ಕಳು ಮತ್ತು ಶಾಲೆಗೆ ಹೋಗಲು ಸಾಧ್ಯವಿಲ್ಲದ ಮಕ್ಕಳು.

## 9.9 ಹೆಚ್ಚಿನ ಓದಿಗೆ ಸಲಹೆಗಳು.


- ಬ್ರೌಡರ್ ಡಿ.ಎಂ. ಮತ್ತು ಸ್ನೇಲ್. ಎಂ. 2 (1983), ಫಂಕ್ಷನಲ್ ಅಕೆಡೆಮಿಕ್ಸ್ ಇನ್ ಎಂ. 3, ಸ್ಲೆಟ್ (ಎಜುಕೇಷನ್), ಇನ್‌ಸ್ಟ್ರಕ್ಷನ್ ಆಫ್ ಸ್ಟೂಡೆಂಟ್ಸ್ ವಿತ್ ಸಿವಿಯರ್ ಡಿಸೆಬಿಲಿಟೀಸ್, ನ್ಯೂಯಾಕ್ ಮ್ಯಾಕ್‌ಮಿಲನ್ ಪಬ್ಲಿಷಿಂಗ್, ಕೊ ಪಿ – 443.
- ಇಲವೆಂತ್ ಫೈವ್ ಇಯರ್ ಪ್ಲಾನ್(2007–12) ಪ್ಲಾನಿಂಗ್ ಕಮೀಷನ್, ಎನ್.ಐ.ಸಿ. ಇನ್ / ಪ್ಲಾನ್ಸ್ /11 ಎಸ್.ಹೆಚ್.ಟಿ.ಎಂ.
- ಜಿ.ಓ.ಐ. ಮಿನಿಸ್ಟ್ರಿ ಆಫ್ ಸೋಶಿಯಲ್ ಜಸ್ಟೀಸ್ ಅಂಡ್, ಎಂಪವರ್‌ಮೆಂಟ್ (1995), ಪರ್‌ಸನ್ಸ್ ವಿತ್ ಡಿಸೆಬಿಟಿ (ಈಕ್ವಲ್ ಆಪರ್‌ಚುನಿಟಿ, ಪ್ರೊಟೆಕ್ಷನ್ ಆಫ್ ರೈಟ್ಸ್ ಅಂಡ್ ಫುಲ್ ಪಾರ್ಟಿಸಿಪೇಷನ್) ಆಕ್ಟ್, ನ್ಯೂದಿಲ್ಲ. ಗೌ ಪ್ರೆಸ್.
- ಜಿ.ಓ.ಐ. ಮಿನಿಸ್ಟ್ರೀ ಆಫ್ ಸೋಷಿಯಲ್ ಜಸ್ಟೀಸ್ ಅಂಡ್ ಎಂಪವರ್‌ಮೆಂಟ್ (1992), ರಿಹಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ ಆಕ್ಟ್, ನ್ಯೂದಿಲ್ಲಿ, ಗೌ. ಪ್ರೆಸ್.
- ಜಾನ್ನಿ ಆರ್ ಅಂಡ್ ಸ್ನೇಲ್ ಎಂ. ಇ. (2003), ಮಾಡಿಫೈಯಿಂಗ್ ಸ್ಕೂಲ್‌ವರ್ಕ್, ಬಾಲ್ಟಿಮೋರ್ ಬ್ರೂಕ್ಸ್ ಪಬ್ಲಿಷಿಂಗ್ ಕೋ. ಪೇಜ್ 18–19
- ಕಾಗನ್, ಎಸ್. (1994), ಕೊ ಆಪರೇಟಿವ್ ಲರ್ನಿಂಗ್ ಸ್ಯಾನ್ ಕ್ಲಮೆಂಟ್, ರಿಸೋರ್ಸ್ ಫಾರ್ ಟೀಚರ್ಸ್.


## 9.10 ಪಠ್ಯಾಂತರ ಅಭ್ಯಾಸ ಪ್ರಶ್ನೆಗಳು:

1. ನೀವು, ನಿಮ್ಮ ಶಾಲೆಯಲ್ಲಿ, ಬೋಧಿಸುವ ವಿಷಯದ, ಪಟ್ಯಪುಸ್ತಕದಿಂದ, ಯಾವುದಾದರು ಒಂದು ಪಾಠ (ಪಠ್ಯಭಾಗ)ವನ್ನು ಆಯ್ದುಕೊಳ್ಳಿರಿ, ಈ ಕೆಳಗಿನ ವಿಕಲತೆಯುಳ್ಳ ಮಕ್ಕಳ ಶಿಕ್ಷಣಕ್ಕಾಗಿ, ಆ ಪಠ್ಯಭಾಗವನ್ನು ಅಳವಡಿಸಿಕೊಳ್ಳಿರಿ, ಅಂಧತೆ, ಶ್ರವಣ ನ್ಯೂನತೆ, ಬೌದ್ಧಿಕ ವಿಕಲತೆ.
2. ನಿಮ್ಮ ಶಾಲೆಯು ಸಂಬಂಧಪಟ್ಟಿರುವ, ಸರ್ಕಾರಿ ಶಿಕ್ಷಣ ಮಂಡಳಿಯು, ವಿಶೇಷ ಅಗತ್ಯತೆಗಳುಳ್ಳ ಮಕ್ಕಳ ಶಿಕ್ಷಣಕ್ಕಾಗಿ ಮಾಡಿರುವ ಪ್ರಾವಧಾನಗಳನ್ನು ಕ್ರೂಢೀಕರಿಸಿ ಬರೆಯಿರಿ.

3. ವಿಶೇಷ ಅವಶ್ಯಕತೆಯುಳ್ಳ ಮಕ್ಕಳನ್ನೂ ಒಳಗೊಂಡಂತೆ ನಿಮ್ಮ ತರಗತಿಯ ಎಲ್ಲಾ ಮಕ್ಕಳೂ ಭಾಗವಹಿಸಬಹುದಾದ ಒಂದು ಆಟವನ್ನು ತಯಾರಿಸಿರಿ.
4. ಸಹಕಾರಿತ್ವ ಕಲಿಯನ್ನು ಅಳವಡಿಸಿಕೊಂಡುಕ್ಕಗೊಳ್ಳಬಹುದಾದ ಒಂದು ಯೋಜನಾ ಕಾರ್ಯವನ್ನು ರೂಪಿಸಿರಿ.

ವಿನ್ಯಾಸ:


| | |
|---|---|
| 10.0 | ಪ್ರಸ್ತಾವನೆ ಪರಿಚಯ |
| 10.1 | ಕಲಿಕಾ ಉದ್ದೇಶಗಳು |
| 10.2 | ಹೊಂದಾಣಿಕೆ ಮಾಡಿಕೊಳ್ಳುವ ಕೌಶಲ್ಯಗಳು |
| 10.2.1 | ಹೊಂದಾಣಿಕೆ ಮಾಡಿಕೊಳ್ಳುವ ಕೌಶಲ್ಯಗಳು ಅರ್ಥ |
| 10.2.2 | ವಾಕ್ ನ್ಯೂನತೆ, ಶ್ರವಣ ನ್ಯೂನತೆಗಳಿಗಾಗಿ ಹೊಮದಾಣಿಕೆ ಮಾಡಿಕೊಳ್ಳುವ ಕೌಶಲ್ಯಗಳು. |
| 10.2.3 | ವೈವಿದ್ಯ ವಿಕಲತೆ/ ಮಿದುಳಿನ ಮಾಂದ್ಯತೆಗಾಗಿ ಹೊಂದಾಣಿಕ ಮಾಡಿಕೊಳ್ಳುವ ಕೌಶಲ್ಯಗಳು. |
| 10.2.4 | ಕಲಿಕಾ ನ್ಯೂನತೆಗಳಿಗಾಗಿ ಹೊಂದಾಣಿಕೆಗಳು |
| 10.2.5 | ಬುದ್ಧಿ ಮತ್ತೆತೆಯ ವಿಕಲತೆಗಾಗಿ ಹೊಂದಾಣಿಕೆಗಳು |
| 10.2.6 | ದೃಷ್ಟಿದೋಷ (ಮಾಂದ್ಯ)ಕ್ಕಾಗಿ ಹೊಂದಾಣಿಕೆಗಳು |
| 10.2.7 | ಅಂಗಚಲನಾ ವಿಕಲತೆಗಳಿಗಾಗಿ ಹೊಂದಾಣಿಕೆಗಳು |
| 10.2.8 | ಶಿಕ್ಷಕರ ಪಾತ್ರ |
| 10.2.9 | ಅಭ್ಯಾಸ |
| 10.3 | ಸಹಾಯಕ ಪರಿಕರಗಳು |
| 10.3.1 | ಸಹಾಯಕ ಪರಿಕರದ ಅರ್ಥ |
| 10.3.2 | ವಿವಿಧ ನ್ಯೂನತೆ ಮತ್ತು ವಿಕಲತೆಗಳಿಗಾಗಿ ಸಹಾಯಕ ಪರಿಕರಗಳ ಕೋಷ್ಟಕ |
| 10.3.3 | ತರಗತಿಯಲ್ಲಿ ಶಿಕ್ಷಕರ ಪಾತ್ರ |
| 10.3.4 | ವಿವಿಧ ವಿಕಲತೆಗಳನ್ನು ಹೊಂದಿರುವ (ಅಂಗಚಾಲನಾ ವಿಕಲತೆ, ಮಿದುಳು, ಪ್ಲಾಸಿ ಸಹಿತ, ವ್ಯಕ್ತಿಗಳಿಗಾಗಿ ಸಹಾಯಕ ಪರಿಕರಗಳು. |
| 10.3.5 | ದೃಷ್ಟಿ ನ್ಯೂನತೆ |
| 10.3.6 | ಕಲಿಕಾ ಕಠಿಣತೆ |
| 10.3.7 | ಶ್ರವಣ ನ್ಯೂನತೆ |
| 10.3.8 | ವಾಕ್ ನ್ಯೂನತೆ |
| 10.4 | ವಿಶೇಷ ವಿಧಾನಗಳು |
| 10.5 | ಕ್ರೂಢೀಕರಿಸೋಣ |
| 10.6 | ನಿಮ್ಮ ಪ್ರಗತಿ ಪರೀಕ್ಷೆಯ ಮಾದರಿ ಉತ್ತರಗಳು |
| 10.7 | ಹೆಚ್ಚಿನ ಓದಿಗೆ ಸಲಹೆಗಳು |
| 10.8 | ಪಠ್ಯಾಂತರ ಅಭ್ಯಾಸ ಪ್ರಶ್ನೆಗಳು. |


## 10.0 ಪ್ರಸ್ತಾವನೆ – ಪರಿಚಯ:

ಹಿಂದಿನ ಅಧ್ಯಾಯಗಳಲ್ಲಿ, ವಿವಿಧ ವಿಕಲತೆಗಳನ್ನು ಹೊಂದಿರುವ ಮಕ್ಕಳಲ್ಲಿ, ಈ ರೀತಿಯ ವಿಕಲತೆಗಳ ಕಾರಣ, ಸ್ವಭಾವ, ವಿಧಗಳು ಹಾಗೂ ಈ ರೀತಿಯ ಮಕ್ಕಳ ಶೈಕ್ಷಣಿ ಅಗತ್ಯತೆಗಳ ಬಗ್ಗೆ ತಿಳಿದುಕೊಂಡಿದ್ದೇವೆ. ವಿಕಲತೆಯು ಯಾವುದೇ ಆಗಲಿ, ಶಾರೀರಿಕ, ಭೌದ್ಧಿಕ, ಸಾಮಾನ್ಯ ಬೋಧನಾ ಪ್ರಕ್ರಿಯೆಯಲ್ಲಿ, ಕಲಿಕೆಗೆ ಅಡಚಣೆಯಾಗುತ್ತವೆ. ಹೀಗಿರುವಾಗ ಈ ರೀತಿ ವಿಕಲತೆಯುಳ್ಳ ಮಕ್ಕಳು, ಸೂಕ್ತವಾದ ಕಲಿಯುವಿಕೆಗೆ ಸಹಾಯಕವಾಗುವ ಬೋಧನಾ ಪದ್ಧತಿಯನ್ನು ವಿನ್ಯಾಸಗೊಳಿಸಬೇಕು. ವಿಕಲತೆಯುಳ್ಳ ಮಕ್ಕಳಲ್ಲಿ, ಹೊಂದಿಕೊಳ್ಳುವ, ಅಥವಾ ಹೊಂದಿಸಿಕೊಳ್ಳುವ ಕೌಶಲ್ಯಗಳು ಬೆಕು, ಹಾಗೆಯೇ ಸಹಾಯಕ ಪರಿಕರಗಳ ಮತ್ತು ವಿಶೇಷ ವಿಧಾನಗಳು, ಶಾಲೆ ಹಾಗೂ ಸಾಮಾಜಿಕ ಪರಿಸರದಲ್ಲಿ ಬೇಕಾಗುತ್ತವೆ. ಈ ಪಠ್ಯ ಭಾಗದಲ್ಲಿ ಈ ವಿಷಯಗಳ ಚರ್ಚಿಸೋಣ.

## 10.1 ಕಲಿಕಾ ಉದ್ದೇಶಗಳು:

ಈ ಪಠ್ಯಭಾಗವನ್ನು ಅಧ್ಯಯಿಸಿದ ನಂತರ ನೀವು.

- ಹೊಂದಾಣಿಕೆಯ ಕೌಶಲ್ಯದ ಅರ್ಥವನ್ನು ವಿವರಿಸಬಲ್ಲಿರಿ.
- ವಿವಿಧ ವಿಕಲತೆಗಳಿಗೆ, ಹೊಂದಾಣಿಕೆಯ ಕೌಶಲ್ಯಗಳನ್ನು ಪಟ್ಟಿಮಾಡಬಲ್ಲಿರಿ.
- ವಿಕಲತೆಯುಳ್ಳ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಶಿಕ್ಷಕರ ಪಾತ್ರವನ್ನು ವಿವರಿಸಬಲ್ಲಿರಿ.
- ಸಹಾಯಕ ಪರಿಕರಗಳ ಅರ್ಥವನ್ನು ವಿವರಿಸಬಲ್ಲಿರಿ.
- ಮಕ್ಕಳ ಪರಿಸರದಲ್ಲಿ, ಸಹಾಯಕ ಪರಿಕರಗಳ ಉಪಯೋಗವನ್ನು ವಿವರಿಸಬಲ್ಲಿರಿ.
- ಉತ್ತಮ ಕಾರ್ಯಕ್ಕಾಗಿ, ವಿಶಿಷ್ಠ ವಿಧಾನ ಉಪಯೋಗವನ್ನು ವಿವರಿಸಬಲ್ಲಿರಿ.

## 10.2 ಹೊಂದಾಣಿಕೆಯ ಕೌಶಶ್ಯಗಳು:

ವಿಕಲತೆಯುಳ್ಳ ಮಕ್ಕಳು ಅನೇಕ ರೀತಿಯ ಅಸಮರ್ಥತೆಗಳನ್ನು ಹೊಂದಿರುತ್ತಾರೆ. ಅವರ ವಿಕಲತೆಗಳಿಂದಾಗಿ, ಈ ಮಕ್ಕಳು, ಇತರೆ ಸಾಮಾನ್ಯ ಮಕ್ಕಳಂತೆ ಜೀವನ ಶೈಲಿಯಲ್ಲಿ ಸಾಗಲಾರರು ಅವರ ವಿಕಲತೆಗಳು, ಅವರ ವೈಯುಕ್ತಿಕ ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಸಮಸ್ಯೆಗಳಾಗುವುವು.

ಹೀಗಾಗಿ, ಈ ಮಕ್ಕಳ ಹೊಂದಾಣಿಕೆ ಮತ್ತು ಕಲಿಕೆಗಾಗಿ, ಹೊಸ ಕೌಶಲ್ಯಗಳನ್ನು ಗಳಿಸಿದಾಗ, ಅವರ ವಿಕಲತೆಗಳನ್ನು ಸರಿದೂಗಿಸಬಹುದು. ಈ ರೀತಿಯ ಹೊಂದಾಣಿಕೆಯ ಕೌಶಲ್ಯಗಳು, ಅವರಿಗೆ, ಶಾಲೆ ಮತತು ದೈನಂದಿನ ಕ್ರಿಯಾ ಕಲಾಪ, ಚಟುವಟಿಕೆಗಳಲ್ಲಿ ಸಹಾಯಕವಾಗುವುವು. ಈ ಮಕ್ಕಳು, ತಮ್ಮ ದೈನಂದಿನ ಚಟುವಟಿಕೆಗಾಗಿ, ಸಾಮಾನ್ಯ ರೀತಿಯ ಬದಲಾಗಿ, ಹೊಸದಾಗಿ ಗಳಿಸಿದ ಪ್ರಕ್ರಿಯೆಗಳನ್ನು ಬಳಸಬೇಕಾಗುತ್ತದೆ. ಈ ರೀತಿಯ ಕೌಶಲ್ಯ ಪಡೆಯುವ ಲಭ್ಯತೆಯು ಮತ್ತೊಂದು ಸಮಸ್ಯೆ. ಮುಕ್ತವಾದ ________ ಇದಕ್ಕೆ ಉತ್ತರ. ಈ ರೀತಿಯ ಹೊಂದಾಣಿಕೆಯು, ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಈ ರಿತಿಯ ಬದಲಾವಣೆಯಲ್ಲಿ ಶಿಕ್ಷಕರ ದಕ್ಷತೆ, ಸಂಪನ್ಮೂಲ, ಬಹಳ ಪ್ರಮುಖ ಪಾತ್ರವಹಿಸುತ್ತದೆ.

### 10.2.1 ಹೊಂದಾಣಿಕೆ ಕೌಶಲ್ಯದ ಅರ್ಥ

"ಹೊಂದಾಣಿಕೆ" ಎಂಬುದು, ವಿಕಲತೆಯಿರುವ ವ್ಯಕ್ತಿಯು ದಕ್ಷತೆ ಗಳಿಸಿಕೊಳ್ಳಲು ಮತ್ತು ವೃದ್ಧಿ ಹೊಂದಲು ಕೌಶಲ್ಯ ಪಡೆಯಲು ಪೋಷಕರು ಮತ್ತು ಶಿಕ್ಷಕರುಗಳು ತೋರಿಸುವ, ಮಾಡುವ, ಸುಲಭ, ಮಾರ್ಗೋಪಾಯಗಳು. ಸ್ವಾಭಾವಿಕ ಸನ್ನಿವೇಶ, ಪರಿಸರದಲ್ಲಿ ಕಲಿಕೆಗಾಗಿ ಮಕ್ಕಳು, ಈ ಹೊಂದಾಣಿಕೆಯನ್ನು ಅನ್ವಯಿಸುಕೊಳ್ಳುವಂತಾಗಬೇಕು. ಈ ಹೊಂದಾಣಿಕೆ ಇಂದ, ಮಕ್ಕಳು (ವಿಕಲತೆಯುಳ್ಳ) ಸ್ವತಂತ್ರ ಜೀವನ ಸಾಗಿಸಬಲ್ಲರು (ಓದುವ, ಬರೆಯುವ ಹಾಗೂ ಲೆಕ್ಕಾಚಾರ) "ಹೊಂದಾಣಿಕೆ"ಯಲ್ಲಿ, ಕೌಶಲ್ಯಗಳನ್ನು ಪುಟ್ಟಪುಟ್ಟ, ಕಾರ್ಯಭಾರಗಳನ್ನಾಗಿ ವಿಭಜಿಸಿದಾಗ, ಕಲಿಕೆಯು ಸುಲಭವಾಗುತ್ತದೆ.

### 10.2.2 ವಾಕ್ ನ್ಯೂನತೆ ಮತ್ತು ಶ್ರವಣ ನ್ಯೂನತೆಯುಳ್ಳ ಮಕ್ಕಳಿಗಾಗಿ, ಹೊಂದಾಣಿಕೆಯ ಕೌಶಲ್ಯಗಳು.

ಈ ರೀತಿಯ ಮಕ್ಕಳು, ಇತರೆ ಸಾಮಾನ್ಯ ಮಕ್ಕಳಂತೆ ಇದ್ದು, ಅರ್ಥಮಾಡಿಕೊಳ್ಳುವ, ಅರಿಯುವ ಸಮಸ್ಯೆ ಹೊಂದಿರುವುದಿಲ್ಲ. ಹೊಂದಾಣಿಗಾಗಿ, ಪ್ರಥಮವಾಗಿ ಅವರ ಮಾನಸಿಕ, ಮನೋಭಾವಗಳನ್ನು ಸರಿಪಡಿಸಿದಾಗ, ಅವರು ಬೇರೆ ಪ್ರಮುಖಕೌಶಲ್ಯಗಳನ್ನು ಕಲಿಯಬಲ್ಲರು. ಗಟ್ಟಿಯಾದ, ಸ್ಪಷ್ಟ ಸಂಭಾಷಣೆಯ ಮೂಲಕ ಶಬ್ಧಗಳ, ಗುಣ ಮತ್ತು ಗಟ್ಟಿತನಗಳನ್ನು, ಸರಿಪಡಿಸಬಹುದು. ಸಾಮಾನ್ಯವಾಗಿ, ಶ್ರವಣ ನ್ಯೂನತೆಯ ಮಕ್ಕಳು, ಅವರ ಪೂರ್ವ ಬಾಲಾವಸ್ಥೆಯಲ್ಲಿ ಮಾತನಾಡುವಿಕೆಯನ್ನು ಗಳಿಸುತ್ತಾರೆ. ಸಂವಹನವು ಅತಿಪ್ರಮುಖವಾದದ್ದು. ಶ್ರವಣವಿಲ್ಲದೆ ಮಾತುಕಲಿಯುವುದು, ಬೇರೆಯೇ ಆಗಿದೆ. ಸಂವಹನದಲ್ಲಿ ಎರಡು ವಿಧ ಶಬ್ಧಸಹಿತ, ಶಬ್ಧರಹಿತ (ಆಂಗಿಕ).

ಶ್ರವಣದೋಷವಿರುವ ಮಕ್ಕಳಜೊತೆಯಲ್ಲಿನ ಸಂವಹನವು ಕೇವಲ, ಶಬ್ಧರಹಿತವಾದದ್ದು, ಚಿಹ್ನೆಗಳ ಭಾಷೆಗಳು. ಎ.ಎಸ್.ಎಲ್. ಅಮೇರಿಕಾ ಚಿಹ್ನಾ ಭಾಷೆ, ಬಿ.ಎಸ್.ಎಲ್. ಬ್ರಿಟೀಷ್ ಚಿಹ್ನೆ ಭಾಷೆ, ಆಂಗಿಕಭಾಷೆ ಮತ್ತು ಮಾತನಾಡುವ ಫಲಕಗಳು. ಇಲ್ಲಿ ಚಿಹ್ನೆಗಳನ್ನು ಕಲಿಸುವುದು, ಉದ್ದೇಶವಲ್ಲ. ಆದರೆ ಚಿಹ್ನೆಗಳ ಮೂಲಕ, ಭಾಷೆ ಕಲಿಸುವುದು. ಉದ್ದೇಶವಲ್ಲ, ಆದರೆ ಚಿಹ್ನೆಗಳ ಮೂಲಕ, ಭಾಷೆ ಕಲಿಸುವುದು, ಇದಕ್ಕೆ ಸಹಾಯಕವಾಗಿ ವಾಚನ ಮತ್ತು ಸಹಾಯಕ ಶ್ರವಣ. ಕನ್ನಡಿಯ ಮುಂದೆ ನಿಂತು, ತುಟಿಗಳ ಚಾಲನೆಯಿಂದ, ಮುಖಭಾವದಿಂದ, ಕಲಿಯಲು ಬಹುಪಾಲು ಸಹಾಯಕವಾಗುವುದು.

### 10.2.3 ವಿವಿಧ ವಿಕಲತೆಗಳು / ಸೆಲೆಬ್ರಲ್ ಪ್ಲಾಸಿ (ಮಿದುಳು ವಿಕಲತೆ) ಇರುವವರಿಗೆ ಹೊಂದಾಣಿಕೆ.

ಸೆಲೆಬ್ರಲ್ ಪ್ಲಾಸ್ (ಮಿದುಳಿನ ವಿಕಲತೆ), ಎಂಬುದು ಮಿದುಳು ಸರಿಯಾಗಿ ಕೆಲಸ ಮಾಡದ ಕಾರಣದಿಂದಾಗುತ್ತದೆ. ವಯಸ್ಸಾದಂತೆ, ವ್ಯಕ್ತಿಯು, ಅಂಗಚಾಲನಾ ಮತ್ತು ಮಾಂಸಖಂಡ ಬಿಗಿತ ಸಮಸ್ಯೆಗಳಿಂದಬಹುದು. 2 ಅಥವಾ 3 ವಿಕಲತೆಯನ್ನು ಹೊಂದಿರುವ ವ್ಯಕ್ತಿಯನ್ನು ವಿವಿಧ ವಿಕಲತೆಯುಳ್ಳವನು ಎನ್ನಬಹುದು ಮತ್ತು ಅವನಿಗೆ, ವಿಶಿಷ್ಠ ವಿಧಾನದಲ್ಲಿ ಶಿಕ್ಷಣ ಬೇಕಾಗುತ್ತದೆ. ಹೀಗಾಗಿ, ಪಠ್ಯಕ್ರಮದಲ್ಲಿ ಹೊಂದಾಣಿಕೆ ಅಗತ್ಯವಾಗುತ್ತದೆ. ಈ ಮಕ್ಕಳು ಮಾಹಿತಿಯನ್ನು ತಮ್ಮ ನೆನಪಿನಲ್ಲಿ (ಅಲ್ಪಕಾಲಿ ಅಥವಾ ದೀರ್ಘಕಾಲಿಕ) ಉಳಿಸಿಕೊಳ್ಳಲು ಸಮಸ್ಯೆ ಎದುರಿಸುತ್ತಾರೆ. ಅವರಿಗೆ ಅಮೂರ್ತ ಚಿಂತನೆಯಲ್ಲಿ ಕಷ್ಟವಾಗುತ್ತದೆ. ಪ್ರತಿ ಮಗುವಿಗೂ ತನ್ನದೇ ಆದ ಮನಸ್ತಿತಿ, ಅನುಭವ ಮತ್ತು ವಿಕಲತೆ ಇರುತ್ತದೆ.

ಈ ರೀತಿಯ, ವಿವಿಧ ವಿಕಲತೆಯುಳ್ಳ ಮಕ್ಕಳನ್ನು ಶಿಕ್ಷಣಕ್ಕೆ ತರಲು, ಪ್ರಯತ್ನಿಸುವ ತಂಡವು, ಪ್ರತಿ ಮಗುವಿಗೆ ಪ್ರತ್ಯೇಕವಾದ ಕಾರ್ಯಕ್ರಮವನ್ನು ರೂಪಿಸಿ, ವ್ಯಾಪಕವಾಗಿ ಕಾರ್ಯಾನ್ವಯ ಗೊಳಿಸಬೇಕು. ಈ ತಂಡದಲ್ಲಿ, ವಿವಿಧ ವೃತ್ತಿಪರರು, ಪರಿವಾರದ ಸದಸ್ಯರು ಮತ್ತು ಕ್ಷೇಮ ಬಯಸುವವರು ಇರುತ್ತಾರೆ. ಈ ರೀತಿ ವಿವಿಧ ರಂಗದಿಂದ ಸದಸ್ಯರಿರುವ ತಂಡವು, ಕೆಳಗಿನವರನ್ನು ಒಳಗೊಂಡಿರುತ್ತದೆ.

- ವಿಶೇಷ ಶಿಕ್ಷಕರು
- ಅಂಗಚಾಲನಾ ತಜ್ಞರು
- ವ್ಯಕ್ತಿಪರ ಚಿಕಿತ್ಸಕರು
- ಮಾನಸಿಕ ತಜ್ಞರು
- ಸಾಮಾಜಿಕ ಕಾರ್ಯಕರ್ತರು
- ಪರಿವಾರದ ಸದಸ್ಯರು

### 10.2.4 ಕಲಿಕಾ ಕಠಿಣತೆಗಳಿಗಾಗಿ ಹೊಂದಾಣಿಕೆ:

ಸಾಮಾನ್ಯ ಪಠ್ಯಕ್ರಮದಲ್ಲಿನ ಹೊಂದಾಣಿಕೆಯು, ವಿಕಲತೆಯುಳ್ಳ ಮಕ್ಕಳು ಕಲಿಯಲು ಸಹಾಯವಾಗುತ್ತದೆ. ಕೆಲವೊಮ್ಮೆ, ಈ ಮಕ್ಕಳನ್ನು ಕಲಿಕೆಯಲ್ಲಿ ಹಿಂದುಳಿದ (ಮಂದ ಕಲಿಕಾರ್ಥಿ)ವರು ಎಂದು ತಪ್ಪಾಗಿ ಎಣಿಸಲಾಗುತ್ತದೆ. ಕಲಿಕೆಯ ಕಠಿಣತೆಗಳಲ್ಲಿ ಅನೇಕ ರೀತಿಯವು ಇವೆ.

- ಡೈಸಿಲೆಕ್ಸಿಯಾ (ವಾಚನ ಕಠಣತೆ): ಮಕ್ಕಳು ಓದುವಾಗ ಕೆಲವು ಶಬ್ಧ, ವಾಕ್ಯಗಳಲ್ಲಿ ಬಿಡಬಹುದು, ಬೇರೆ ಶಬ್ಧಗಳನ್ನು ಪರ್ಯಾಯವಾಗಿ ಅಥವಾ ಅಕ್ಷರಗಳನ್ನು ಶಬ್ಧಗಳನ್ನು ತಿರುಗುಮುರುಗಾಗಿ ಓದಬಹುದು.
- ಡಿಸ್‌ಗ್ರಾಫಿಯಾ (ಬರೆಯುವುದರಲ್ಲಿ ಸಮಸ್ಯೆ) : ಸಾಮಾನ್ಯವಾಗಿರುವ ಲೆಕ್ಕಾಚಾರವನ್ನು ಮಾಡುವಲ್ಲಿನ ಕಠಿಣತೆಗಳು.
- ಗಮನದ ಮನಸ್ಸಿಡುವ (ಏಕಾಗ್ರತೆ) ಕೊರತೆ, ಅತಿಕ್ರಿಯಾಶೀಲ, ಕ್ರಮಬದ್ಧತೆ ಇಲ್ಲದಿರುವಿಕೆ: (ಎ.ಡಿ.ಹೆಚ್.ಡಿ.) ಮನಸ್ಸಿಡುವುದರಲ್ಲಿ ನಿಗಾವಹಿಸುವುದರಲ್ಲಿನ ಸಮಸ್ಯೆ).
  ಈ ಪರಿಸ್ತಿತಿಯಲ್ಲಿ, ಮನಸ್ಸನ್ನು ಏಕಾಗ್ರಗೊಳಿಸುವ ಸಮಯ ಬಹಳ ಸೀಮಿತವಾಗಿದ್ದು, ಮಕ್ಕಳು ಚಡಪಡಿಸುತ್ತಾರೆ. ಈ ಪರಿಸ್ಥಿತಿಯಲ್ಲಿ, ಮಕ್ಕಳು, ಬೇರೆ ಕಡೆಗೆ, ಅಂದರೆ ಅಸಂಬದ್ಧವಾದುದಕ್ಕೆ ಗಮನ ಹರಿಸುತ್ತಾರೆ ಮತ್ತು ವಿಪರೀತ ಕ್ರಿಯೆ ತೋರುತ್ತಾರೆ. ಮಕ್ಕಳು ಒಂದು ಕ್ಷಣವೂ, ಒಂದೆಡೆ ಕುಳಿತುಕೊಳ್ಳಲಾರರು.
- ಡೈಸ್ ಫಾಸಿಯಾ (ಭಾಷಾ ವಿಕಲತೆ): ಇದರಲ್ಲಿ ಎರಡು ರೀತಿಯ ಭಾಷಾ ವಿಕಲತೆ ಇದೆ. ಮಕ್ಕಳು ಭಾಷೆಯನ್ನು ಅರ್ಥಪೂರ್ಣವಾಗಿ ಬಳಸಲಾರರು. ಅಥವಾ ಆಡಿದ ಮಾತುಗಳನ್ನು ಅರ್ಥ ಮಾಡಿಕೊಳ್ಳಲಾರರು. ಈ ರೀತಿಯ ಮಕ್ಕಳಿಗೆ ಶಿಕ್ಷಣ ಕೊಡಲು ಕಾರ್ಯಭಾರ ವಿಶ್ಲೇಷಣೆಯು ಮುಖ್ಯ ವಿಧಾನವಾಗಿದೆ.

ಕಾರ್ಯಭಾರ ವಿಶ್ಲೇಷಣೆ:

- ಶಿಕ್ಷಕರು, ಒಂದು ಕಲಿಕಾ ಕಾರ್ಯಭಾರವನ್ನು ಆಯ್ಕೆ ಮಾಡಿಕೊಳ್ಳಬೇಕು.
- ಈ ಕಾರ್ಯಭಾರವನ್ನು, ನಡವಳಿಕೆ (ವರ್ತನೆ)ಯ ರೂಪದಲ್ಲಿ ಹೇಳಬೇಕು.
- ಒಂದು ಮುಖ್ಯ ಕಾರ್ಯಭಾರವನ್ನು ಸರಳ ಪುಟ್ಟ ಪುಟ್ಟ ಭಾಗಗಳನ್ನಾಗಿಸಿ ಕೌಶಲ್ಯವನ್ನು ಕಲಿಸುವುದು.
- ಹಂತ ಹಂತಗಳಲ್ಲಿ ಬೋಧಿಸುವುದು.

- ಪ್ರತಿಹಂತವನ್ನು ಗಟ್ಟಿಗೊಳಿಸುವುದು.
- ಪ್ರಥಮ ಹಂತವನ್ನು ಕಲಿಯುವುದುರಿಂದ, ಎರಡನೇ ಹಂತವನ್ನು ಕಲಿಯಲು ಪ್ರೇರಣೆ ಸಿಗುವುದು.
- ಪಠ್ಯವನ್ನು ವಿನ್ಯಾಸಗೊಳಿಸಿ, ಪ್ರಸ್ತುಪಡಿಸುವುದು.

### 10.2.5 ಹೊಂದಾಣಿಕೆ ಕೌಶಲ್ಯಗಳು. ಬುದ್ಧಿ ವಿಕಲತೆಯುಳ್ಳವರಿಗೆ.

ವಿಶೇಷ ಶಿಕ್ಷಣದ ಹೊಂದಾಣಿಕೆಯ ಒಂದು ಉದ್ದೇಶವೆಂದರೆ ಬುದ್ಧಿಮಾಂದ್ಯವಿರುವ ಮಕ್ಕಳನ್ನು, ಅವರ ವೈಯಕ್ತಿಕ ಅಗತ್ಯತೆಗಳಾದ, ತಿನ್ನುವುದು, ಕುಡಿಯುವುದು, ಶೌಚಾ ಅಭ್ಯಾಸಗಳನ್ನು, ಹಲ್ಲುಗಳನ್ನು ಉಜ್ಜುವುದು, ಸ್ನಾನ ಮಾಡುವುದು, ಬಟ್ಟೆ ಕೊಡುವುದು, ತಲೆ ಬಾಚಿಕೊಳ್ಳುವುದು ಮುಂತಾದ ಕಾರ್ಯಗಳನ್ನು, ಬೇರೆ ಬೇರೆ ಪರಿಸರಗಳಲ್ಲಿ, ಬೇರೆ ಬೆರೆ ಮಾರ್ಗಗಳಲ್ಲಿ ಮಾಡುವಲ್ಲಿ, ಅವರನ್ನು ತರಬೇತುಗೊಳಿಸುವುದಾಗಿದೆ.

ಉದಾಹರಣೆಗೆ: ನಾವುಗಳು, ಮನೆಯಲ್ಲಿ, ಶಾಲೆಯಲ್ಲಿ, ಹೊಟೆಲ್‌ಗಳಲ್ಲಿ ತಿನ್ನಲು ಕುಡಿಯಲು ಹೋಗುವಾಗ, ಈ ಬುದ್ದಿಮಾಂದ್ಯ ಮಕ್ಕಳನ್ನು, ತಂದೆ ತಾಯಿಗಳಾಗಲಿ, ಸರಿವಾರದ ಇತರರಾಗಲಿ, ಜೊತೆಗೆ ಸೇರಿಸಿಕೊಳ್ಳುವುದಿಲ್ಲ. ಅವರುಗಳನ್ನು ಬೇರೆ ಸಮಾರಂಭಗಳಿಗೆ ಕರೆದೊಯ್ಯುವುದಿಲ್ಲ, ಏಕೆಂದರೆ, ಈ ಮಕ್ಕಳಿಗೆ (ವ್ಯಕ್ತಿಗಳಿಗೆ) ತಿನ್ನುವ, ಕುಡಿಯುವ ಸೂಕ್ತ ಶಿಷ್ಠಾಚಾರವನ್ನು ಕಲಿಸಿರುವುದಿಲ್ಲ. ಹಾಗಾದರೆ, ಈ ರೀತಿಯ ಮಕ್ಕಳಿಗೆ ಕಲಿಸುವುದು ಹೇಗೆ ?

- ಪ್ರತಿ ಕಾರ್ಯಭಾರವನ್ನೂ ವಿಶ್ಲೇಷಿಸಿರಿ.
- ಈ ವಿಶ್ಲೇಷಣೆಯನ್ನು ಉಪಯೋಗಿಸಿ, ಪ್ರತಿ ಕೌಶಲ್ಯವನ್ನೂ, ಪುಟ್ಟ, ಪುಟ್ಟ ಸುಲಭ ಹಂತಗಳಲ್ಲಿ ಕಲಿಸಿರಿ.
- ಕಾರ್ಯಭಾರಕ್ಕೆ ತಕ್ಕುದಾದ, ಬೋಧನಾ ಸಾಮಗ್ರಿಗಳನ್ನು ಉಪಯೋಗಿಸಿರಿ.
- ಮಕ್ಕಳು ಕಲಿತ ಪ್ರತಿ ಹಂತದಲ್ಲೂ, ಗಟ್ಟಿಗೊಳಿಸುವ ತಂತ್ರಗಳನ್ನು/ ಉಡುಗೊರೆ, ಬಹುಮಾನ) ಪಾಲಿಸಿರಿ.

ಈ ವಿಧಾನ ಕ್ರಿಯೆಯನ್ನು ಓದುವಾಗ (ಶೌಚಾಲಯ, ವಿಷ, ಅಪಾಯ ಮುಂತಾದ ಪದಗಳನ್ನು ತೋರಿಸಿ), ಬರೆಯುವಾಗ (ಬಿಂದುಗಳು, ಗೆರೆಗಳು, ಅಕ್ಷರಗಳು ಇತ್ಯಾದಿ) ಮತ್ತು ಅಂಕಗಣಿತ (ಸರಳತೆಯಿಂದ, ಸಂಕೀರ್ಣದೆಡೆಗೆ ಹೊಂದಾಣಿಕೆ).

ಈ ರೀತಿಯಲ್ಲಿ, ಬುದ್ಧಿ ಮಾಂದ್ಯವಿರುವ ಮಕ್ಕಳಿಗೆ, ಅವರ ಕಲಿಕಾ ಪ್ರಕ್ರಿಯೆಯಲ್ಲಿ ಹೊಂದಾಣಿಕೆ ಮಾಡಿಕೊಂಡು, ಬೋಧಿಸುವುದು ಸರಿಯಾಗುವುದು.

### 10.2.6 ದೃಷ್ಠಿ ನ್ಯೂನತೆ (ದೃಷ್ಟಿ ಮಾಂದ್ಯ)

ಈ ದೃಷ್ಠಿ ಮಾಂದ್ಯ ಮಕ್ಕಳಿಗೆ, ನಾವು

- ಬ್ರೈಟ್‌ಲಿಪಿ
- ಹೆಚ್ಚು ದೃಷ್ಠಿ ಪರಿಕರಗಳು
- ದೃಷ್ಠಿ ಮಾಂದ್ಯಕ್ಕೆ ಮಸೂರ (ಲೆನ್ಸ್) ಬಳಕೆ.
- ಅಕ್ಷರಗಳ ಬಿಂಬವನ್ನು ಹಿಗ್ಗಿಸಿ, ಓದಲು ಅನುಮಾಡುವ ವಿಶೇಷ ಕನ್ನಡಕಗಳು.
- ದಪ್ಪ ಅಕ್ಷರ ಮುದ್ರಿತ ಪುಸ್ತಕಗಳು.
- ವಸ್ತುಗಳನ್ನು ಗುರುತಿಸಲು ಅನುವಾಗಲು ಉತ್ತಮ ಬೆಳಕಿನ ವ್ಯವಸ್ಥೆ
- ದೃಷ್ಟಿ ಸರಿಪಡಿಸಲು ಅಕ್ಷಿಪಟಲನ ಶಸ್ತ್ರ ಚಿಕಿತ್ಸೆ.
- ಶುಕ್ಲಪಟಂ ಮತ್ತು ಇತರೆ ತಾತ್ಕಾಲಿಕ ಸಮಸ್ಯೆ ಪರಿಹಾರ.

### 10.2.7 ಅಂಗಚಾಲನಾ ವಿಕಲತೆ:

ಈ ವ್ಯಕ್ತಿಗಳಿಗೆ, ಚಲನಾ ಸಮಸ್ಯೆ, ಕೈಕಾಲುಗಳಣ್ನು ಕಳೆದುಕೊಂಡಿರುವುದು, ಅಂಗಗಳಲ್ಲಿನ ನೋವು, ಕೈಕಾಲುಗಳ ಬಿಗಿತ, ಮುಂತಾದ ಸಮಸ್ಯೆ ಹೊಂದಿರುತ್ತಾರೆ.

ಇವರುಗಳಿಗೆ, ಮುಖ್ಯ ಹೊಂದಾಣಿಕೆ ಎಂದರೆ,

- ಶಕ್ತಿಹೀನ ಮಾಂಸಖಂಡಗಳ ಬಲವರ್ಧನೆಗಾಗಿ, ಮಸಾಜು.
- ಸಾಮಾನ್ಯ ಅಂಗ ಖಂಡಗಳ ಬಲವರ್ಧನೆ.
- ಊರುಗೋಲು, ಕಂಕುಳಿನ ಸಾಧನೆಗಳನ್ನು ಒದಗಿಸುವುದು.
- ಶಸ್ತ್ರಚಿಕಿತ್ಸೆಯ ಮೂಲಕ, ಪಟ್ಟಿ ಅಳವಡಿಸುವುದು, ಮುಂತಾದ ಶಾಶ್ವತ ಪರಿಹಾರದಿಂದ ಚಾಲನೆ ತರುವುದು.

ಈ ರೀತಿಯ ವ್ಯಕ್ತಿಗಳ ನೋವುಗಳನ್ನು ಅಳತೆ ಮಾಡಲಾಗಲಿ, ಪರಿಮಾಣಿಸುವುದಾಗಲಿ ಆಗದು. ನೋವಿನ ಉಪಶಮನವನ್ನು, ನೋವು ನಿವಾರಕಗಳು, ಅಥವಾ ನೋವಿರುವ ಜಾಗಕ್ಕೆ, ಶಾಖ ಅಥವಾ ಥಂಡಿಯ ಶುಶ್ರೂಷೆ, ಇಂದ ಮಾಡಬಹುದು. ಅಂಗಚಾಲನಾ ವಿಕಲತೆಯುಳ್ಳವರಿಗೆ, ಒತ್ತಡದ ಹುಣ್ಣುಗಳು ಆಗುವುವು ಇದನ್ನು ಬೋರಿಕ್ ಪುಡಿ ಮತ್ತು ಹಾಸುಗಳನ್ನು ಬದಲಾಯಿಸಿ ಮತ್ತು ಆರೋಗ್ಯಕರ ವಾತಾವರಣದಿಂದ ತಡೆಗಟ್ಟಬಹುದು.

### 10.2.8 ಶಿಕ್ಷಕರ ಪಾತ್ರ:

ವಿಕಲತೆಯನ್ನು ಹೊಂದಿರುವ ಯಾವುದೇ ಮಗುವು, ಎರಡು ಸಮಸ್ಯೆಗಳನ್ನು ಎದುರಿಸುತ್ತದೆ. ಮೊದಲನೆಯದಾಗಿ, ಇತರೆ ಮಕ್ಕಳಂತೆ, ದೈನಂದಿನ ಚಟುವಟಿಕೆ ಗಳನ್ನು ಮಾಡಲಾಗುವುದಿಲ್ಲ, ಎರಡನೆಯದಾಗಿ, ವಿಕಲತೆಯಿಂದಾಗಿ, ಶಿಕ್ಷಣ ಪಡೆಯುವಲ್ಲಿ ಸವಾಲುಗಳನ್ನು ಎದುರಿಸಬೇಕಾಗುವುದು. ಶಾಲೆಯ ಅಧಿಕಾರಿಗಳು, ಮಕ್ಕಳ ಈ ವಿಕಲತೆಯನ್ನು ಅರ್ಥಮಾಡಿಕೊಂಡು, ಅವರಿಗೆ ಸಹಾಯ ಮಾಡಬೇಕು, ಶಿಕ್ಷಕರು, ಪುಸ್ತಕದಲ್ಲಿರುವ ಜ್ಞಾನ ಮತ್ತು ಮಕ್ಕಳ ನಡುವಿನ ಮಧ್ಯಸ್ಥಿಕರಾಗಿದ್ದು, ಮಕ್ಕಳ ವಿಕಲತೆಯನ್ನು ಗುರುತಿಸಿ, ಅವರ ಸಮಸ್ಯೆಗಳನ್ನು ಪರಿಹರಿಸುವಂತೆ, ತರಬೇತಿಯನ್ನು ಪಡೆದಿರಬೇಕು.

"ತಾರೆ ಜಮೀನ್‌ಪರ್" ಚಲನ ಚಿತ್ರದಲ್ಲಿ, ಶಿಕ್ಷಕರು, ಮಕ್ಕಳ ಸಮಸ್ಯೆಯನ್ನು ಗುರುತಿಸ ದ, ಕಲಿಕಾ ನ್ಯೂನತೆ ಇರುವ ಮಗುವನ್ನು ಶಿಕ್ಷಿಸುವ, ಚಿತ್ರವನ್ನು ಮನೋಜ್ಞವಾಗಿ ಬಿಡಿಸಲಾಗಿದೆ.

ಮಕ್ಕಳ್ಲಿನ ವಿಕಲತೆಗಳನ್ನು ನ್ಯೂನತೆಗಳನ್ನೂ, ಗುರುತಿಸುವಲ್ಲಿ ಸಕ್ಷಮರಾಗಿದ್ದು, ವಿವಿಧ ವಿಧಾನಗಳನ್ನು ಅಳವಡಿಸಿಕೊಂಡು, ಮಕ್ಕಳು, ತಮ್ಮಲ್ಲಿರುವ ಪೂರ್ವ ಅನಿಸಿಕೆಗಳನ್ನು ತೊರೆದು, ಮುಂದುವರೆಯುವಂತೆ ಸಹಾಯ ಮಾಡುವುದು ಶಿಕ್ಷಕರ ಕರ್ತವ್ಯ ಮಕ್ಕಳಲ್ಲಿ ನ್ಯೂನತೆಗಳು ಇದ್ದಾಗ್ಯೂ, ಅವರನ್ನು ಶಿಕ್ಷಣದಲ್ಲಿ ಸಾಧಕರನ್ನಾಗಿಸುವುದು, ಶಿಕ್ಷಕರ ಜವಾಬ್ದಾರಿ ಶಿಕ್ಷಕರು, ಮಕ್ಕಳಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡಬಹುದು. ಮೊದಲ ಹೆಜ್ಜೆಯೆಂದರೆ, ಅವರಲ್ಲಿರುವ ನ್ಯೂನತೆಯನ್ನು ಅರಿಯುವುದು, ಅವರನ್ನು ಪ್ರೋತ್ಸಾಹಿಸುವುದು, ಹೆಚ್ಚುವರಿ ಸಮಯ ಕೊಟ್ಟು, ಬೋಧಿಸುವುದು ಸೂಕ್ತವಾದ ಆಸನ ವ್ಯವಸ್ಥೆ ಮಾಡುವುದು, ವಿವಿಧ ವಿಧಾನ ಬಳಸಿ ಬೋಧಿಸುವುದು ಇತ್ಯಾದಿ.

ನಿಮ್ಮ ಪ್ರಗತಿ ಪರೀಕ್ಷಿಸಿಕೊಳ್ಳಿರಿ.

ಅಭ್ಯಾಸ – 1

ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

1. ಹೊಂದಾಣಿಕೆ ಕೌಶಲ್ಯಗಳು ಎಂದರೇನು ?
2. ಈ ಕೆಳಗಿನ ವ್ಯಕ್ತಿಗಳಿಗೆ (ಮಕ್ಕಳಿಗೆ) ಹೊಂದಾಣಿಕೆ ಕೌಶಲ್ಯಗಳನ್ನು ತಿಳಿಸಿ.
    - ಅಂಗಚಾಲನಾ ವಿಕಲತೆ
    - ಮಿದುಳಿನ ಕಾರ್ಯವೈಫಲ್ಯ
    - ಶ್ರವಣ ನ್ಯೂನತೆ (ಮಾಂದ್ಯತೆ)
    - ದೃಷ್ಟಿ ಮಾಂದ್ಯತೆ.

ಅಭ್ಯಾಸ – 2

ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ.

1. ಸಹಾಯಕ ಪರಿಕರಗಳೆಂದರೇನು?
2. ವಿವಿಧ ವಿಕಲತೆಯುಳ್ಳ ವ್ಯಕ್ತಿಗಳಿಗೆ ಸಹಾಯಕ ಪರಿಕರಗಳನ್ನು ಪಟ್ಟಿಮಾಡಿ.
3. ಶಿಕ್ಷಕರ ಪಾತ್ರ.
4. ಅಂಗಚಾಲನಾ ವಿಕಲತೆ ಮತ್ತು ಮಿದುಳಿನ ಕಾರ್ಯವೈಫಲ್ಯ ಇರುವ ವ್ಯಕ್ತಿಗಳಿಗೆ, ಹೊಂದಾಣಿಕೆ ಕೌಶಲ್ಯಗಳು.
5. ಶ್ರವಣ ಮಾಂದ್ಯ ಮತ್ತು ಕಲಿಕಾ ನ್ಯೂನತೆ ಇರುವ ವ್ಯಕ್ತಿಗಳಿಗಾಗಿ, ಹೊಂದಾಣಿಕೆ ಕೌಶಲ್ಯಗಳು.

## 10.3 ಸಹಾಯಕ ಪರಿಕರಗಳು:

ವಿಕಲತೆಯುಳ್ಳ ಮಕ್ಕಳು, ಅನೇಕ ಕಾರ್ಯಗಳನ್ನು, ಅದರಲ್ಲೂ ತಮ್ಮ ದೈನಂದಿನ ಕಾರ್ಯಗಳನ್ನು ಮಾಡುವುದರಲ್ಲಿ ಬಹಳ ಕಷ್ಟಪಡುತ್ತಾರೆ. ಹೀಗಾಗಿ, ಅವರು ಇತರ ಮಕ್ಕಳಿಗಿಂತ ಹಿಂದುಳಿಯುತ್ತಾರೆ. ಆದ್ದರಿಂದ, ನಾವು ಈ ಮಕ್ಕಳನ್ನು ಇತರ ಮಕ್ಕಳಂತೆಯೇ ಕಾರ್ಯ ಮಾಡಲು, ಸ್ವಾವಲಂಬಿಗಳನ್ನಾಗಿಸಬೇಕು. ಸಹಾಯಕ ಪರಿಕರಗಳು, ಈ ರೀತಿಯ ಮಕ್ಕಳು, ತಮ್ಮ ದೈನಂದಿನ ಚಟುವಟಿಕೆ, ಕಾರ್ಯಗಳನ್ನು ಮಾಡಲು ಸಹಾಯಕವಾಗುವುವು. ಈ ಸಹಾಯಕ ಪರಿಕರಗಳು, ಎರಡು ರೀತಿಯವು. ಮೊದಲನೆಯವು, ವಿಕಲತೆಯುಳ್ಳ ಮಕ್ಕಳು, ತಾವೇ ಉಪಯೋಗಿಸಬಹುದಾದವು, ಎರಡನೆಯವು, ಇನ್ನೊಬ್ಬರ ಸಹಾಯದಿಂದ, ವಿಕಲತೆಯುಳ್ಳ ಮಕ್ಕಳು ಉಪಯೋಗಿಸಬಹುದಾದವು.

ಸಹಾಯಕ ಪರಿಕರಗಳು, ವಿಕಲತೆಯುಳ್ಳ ಮಕ್ಕಳು, ಅವುಗಳಿಂದ ಗರಿಷ್ಠಮಟ್ಟದ ಲಾಭ ಪಡೆಯುವಂತಿರಬೇಕು. ಉದಾಹರಣೆಗೆ ಚಲಿಸುವ (ಓಡಾಡುವ) ವಿಕಲತೆಯುಳ್ಳ ಮಕ್ಕಳು, ಗಾಳಿ ಕುರ್ಚಿಯನ್ನೊ ಅಥವಾ ಕಂಕುಳ ಊರುಗೋಲನ್ನೋ ಉಪಯೋಗಿಸಬಹುದು. ಇವು ಆ ಮಕ್ಕಳ ಕಾಲುಗಳಿಗೆ ಪರ್ಯಾಯವಾಗಿ ಎಲಸ ಮಾಡುತ್ತವೆ. ಹಾಗೆಯ, ಶ್ರವಣದೋಷವಿರುವ ಮಕ್ಕಳು, ಶ್ರವಣಸಾಧನದ ಮೂಲಕ, ಇತರರೊಡನೆ ಬೆರೆತು, ಸ್ಪಷ್ಟವಾಗಿ ಕೇಳಬಲ್ಲರು, ಹೀಗಾಗಿ ಇತರರೊಡನೆ ಸಂಭಾಷಿಸಬಲ್ಲರು, ಸಂಗೀತವನ್ನೊ, ಪ್ರವಚನವನ್ನೂ ಕೇಳಬಲ್ಲರು.

### 10.3.1 ಸಹಾಯಕ ಪರಿಕರಗಳ ಅರ್ಥ

ಸಹಾಯಕ ಪರಿಕರಗಳೆಂದರೆ, ವಿಕಲತೆಯುಳ್ಳ ಮಕ್ಕಳು, ತಮ್ಮ ದೈನಂದಿನ ಚಟುವಟಿಕೆಗಳನ್ನು, ಕಾರ್ಯಗಳನ್ನು, ಉದಾಹರಣೆಗೆ, ಶಿಕ್ಷಣ ಪಡೆಯುವುದು, (ಓದುವುದು, ಬರೆಯುವುದು ಇತ್ಯಾದಿ), ಮಾಹಿತಿ ಪಡೆಯುವುದು, ಪರಿಸರದಲ್ಲಿ ಸ್ವತಂತ್ರವಾಗಿ ನಡೆದಾಡುವುದು, ತನ್ನ ಭೌತಿಕ ಕಾರ್ಯಪ್ರದರ್ಶನಕ್ಕಾಗಿ ಚಟುವಟಿಕೆಗಳಲ್ಲಿ ತೊಡಗುವುದು, ತಮ್ಮ ಆಸೆ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಕಾರ್ಯಗಳಲ್ಲಿ ತೊಡಗುವುದು ಇತ್ಯಾದಿಗಳಿಗೆ, ಸಹಾಯಕವಾಗುವ ವಸ್ತುಗಳು, ಪದಾರ್ಥಗಳು ಎಂದರ್ಥ. ಈ ಪರಿಕರಗಳು ಈ ರೀತಿಯ ಮಕ್ಕಳನ್ನು ಹೆಚ್ಚು ಸ್ವಾವಲಂಬಿಗಳನ್ನಾಗಿಸುವುವು.

### 10.3.2 ನ್ಯೂನತೆ ಮತ್ತು ವಿಕಲತೆಗಳಿಗಾಗಿ ಸಹಾಯಕ ಪರಿಕರಗಳು:

| ನ್ಯೂನತೆ/ ವಿಕಲತೆಗಳ ರೀತಿಗಳು | ಪರಿಕರಗಳು |
|---|---|
| ಅಂಗಚಾಲನಾ ವೈಕಲ್ಯ | ನಿಲ್ಲುವ ಚೌಕಟ್ಟು |
| ಸೆರಿಬ್ರಲ್ ಪ್ಲಾಸಿ (ಮಿದುಳು ವೈಫಲ್ಯ) | ಓಡಾಟದ ಸಹಾಯ, ಗಾಲಿಕುರ್ಚಿ |
| ದೃಷ್ಟಿ ಮಾಂದ್ಯ | ಎಣಿಸುವ ಚೌಕಟ್ಟು (ಅಬಾಕಸ್), ಬ್ರೈಲ್, ಅಂಕಗಣಿತ ಚೌಕಟ್ಟು |
| ಶ್ರವಣ ನ್ಯೂನತೆ | ಶ್ರವಣ ಸಾಧನ, ಸಂವಹನ ಸಾಧನ, ಸಂವಹನ ಫಲಕಗಳು, ವಾಕ್ ಫಲಕಗಳು |
| ವಾಕ್ ನ್ಯೂನತೆ | ತುಟಿ ಚಾಲನಾ ವಾಚನ, ವಾಕ್ ಮಾದರಿಗಳು, ಕನ್ನಡಿಯ ಉಪಯೋಗದಿಂದ ತುಟಿ ಚಾಲನಾ ವೀಕ್ಷಣೆ |
| ವೈವಿಧ್ಯ ವಿಕಲತೆ | ಜಾರುದಾರಿ, ಉತ್ತಮ ಆಸನ ವ್ಯವಸ್ಥೆ, ಓಡಾಡುವ ಸಾಧನ ಗಾಲಿಕುರ್ಚಿ, ಕಂಕುಳ ಸಾಧನ. |
| ಕಲಿಕಾ ನ್ಯೂನತೆ | ದೊಡ್ಡಕ್ಷರಗಳ, ಆಕರ್ಶಕ ಅಕ್ಷರಗಳು, ಚಿತ್ರಗಳು ಮತ್ತು ವಸ್ತುಗಳು |
| ಭೌದ್ಧಿಕ ವೈಕಲ್ಯ | ವಿಕಲತೆಯ ಜೊತೆಗೆ, ಬೇರೆ ಯಾವುದಾದರೂ ವಿಕಲತೆ, ದೃಷ್ಟಿ, ಶ್ರವಣ, ಮುಂತಾದ ವಿಕಲತೆ ಇದ್ದರೆ ಮಾತ್ರ ಸಹಾಯಕ ಪರಿಕರಗಳ ಅಗತ್ಯವಿದೆ, ಇಲ್ಲವದರೆ ಅಗತ್ಯವಿಲ್ಲ |

### 10.3.3 ತರಗತಿಯಲ್ಲಿ ಶಿಕ್ಷಕರ ಪಾತ್ರ

ವಿವಿಧ ವಿಕಲತೆಯುಳ್ಳ ಮಕ್ಕಳಿಗೆ, ಸಹಾಯಕ ಪರಿಕರಗಳೂ, ವಿವಿಧವಾಗಿರುತ್ತವೆ (ವಿಕಲತೆಗೆ ತಕ್ಕಂತೆ)

ಶಿಕ್ಷಕರ ಮೊದಲ ಪಾತ್ರವೆಂದರೆ, ಈ ವಿಕಲತೆಯುಳ್ಳ ಮಕ್ಕಳನ್ನು ತರಗತಿಯಲ್ಲಿ ಸೇರಿಸಿ, ವಸತಿ ಕಲ್ಪಿಸುವುದು. ಭೌದ್ಧಿಕ ವಿಕಲತೆಯುಳ್ಳ ಮಕ್ಕಳಿಗೆ ಯು ಅಥವಾ ವೈ ಆಕಾರದ, ಆಸನ ವ್ಯವಸ್ಥೆ ಮಾಡುವುದು. ದೊಡ್ಡದಾದ, ರಂಗುರಂಗಾದ, ಆಕರ್ಷಕ ಬೋಧನಾ ಕಲಿಕಾ ಸಾಮಗ್ರಿಗಳನ್ನು ಬಳಸುವುದು, ಚಿತ್ರಪಟ, ಮಣಿಗಳು, ಮಿಂಚುವ ಅಟ್ಟೆಗಳು (ಫ್ಲಾಷ್‌ಕಾರ್ಡ್), ಬಹಳ ಉಪಯುಕ್ತವಾದವು. ವೈಯುಕ್ತಿಕವಾಗಿ ಬೋಧಿಸುವುದು, ಮಕ್ಕಳಿಗೆ ಸಹಾಯಕ, ಸೆರಿಬ್ರಲ್ ಪ್ಲಾಸಿ (ಮಿದುಳ ವೈಕಲ್ಯ ಮತ್ತು ವೈವಿಧ್ಯ ವಿಕಲತೆಯುಳ್ಳ ಮಕ್ಕಳಿಗೆ, ಚಾಲನಾ ಸಮಸ್ಯೆ ಮಾತ್ರ ಇರುತ್ತವೆ).

ಮುಕ್ತ, ಅಡತಡೆಯಿಲ್ಲದ ಪರಿಸರ ಮತ್ತು ಉತ್ತಮ ಆಸನ ವ್ಯವಸ್ಥೆಯು, ಈ ಮಕ್ಕಳು ತರಗತಿಯಲ್ಲಿ ಉತ್ತಮವಾಗಿ ಕಲಿಯಲು, ಸಹಾಯವಾಗುತ್ತದೆ. ಶ್ರವಣ ದೋಷ (ನ್ಯೂನತೆ)ಯುಳ್ಳ ಮಕ್ಕಳಿಗಾಗಿ, ಶ್ರವಣ ಸಾಧನ ಹಾಗೂ ವರ್ದಕ ವ್ಯವಸ್ಥೆ ಮಾಡಿದಾಗಗ, ಅವರು ಉತ್ತಮವಾಗಿ ಕಲಿಯಬಲ್ಲರು. ದೃಷ್ಟಿದೋಷವುಳ್ಳ ಮಕ್ಕಳು, ಸಂವೇದನಾ ಶ್ವೇತ ಛಡಿ ಮತ್ತು ಬ್ರೈಲ್ ಸಾಮಗ್ರಿಗಳಿಂದ, ಉತ್ತಮವಾಗಿ ಕಲಿಯಬಲ್ಲರು. ಪ್ರತಿ ವಿಶೇಷ ಶಿಕ್ಷಕರೂ, 2 ಅಥವಾ 3 ವಿಕಲತೆಯನ್ನು ನಿರ್ವಹಿಸುವುದರಲ್ಲಿ ತರಬೇತಿ ಹೊಂದಿರಬೇಕು. ವಿಕಲತೆಯುಳ್ಳ ಮಕ್ಕಳು ಕಲಿಯುವ ಪ್ರಕ್ರಿಯೆಯನ್ನು ಸುಲಭೀಕರಿಸಲು, ಎಲ್ಲಾ ಶಿಕ್ಷಕರ ಸಂಘಟಿಸುವಿಕ ಪರಿಶ್ರಮವು ಅನುಕೂಲಕರವಾಗುವುದು.

**10.3.4 ವೈವಿಧ್ಯಮಯ ವಿಕಲತೆಗಳನ್ನು (ಸೆಂಬ್ರಲ್ ಪ್ಲಾಸಿ, ಅಂಗಚಾಲನಾ ವೈಕಲ್ಯ ಸಮೇತ) ಹೊಂದಿರುವ ವ್ಯಕ್ತಿಗಳಿಗೆ ಸಹಾಯಕ ಪರಿಕರಗಳು.**

ಒಂದಕ್ಕಿಂತ ಹೆಚ್ಚು ವಿಕಲತೆ ಹೊಂದಿರುವುದನ್ನು, ವೈವಿಧ್ಯವಿಕಲತೆ ಎನ್ನಲಾಗುವುದು. ಒಬ್ಬ ವ್ಯಕ್ತಿಗೆ, ಭೌದ್ಧಿಕ ವಿಕಲತೆ ಹಾಗೂ ದೃಷ್ಟಿ ದೋಷವಿರಬಹುದು. ಇನ್ನೊಬ್ಬನಿಗೆ ಶ್ರವಣ ವೈಕಲ್ಯ ಹಾಗೂ ಶಾರೀರಿಕೆ ವಿಕಲತೆ ಇರಬಹುದು. ಈ ರೀತಿಯ ವ್ಯಕ್ತಿಗಳು, ಈ ವಿಕಲತೆಗಳಿಗೆ ಸಂಬಂಧಿಸಿದ ಸಮಸ್ಯೆಗಳಾದ, ಅರ್ಥಮಾಡಿಕೊಳ್ಳುವಿಕೆ, ಚಲನೆ, ಕಲಿಯುವಿಕೆಯ ಹಿಂದುಳಿಯುವಿಕೆ ಮುಂತಾದವುಗಳಿಂದ ಬಳಲುತ್ತಾರೆ ಮತ್ತು ಸ್ವತಂತ್ರವಾಗಿ ಕಾರ್ಯಮಾಡಲಾರರು. ಈ ರೀತಿಯ ವ್ಯಕ್ತಿಗಳಿಗೆ, ಸಹಾಯಕ ಪರಿಕರಗಳು, ಕೆಳಕಂಡಂತಿವೆ.

- ಕುಂಭ ಕುರ್ಚಿಗಳು, (ಶೌಚಕ್ಕೆ, ಆರಾಮದಾಯಕವಾಗಿ ಕೂಡಲು)
- ಗಾಲಿ ಕುರ್ಚಿಗಳು, ನಡೆದಾಡಲು ಸಹಾಯಕವಾಗುವ ಚೌಕಟ್ಟುಗಳು ಕಂಕುಳ ಊರುಗೋಲುಗಳು, ಜಾರುದಾರಿಗಳು, ತ್ರಿಚಕ್ರವಾಹನಗಳು ಇತ್ಯಾದಿಗಳು, ಮುಕ್ತ ಚಲನೆಗೆ ಸಹಾಯಕವಾಗುತ್ತವೆ.
- ಹಲ್ಲುಜ್ಜಲು, ದಂತಧಾವಕದ ಚಿವುಟಗಳು (ಕ್ಲಿಪ್), ಲೇಖನಿ ಹಿಡಿಯಲು ಹಿಡಿಕೆಗಳು, ಇವುಗಳಿಂದ ಹಿಡಿತ ಸರಿಯಾಗುತ್ತದೆ.
- ಪಾಶ್ಚಿಮಾತ್ಯ ಮಾದರಿ ಶೌಚಾಲಯಗಳು (ಕಮೋಡುಗಳು)
- ಈ ಪರಿಕರಗಳು, ಅಗ್ಗರದಲ್ಲಿ ದೊರೆಯುವಂತಿದ್ದು ದುರಸ್ತಿ ಮಾಡಲು ಬರುವಂತಿದ್ದು, ಸ್ವಯಂಸೇವೆ, ಸರ್ಕಾರೇತರ ಸಂಸ್ಥೆಗಳಿಂದ ಸುಲಭವಾಗಿ ಅಥವಾ ಸರ್ಕಾರ ಯೋಜನೆಯಲ್ಲಿ ಉಚಿತವಾಗಿ ದೊರೆಯಬೇಕು.
- ಕಾಲಿಗೆ ಕೊಡುವ ಸಾಧನವು, ಮಂಡಿಯಿಂದ ಕೆಳಕ್ಕೆ, ಹಗುರವಾಗಿರಬೇಕು.
- ಓಡಾಡುವ ಚೌಕಟ್ಟುಗಳು, ನಡೆಯಲು ಸಹಾಯಕವಾಗುವುದು
- ಹಿಡಿಕೆಗಳು
- ಸಾಮಾನ್ಯವಾದ ಕುರ್ಚಿಯನ್ನು ಉಪಯೋಗಿಸಲಾರ ಮಕ್ಕಳಿಗೆ, ಮೂಲೆ ಕುರ್ಚಿಗಳು.

**10.3.5 ದೃಷ್ಟಿ ನ್ಯೂನತೆ (ದೋಷ) ವಿರುವವರಿಗೆ**

ದೃಷ್ಟಿಯ ಅಗತ್ಯತೆ ಇರುವ, ಕಾರ್ಯಗಳನ್ನು ಮಾಡಲಾಗದ ವ್ಯಕ್ತಿಗಳು ಪೂರ್ಣಅಂಧರು. ಕೆಲವರು ದೃಷ್ಟಿ ಮಾಂದ್ಯ ಇರುವವರಿಗೆ, ದೃಷ್ಠಿ ಬಹಳ ಚೆನ್ನಾಗಿಲ್ಲದಿದ್ದರೂ, ಸ್ವಲ್ಪ (ಮಸಕು ಮಸಕಾದ) ದೃಷ್ಟಿ ಇರುತ್ತದೆ. ಈ ರೀತಿಯ ದೃಷ್ಠಿಮಾಂದ್ಯವಿರುವವರ, ಸಹಾಯಕ್ಕಾಗಿ ಕೆಲವು ಪರಿಕರಗಳನ್ನು ಉಪಯೋಗಿಸಿ, ಸ್ವಲ್ಪಮಟ್ಟಿಗೆ ದೃಷ್ಟಿ ತರಬಹುದು. ಕೆಲವು ಸಹಾಯಕ ಪರಿಕರಗಳೆಂದರೆ.

- ಶ್ವೇತ ಕೋಲು – ಮುಕ್ತ ಮತ್ತು ಸುರಕ್ಷಿತ ಚಲನೆಗಾಗಿ.
- ಎಣಿಕೆಗಾಗಿ ಮಣಿ ಚೌಕಟ್ಟು
- ಅಂಕಗಣಿತದ ಚೌಕಟ್ಟು – ಅಂಕಗಣಿತದ ಸಮಸ್ಯೆ ಬಿಡಿಸಲು
- ಬ್ರೈಲ್ – ಉಬ್ಬುಚುಕ್ಕೆ ವ್ಯವಸ್ಥೆ – ಅಂಧರಿಗಾಗಿ (ನಿಧಾನವಾಗಿ ಕಲಿಯಲು)
- ಮಾತನಾಡುವ – ಉಷ್ಣಮಾಪಕ
- ಮಾತನಾಡುವ ಗಡಿಯಾರ (ಕೈಗಡಿಯಾರ)

### 10.3.6 ಕಲಿಕಾ ನ್ಯೂನತೆ (ವಿಕಲತೆ)

ವ್ಯಕ್ತಿಯಲ್ಲಿನ ಕಲಿಕಾ ನ್ಯೂನತೆಗಳಿಂದಾಗಿ, ಅವರು, ನೋಡಿದರನ್ನು ಅಥವಾ ಕೇಳಿದುದನ್ನು, ತಮ್ಮ ಮಿದುಳಿನ, ಸರಿಯಾದ ಭಾಗದಿಂದ ಮಾಹಿತಿಯನ್ನು ವಿಶ್ಲೇಷಿಸುವ, ಅರ್ಥೈಸುವ ಸಾಮರ್ಥ್ಯದಿಂದ ವಂಚಿತರಾಗಿರುತ್ತಾರೆ. ಈ ರೀತಿಯ ಕಠಿಣತೆಯಿಂದಾಗಿ, ಅವರು ಶಾಲಾ ಕಲಿಕೆಯ ಓದುವ, ಬರೆಯುವ, ಗಣಿತ ಮಾಡುವ ಕಲಿಕೆಯ ಮೇಲೂ ದುಷ್ಪರಿಣಾಮ ಉಂಟಾಗುವುದು. ಸಹಾಯಕ ಪರಿಕರಗಳಿಗಿಂತ ಹೆಚ್ಚಾಗಿ, ಅವರಿಗೆ ತರಗತಿಯಲ್ಲಿ ಹೆಚ್ಚಿನ ಸಹಾಯ ದೊರಕಿಸಿಕೊಡಬಹುದು. ಅವೆಂದರೆ.

- ಅವರ ದೃಷ್ಟಿ (ಕಣ್ಣು) ಮತ್ತು ಕಾರ್ಯ (ಕೈಗಳು) ಸಮನ್ವಯಕೆಯಲ್ಲಿ ಸುಧಾರಣೆ.
- ಸರಣಿ ರೀತಿಯ ಸ್ಮರಣೆ (ನೆನಪಿನ) ಸುಧಾರಣೆ.
- ಅಕ್ಷರಗಳ ಸ್ಥಾನ
- ಅವಕಾಶ/ರೂಪಗಳ ಗುರುತಿಸುವಿಕೆ (ಹಿಂದು ಮುಂದಾದಾಗ, ತಲೆಕೆಳಕಾದಾಗ, ಅಥವಾ ತಿರುಗಿಸಿದಾಗ)
- ಚಿತ್ರಗಳನ್ನು ಮತ್ತು ಸ್ಥೂಲ ವಸ್ತುಗಳ ಸರಿಯಾದ ಜೋಡಣೆ
- ಬರೆಯುವಾಗ, ಶ್ರವಣದ ಅಂಶಗಳನ್ನು ಉಪಯೋಗಿಸುವಿಕೆ.
- ಗುಂಪಿನಲ್ಲಿನ ಚಿತ್ರಗಳನ್ನು ನಕಲು (ಬರೆದು) ಮಾಡುವಿಕೆ.

### 10.3.6 ಶ್ರವಣ ನ್ಯೂನತೆ:

ಕೆಲವು ಮಕ್ಕಳಿಗೆ, ಶ್ರವಣ ನ್ಯೂನತೆಗಳಿದ್ದು, ಇದರಿಂದಾಗಿ ಕೇಳುವ (ಕಿವಿಯಿಂದ), ಶಬ್ಧ (ಕೇಳಿದ)ವನ್ನು ಗುರುತಿಸುವ (ಹುಡುಕುವ, ಕಂಡುಹಿಡಿಯುವ) ಮತ್ತು ಶಬ್ಧದ ಅರ್ಥವನ್ನು ಅರ್ಥೈಸಿಕೊಳ್ಳುವ, ಕಠಣತೆಯನ್ನು ಎದುರಿಸುತ್ತಾರೆ. ಇದರಿಂದಾಗಿ, ಭಾಷೆ ಮತ್ತು ಮಾತನಾಡುವ ಸ್ವಾಭಾವಿಕ ಪ್ರಕ್ರಿಯೆಯು ಅಡ್ಡಿಗೊಳ್ಳುತ್ತದೆ. ಈ ಸಮಸ್ಯೆಗಳು ನಿವಾರಣೆಯಾಗದಿದ್ದಲ್ಲಿ, ದೀರ್ಘಕಾಲದಲ್ಲಿ, ಇದರಿಂದ ಉಂಟಾಗುವ ಪರಿಣಾಮಗಳು, ಬಹಳ ವ್ಯಾಪಕವೂ ಗಂಭೀರವೂ ಆಗುತ್ತವೆ. ಇದಕ್ಕಾಗಿ ಸಹಾಯಕ ಪರಿಕರಗಳೆಂದರೆ / ಲಕ್ಷಣಗಳು.

- ಶ್ರವಣ ಸಾಧನ
- ಸುರುಳಿ ಮುದ್ರಿಕೆಗಳು (ಟೇಪ್‌ರಿಕಾರ್ಡರ್), ಊರ್ಧ್ವ ಪ್ರಕ್ಷೇಪಕಗಳು (ಓವರ್ ಹೆಡ್ ಪ್ರೊಜೆಕ್ಟರ್)
- ಮಾತಿನ ಮೆತ್ತಗಳು (ಟಾಕ್‌ಪ್ಯಾಡ್) ಧ್ವನಿಯನ್ನು ಹೆಚ್ಚಿಸುತ್ತವೆ.
- ಗಣಕ ಯಂತ್ರಗಳು.
- ಓವರ್ ಹೆಡ್ ಪ್ರೊಜೆಕ್ಟರ್‌ಗಳಿಂದ, ಅಕ್ಷರ – ಶಬ್ದ (ಕಾಗುಣಿತ) ಬೋಧನೆ.
- ಈ ಮಕ್ಕಳು ಸಾಮಾನ್ಯ ಬುದ್ಧಿವಂತಿಕೆ ಹೊಂದಿರುವರು.

### 10.3.7 ವಾಕ್ ನ್ಯೂನತೆ:

ಭಾಷಾ ಸಂವಹನಕ್ಕೆ ಪ್ರಾಥಮಿಕವಾಗಿ, ಉಪಯೋಗಿಸುವ ಮಾಧ್ಯಮವೆಂದರೆ, ವಾಕ್ ಅಂದರೆ ಮಾತನಾಡುವುದು, ಸಂವಹನದಲ್ಲಿ, ಚಿಹ್ನೆಗಳು (ಸಂಜ್ಞೆ) ಹಾಗೂ ಹಾವಭಾವಗಳನ್ನೂ ಉಪಯೋಗಿಸಲ್ಪಡುವುದು. ಚಿಹ್ನೆ ಹಾಗೂ ಹಾವ – ಭಾವದ, ಭಾಷೆಗಳಿವೆ. ಅಮೇರಿಕನ್ ಸಂಜ್ಞಾ ಭಾಷೆ (ಎ.ಎಸ್.ಎಲ್.) ಬ್ರಿಟೀಷ್ ಸಂಜ್ಞಾ ಭಾಷೆ(ಬಿ.ಎಸ್.ಎಲ್.) ಈ ಕೆಳಕಂಡವು. ವಾಕ್ ನ್ಯೂನತೆ ಉಳ್ಳವರಿಗೆ, ಸಹಾಯಕ ಪರಿಕರಗಳು.

- ಸಂವಹನಾ ಫಲಕಗಳು
- ಬೆರಳು ಸಂಜ್ಞೆಗಳು
- ಮಾತನಾಡುವ ಫಲಕಗಳು
- ಮಿಂಚಿನ ಫಲಕಗಳು (ಫ್ಲಾಷ್ ಬೋರ್ಡ್‌ಗಳು)
- ಚಿತ್ರ ಪಟಗಳು
- ಸೂಚನಾ ಫಲಕಗಳು “ಶೌಚಾಲಯ”, “ಅಪಾಯ”, “ನಿರ್ಗಮನ”, “ಪ್ರವೇಶ”, “ವಿಷಕಾರಿ”

## 10.4 ವಿಶೇಷ ವಿಧಾನಗಳು

ಕೆಲವು ವಿಶೇಷ ವಿಧಾನಗಳು ವಿಕಲತೆಯುಳ್ಳ ವ್ಯಕ್ತಿಗಳು ತಮ್ಮ ಕಠಿಣತೆಗಳನ್ನು ಪರಿಹರಿಸಿಕೊಳ್ಳುವಲ್ಲಿ, ಹೆಚ್ಚಿನ ಪರಿಣಾಮ ಬೀರುವುದಲ್ಲದೆ, ಪರಿಸರದಲ್ಲಿ ಸುಸೂತ್ರವಾಗಿ ಕಾರ್ಯ ನೆರವೇರಿಸಲು ಸಹಾಯವಾಗುತ್ತವೆ. ಗಂಭೀರ ವಿಕಲತೆಯ ಸಂದರ್ಭದಲ್ಲಿ ವೈದ್ಯಕೀಯ ಚಿಕಿತ್ಸೆ ನೀಡಬೇಕು.

- ಸಮಸ್ಯಾತ್ಮಕ ವರ್ತನೆ (ನಡವಳಿಕೆ)ಯ, ಸುಧಾರಣೆ: ಇದರಿಂದ ನಕರಾತ್ಮಕ ವರ್ತನೆಯನ್ನು ಸುಧಾರಿಸಿ, ಬದಲಾಯಿಸಲು ಸಹಾಯಕವಾಗುವುದು.
- ಆಟ, ಕ್ರೀಡಾ ವಿಧಾನದ ಮೂಲಕ ಸುಧಾರಣೆ: ಕ್ರೀಡೆ ಮತ್ತು ಆಟೋಟಗಳು, ಆತಂಕಗಳನ್ನು ಕಡಿಮೆ ಮಾಡುವುದಲ್ಲದೆ, ಶಾರೀರಿಕ ಬಿಗಿತವನ್ನು ಸಡಿಲಗೊಳಿಸುವುದು ಮತ್ತು ವ್ಯಕ್ತಿಗೆ ಪುರಸೊತ್ತು ನೀಡುವುದಲ್ಲದೆ, ಕಾಲಕ್ಷೇಪವೂ ಆಗುತ್ತದೆ.
- ಯೋಗ: ಯೋಗದಿಂದ, ವಿಕಲತೆಯುಳ್ಳ ವ್ಯಕ್ತಿಯು ತನ್ನ ಶಾರೀರಿಕ ಸ್ವಸ್ಥತೆಯನ್ನು ಹೆಚ್ಚಿಸಿಕೊಂಡು, ವಿಕಲತೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿಕೊಳ್ಳಬಹುದು.
- ವಾಕ್‌ಸಮಸ್ಯೆಗಳನ್ನು ಸುಧಾರಿಸುವಿಕೆ: ಈ ಸುಧಾರಣೆಯಿಂದ, ವಿಕಲತೆಯಿಂದ ಬಳಲುತ್ತಿರುವ ವ್ಯಕ್ತಿಯು ಹೆಚ್ಚು ಮುಕ್ತವಾಗಿ, ಸ್ಪಷ್ಟವಾಗಿ ಅಭಿವ್ಯಕ್ತಿಗಳಿಸಲು ಸಹಾಯವಾಗುವುದು.
- ಶಾರೀರಿಕ ಮತ್ತು ಮಾನಸಿಕ ಪ್ರಚೋದನೆ: ಶಾರೀರಿಕ ಸ್ವಾಸ್ಥ್ಯ ಮತ್ತು ಮಾಹಿತಿಯನ್ನು ನೆನಪಿನಲ್ಲಿರಿಸಿಕೊಳ್ಳುವ ದಕ್ಷತೆ ಸುಧಾರಿಸುವುದು.
- ಶಾರೀರಿಕ ಅಭ್ಯಾಸಗಳು ವ್ಯಾಯಾಮ: ಇವುಗಳಿಂದ ಮಾನಸಿಕ ಮತ್ತು ಶಾರೀರಿಕ ಆತಂಕಗಳು ಕಡಿಮೆಯಾಗುವುದು.
- ವಯಸ್ಸಿಗೆ ತಕ್ಕನಾದ, ಸೂಕ್ತ ಚಟುವಟಿಕೆಗಳು: ವಯಸ್ಸಿಗೆ ತಕ್ಕುದಾದ ಚಟುವಟಿಕೆಗಳು, ವಿಕಲತೆಗಳನ್ನು ಅರಿಯಲು ಮತ್ತು ಚಿಕಿತ್ಸೆಯನ್ನು ಕೈಗೊಳ್ಳಲು, ಮೊದಲ ಹೆಜ್ಜೆಯಾಗುತ್ತವೆ.
- ಸರಿಯಾದ ಭಂಗಿ ಮತ್ತು ಸಾಗಿಸುವ ವಿಧಾನ: ಶಾರೀರಿಕ ವಿಕಲತೆಯ ವ್ಯಕ್ತಿಗಳು ಸರಿಯಾದ, ಸುಖಕರವಾದ ಭಂಗಿಯಲ್ಲಿ ಕುಳಿತಾಗ, ನಿಂತಾಗ, ಅವರ ವಿಕಲತೆಗಳು ಆಶ್ಚರ್ಯಕರ ರೀತಿಯಲ್ಲಿ ಉತ್ತಮಗೊಳ್ಳುವುವು.

## 10.5 ಕ್ರೋಢೀಕರಿಸೋಣ:

ಈ ಪಠ್ಯಭಾಗದಲ್ಲಿ, ನೀವು, ವಿಕಲತೆಯುಳ್ಳ ಮಕ್ಕಳಿಗೆ ಶಿಕ್ಷನದಲ್ಲಿ ಸಹಾಯಕವಾಗುವಂತೆ ಉಪಯೋಗಿಸಬಹುದಾದ ಅನೇಕ ಕಾರ್ಯ ತಂತ್ರಗಳ ಬಗ್ಗೆ ತಿಳಿದಿರಿ. ಹೊಂದಾಣಿಕೆ ಕೌಶಲ್ಯಗಳು, ಈ ರೀತಿಯ ಮಕ್ಕಳಿಗೆ ಕಲಿಯಬೇಕಾದ ಅನೇಕ ತಂತ್ರಗಳ ಬಗ್ಗೆ ತಿಳಿಸಿ, ಅನೇಕ ಚಟುವಟಿಕೆಗಳನ್ನು ಕೈಗೊಳ್ಳುವುದನ್ನು ಸಹಾಯ ಮಾಡಿದರೆ, ಸಹಾಯಕ ಪರಿಕರಗಳು, ವಿಕಲಮಕ್ಕಳ ಪರಿಸ್ಥಿತಿಗೆ ಬೇಕಾದ ಪರ್ಯಾಯ ಸಹಾಯಕಗಳನ್ನು ಸೂಚಿಸಿ, ಜೀವನಸುಗುಮಗೊಳ್ಳಲು ಅನುಕೂಲವಾಗುತ್ತವೆ ಎಂಬುದನ್ನು ತಿಳಿದಿರಿ.

ವಿಕಲತೆಯುಳ್ಳ ವ್ಯಕ್ತಿಗಳಿಗೆ, ವಿಶೇಷ ಪ್ರಧಾನಗಳು ಅತ್ಯಗತ್ಯವಾದುವುಗಳು, ಯೋಗ, ಆಟ, ಪರಿವಾರದ ಆಪ್ತಸಲಹೆ, ಶಾರೀರಿಕ ಮತ್ತು ಮಾನಸಿಕ ಪ್ರಚೋದನೆ, ಇವುಗಳು, ವಿಕಲತೆಯುಳ್ಳ ವ್ಯಕ್ತಿಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತವೆ ಮತ್ತು ಅವರು, ಪರಿಸರದಲ್ಲಿ ಸುಗಮವಾಗಿ ಕಾರ್ಯವೆಸಗಲು ಅನುವುಮಾಡಿಕೊಡುತ್ತವೆ. ಅದಲ್ಲದೆ, ಈ ರೀತಿಯ ಮಕ್ಕಳನ್ನು ಉತ್ತಮವಾಗಿ ನೋಡಿಕೊಳ್ಳುವಲ್ಲಿ ಪೋಷಕರಿಗೆ ಸಹಾಯವಾಗುತ್ತವೆ.

ವಿಕಲತೆಯುಳ್ಳ ಮಕ್ಕಳ ಶಿಕ್ಷಣದಲ್ಲಿ, ಶಿಕ್ಷಕರ ಪಾತ್ರ ಅನಿವಾರ್ಯವಾದದ್ದು, ಶಿಕ್ಷಕರಿಗೆ, ವಿವಿಧ ರೀತಿಯ ವಿಕಲತೆಗಳ ಜ್ಞಾನವಿರಬೇಕು ಮತ್ತು ವಿವಿಧ ವಿಧಾನಗಳನ್ನು ಅನುಸರಿಸಿ, ಈ ಮಕ್ಕಳು, ಇತರೆ ಸಾಮಾನ್ಯ ಮಕ್ಕಳಂತೆ ಶಿಕ್ಷಣ ಪಡೆಯಲು ಸಹಾಯ ಮಾಡಬೇಕು.

ಬೇರೆ ಬೇರೆ ವಿಕಲತೆಗಳಿಗಾಗಿ, ಬೇರೆ ಬೇರೆಯಾದ ಹೊಂದಾಣಿಕೆ ಕೌಶಲ್ಯಗಳು ಮತ್ತು ಸಹಾಯಕ ಪರಿಕರಗಳಿವೆ. ಇವುಗಳನ್ನು ಸರಿಯಾಗಿ ಕಾರ್ಯಾನ್ವಯಗೊಳಿಸಿದಲ್ಲಿ, ಗರಿಷ್ಠ ಮಟ್ಟದಲ್ಲಿ ಲಾಭ ಪಡೆಯಬಹುದು.

## 10.6 ನಿಮ್ಮ ಪ್ರಗತಿ ಪರೀಕ್ಷೆಯ ಮಾದರಿ ಉತ್ತರಗಳು:

**ಅಭ್ಯಾಸ: 1**

1. ವಿಕಲತೆಯ ಅನುಸಾರವಾಗಿ ಹೊಂದಾಣಿಕೆಯಾದ ಕೌಶಲ್ಯಗಳನ್ನು, ಹೊಂದಾಣಿಕೆ ಕೌಶಲ್ಯಗಳು ಎನ್ನುತ್ತೇವೆ. ಈ ಕೌಶಲ್ಯಗಳು, ಎನ್ನುತ್ತೇವೆ. ಈ ಕೌಶಲ್ಯಗಳು, ವಿಕಲತೆಯುಳ್ಳವರು ದೈನಂದಿನ ಜೀನವದಲ್ಲಿ ಓದುವುದು, ಬರೆಯುವುದು ಮತ್ತು ಪರಿಸರಕ್ಕೆ ಹೊಂದಿಕೊಳ್ಳುವುದರಲ್ಲಿ, ಈ ಕೌಶಲ್ಯಗಳು ಮಹತ್ವದ ಪಾತ್ರವಹಿಸುತ್ತವೆ. ಈ ಕೌಶಲ್ಯಗಳು ವಿಕಲತೆಯಿಂದ ವಿಕಲತೆಗೆ ಬದಲಾಗುತ್ತವೆ.
2. ಎ) ಅಂಗ ಚಲನಾ ವಿಕಲತೆ: ಇದಕ್ಕೆ ಬೇಕಾದ ಹೊಂದಾಣಿಕ ಕೌಶಲ್ಯಗಳೆಂದರೆ, ಕಾರ್ಯಭಾರ ವಿಶ್ಲೇಷಣೆ, ಪಾಠಯೋಜನೆ, ಇವುಗಳಿಂದ, ಕಡಿಮೆ ಬುದ್ಧಿ ಮತ್ತೆತೆ ಇರುವ ಮಕ್ಕಳ ಸಂದರ್ಭದಲ್ಲಿ ಅನುಕೂಲಕರ.

   ಬಿ) ಸೆರೆಬ್ರಲ್ ಪ್ಲಾಸಿ: ಬೇರೆ ಯಾವುದೇ ವಿಕಲತೆ ಇಲ್ಲವಾದರೆ, ಸಾಮಾನ್ಯವಾಗಿ ಬಳಸುವ ಶಿಕ್ಷಣ ವಿಧಾನ ಉಪಯೋಗಿಸಬಹುದು. ಯಾವ ರೀತಿಯ ಹೊಂದಾಣಿಕೆ ಸಾಧ್ಯವಿಲ್ಲ. ದೃಷ್ಟಿ – ಕಾರ್ಯ ಸಮನ್ವಯ ಸುಧಾರಣೆ.

   ಸಿ) ಶ್ರವಣ ನ್ಯೂನತೆ (ಶ್ರವಣ ಮಾಂದ್ಯ ಮತ್ತು ಕಿವುಡು) ಮೂರ್ಛೆ, ಬುದ್ಧಿಮಾಂದ್ಯದಿಂದ ಕೂಡಿದ್ದರೆ, ಸಾಮಾನ್ಯ ಬೋಧನಾ ಪದ್ಧತಿ (ವಿಧಾನ)ಯ ಜೊತೆಗೆ, ವಿಶೇಷ ವಿಧಾನಗಳನ್ನು ಬಳಸಬೇಕು. ವೈಯುಕ್ತಿಕ ಕೌಶಲ್ಯಗಳು.

   ಡಿ) ದೃಷ್ಟಿನ್ಯೂನತೆ (ದೃಷ್ಟಿಮಾಂದ್ಯ, ಅಂಧರೆ): ಬ್ರೈಲಿ ಕಲಿಕೆ, ಪಾಠ್ಯಕ್ರಮ ಹೊಂದಾಣಿಕೆ, ಗಣಕ ಚೌಕಟ್ಟು ತರಗತಿಯಲ್ಲಿ ವಿಶೇಷ ಅನುಕೂಲತೆ, ಅಡಚಣೆ ಇಲ್ಲದ ಓಡಾಟಕ್ಕೆ ಪರಿಸರ.

**ಅಭ್ಯಾಸ – 2**

1. ವಿಕಲತೆಯುಳ್ಳ ಮಕ್ಕಳ ದೈನಂದಿನ ಚಟುವಟಿಕೆಯಲ್ಲಿ ಸಹಾಯಕವಾಗುವ ಪರಿಕರಗಳು, ಈ ಪರಿಕರಗಳು ಪೂರಕವಾಗಿ ಕಾರ್ಯ ಮಾಡುತ್ತವೆ. ಇದರಲ್ಲಿ ಎರಡು ವಿಧ (1) ವ್ಯಕ್ತಿಯೇ ಉಪಯೋಗಿಸುವ ಪರಿಕರ (2) ಮತ್ತೊಬ್ಬರ ಸಹಾಯದಿಂದ ವಿಕಲ ವ್ಯಕ್ತಿಯ ಉಪಯೋಗಿಸಬಹುದಾದ ಪರಿಕರ.
2. ಎ) ಅಂಗಚಾಲನಾ ವಿಕಲತೆ: ಕಂಕುಳಗೋಲು, ಮೂಲೆ ಆಸನ ಸಮಾಂತರ ಸರಳುಗಳು.

   ಬಿ) ವಾಕ್ ನ್ಯೂನತೆ: ತುಟಿ ಚಾಲನಾ ತರಬೇತಿ, ಶ್ರವನ ಚಿಕಿತ್ಸಾ ವಿಧಾನ, ಶ್ರವಣ ಸಾಧನ, ಮಾತನಾಡುವ ಫಲಕಗಳು, ಸಂಜ್ಞಾಭಾಷೆ.

   ಸಿ) ಕಲಿಕಾ ನ್ಯೂನತೆಗಳು: ದೊಡ್ಡದಾದ, ಆಕರ್ಶಕ ಅಕ್ಷರ ಮಾದರಿಗಳು, ಹೊಂದಿಸುವ ಚಿತ್ರಗಳು ಮತ್ತು ವಸ್ತುಗಳು

   ಡಿ) ವಿವಿಧ ವೈಕಲ್ಯ: ಜಾರುದಾರಿ, ಉತ್ತಮ ಆಸನ ವ್ಯವಸ್ಥೆ, ಕಂಕುಳಗೋಲು, ಓಡಾಡುವ ಸಾಧನ, ಗಾಲಿಕುರ್ಚಿ.

   ಇ) ದೃಷ್ಟಿ ವಿಕಲತೆ : ಪಠ್ಯಕ್ರಮ ಹೊಂದಾಣಿಕೆ, ಪಾಠ ಯೋಜನೆ, ಶ್ವೇತಕೋಲು, ವಿಶೇಷ ಕನ್ನಡಕ, ಪರೀಕ್ಷೆಯಲ್ಲಿ ಬರೆಯುವ ಸಹಾಯಕ, ಗಣ ಚೌಕಟ್ಟು, ಬ್ರೈಲ್ ತರಬೇತಿದಾರ.
3. ಶಿಕ್ಷಕರ ಪಾತ್ರ: ವಿಶೇಷ ಶಿಕ್ಷಕರು, ಮಕ್ಕಳ ಸಮಸ್ಯೆ ಅರಿಯುವಂಥವರಾಗಿರಬೇಕು. ಶಿಕ್ಷಕರು ಕಲಿಕೆಯ ಮಧ್ಯವರ್ತಿಗಳು, ಮಕ್ಕಳ ಅಗತ್ಯತೆಗಳನ್ನು ಅರಿಯುವರಾಗಿರಬೇಕು. ಶಿಕ್ಷಕರು, ಮಕ್ಕಳು ತಮ್ಮ ಪೂರ್ವ ಕೀಳರಮೆಯನ್ನು, ಬಿದುವಂತೆ ಪ್ರೇರೇಪಿಸುವ, ಪ್ರೋತ್ಸಾಹಕರಾಗಿರಬೇಕು. ಶಿಕ್ಷಕರು, ಅನೇಕ ರೀತಿಯಲ್ಲಿ ಮಕ್ಕಳಿಗೆ ಸಹಾಯಕರಾಗಬಹುದು.

**ಅಭ್ಯಾಸ – 3**

2. ವಿಶೇಷ ವಿಧಾನಗಳು:

ಕೆಲವೊಂದು ವಿಧಾನಗಳು ವಿಕಲತೆಯುಳ್ಳ ವ್ಯಕ್ತಿಗಳ ಮೇಲೆ ಪರಿಣಾಮಕಾರಿ ಯಾಗಿರುವುದಲ್ಲದೆ, ಅವರು ಪರಿಸರದಲ್ಲಿ ಸುಸೂತ್ರವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುತ್ತವೆ.

ಎ) ಪರಿವಾರದ ಆಪ್ತಸಲಹೆ

ಬಿ) ಕ್ರೀಡೆ, ಆಟಗಳು

ಸಿ) ಯೋಗ

ಡಿ) ಶಾರೀರಿಕ ವ್ಯಾಯಾಮ

ಇ) ಸರಿಯಾದ ಭಂಗಿ ಮತ್ತು ಸಾಗಾಣಿಕೆ

ಎಫ್) ಗಂಭೀರ ವಿಕಲತೆಗಳಿಗೆ, ವೈದ್ಯಕೀಯ ಚಿಕಿತ್ಸಾ ಸೌಲಭ್ಯ

## 10.7 ಹೆಚ್ಚಿನ ಅಧ್ಯಯನಕ್ಕೆ ಸಲಹೆಗಳು:


- ಸ್ಪೆಷಲ್ ಎಜುಕೇಷನ್ ಫಾರ್ ಮೆರಿಟಲಿ ಹ್ಯಾಂಡಿಕ್ಯಾಪ್ಡ್ ಪ್ಯೂಪಿಲ್ಸ್, ಎ. ಟಿಚಿಂಗ್ ಮಾನ್ಯುಯಲ್ 1987 ಟ್ರೈಮ್ಸ್ ಮಿರಲ್.
- ಹೆಲ್ಪ್‌ಮಿ ಟು ಹೆಲ್ಪ್ ಮೈಲ್ಡ್ : ಜಿಲ್ ಬ್ಲೂಮ್ ಬ್ರೆನ್ ಮತ್ತು ಕಂ 2001 ಮಾಗ್ರೊಕಂ
- ಕ್ಲಾಸ್ ಮ್ಯಾನೇಜ್‌ಮೆಂಟ್ ಅಂಡ್ ಕಂಟ್ರೋಲ್ – ಎ ಟೀಚಿಂಗ್ ಸ್ಕಿಲ್ಸ್ ವರ್ಕ್‌ಬುಕ್ 2010, ಜರ್ನಲ್ ಆಫ್ ಸೈಕಾಲಜಿ ಎಕ್ಸ್ಟ್ರಾಕ್ಟ್: ಎಬಿಲಿ ಸ್ಟುವರ್ಟ್, ಡಬ್ಲ್ಯೂ
- ಡಿ.ಇ.ಎಸ್. ಟೀಚರ್ ಎಜುಕೇಷನ್ ಪ್ರಾಜೆಕ್ಟ್ ಪೋಕ್‌ಬುಕ್ಸ್ ಇ.ಸಿ. ರ್ಯಾಗ್ ಎನ್‌ಐ ಎಮ್‌ಹೆಚ್. ಪಬ್ಲಿಷಿಂಗ್ 1989.
- ಟೆಕ್ಸ್ಟ್ ಬುಕ್ ಆನ್ ಫಿಜಿಯೋಥೆರಫಿ, ಡಿಎಸ್‌ಇಎಮ್‌ಆರ್ ಕೋರ್ಸ್ ಬುಕ್ 1993 ಪಬ್ಲಿಷಿಂಗ್ ಎನ್‌ಐಎಂ ಹೆಚ್.
- ಮೂವಿಂಗ್ ಅವೇ ಫ್ರಮ್ ಲೇಬರ್ಸ್ : ಇಂದುಮತಿ ರಾವ್ ವಿದ್ಯಾ ಪ್ರಮೋದ್ 2010 ಸಿಬಿಆರ್ ಪಬ್ಲಿಷಿಂಗ್
- ಅಸಿಸ್ಟ್‌ವ್ ಡಿ ವೈಸಸ್ ಅಂಡ್ ಥೆರಪಿ – ಬುಕ್ – ಎಫ್.ಸಿ.ಇಡಿ, ಕೋರ್ಸ್ ಮೆಟೀರಿಯಲ್ 2009 ಇಗ್ನೂ ಸ್ಟಡಿಮೆಟೀರಿಯಲ್


## 10.8 ಪಠ್ಯಾಂತ ಅಭ್ಯಾಸ ಪ್ರಶ್ನೆಗಳು:

ವಿಶೇಷ ವಿಧಾನಗಳ ಬಗ್ಗೆ ಟಿಪ್ಪಣಿ ಬರೆಯಿರಿ.